
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ



ಕಾರ್ಲ್ ಮಾರ್ಕ್ಸ್
ದ್ವಿ ಶತಮಾನೋತ್ಸವ
ಆರಂಭ ಮೇ-೫

ಸಂಪುಟ 11 | ಸಂಚಿಕೆ 19 | ಪುಟ 16 | ಮೇ 1-7, 2017 | ರೂ. 10/-

web: www.janashakthi.co.in | e-mail : js_weekly@yahoo.com



ಯಶಸ್ವಿ ರೈತ ಸಂಘದ ಸಮ್ಮೇಳನ



ಮೇ ದಿನ ಶೋಷಕರಿಗೆ ಸಿಂಹಸ್ವಪ್ನ

ಪಾತಾಳಗಂಗೆ ಅವೈಜ್ಞಾನಿಕ ಅಪಾಯಕಾರಿ

ಭಜರಂಗಿಗಳಿಗೆ ಭಯವೇ ಬಂಡವಾಳ!



ಫ್ರೆಂಚ್ ಚುನಾವಣೆ: ಅತ್ತ ದರಿ ಇತ್ತ ಪುಲಿ



'ಅಚ್ಛೇ ದಿನಗಳ ಜಂಗಲ್‌ರಾಜ್'

ಸಿಐಟಿಯು ಮೇದಿನ 2017 ಪ್ರಣಾಳಿಕೆಯ ಕರೆ

ಎಲ್ಲ ಶ್ರಮಜೀವಿಗಳ ನಿಜವಾದ ಶತ್ರುಗಳನ್ನು ಗುರುತಿಸಿ, ಶೋಷಕ ವ್ಯವಸ್ಥೆಯನ್ನು ಬದಲಿಸುವ ಹೋರಾಟದ ಒಗ್ಗಟ್ಟನ್ನು ಆಳಗೊಳಿಸಿ

ಕಾರ್ಮಿಕ ವರ್ಗದ ಮತ್ತು ಎಲ್ಲ ಶ್ರಮಜೀವಿ ವಿಭಾಗಗಳ ನಿಜವಾದ ಶತ್ರು ಎಂದರೆ ಬಂಡವಾಳಶಾಹಿ ವ್ಯವಸ್ಥೆ ಮತ್ತು ಆ ವ್ಯವಸ್ಥೆಯನ್ನು ಅನುಸರಿಸುವ ರಾಜಕಾರಣ ಹಾಗೂ ಶಕ್ತಿಗಳು. ಇದನ್ನು ದೇಶದ ಕಾರ್ಮಿಕ ವರ್ಗ ಗುರುತಿಸಬೇಕು ಮತ್ತು ಈ ಶೋಷಣಾತ್ಮಕ ವ್ಯವಸ್ಥೆಯನ್ನು ಬದಲಿಸುವ ಹೋರಾಟಕ್ಕೆ ಸಿದ್ಧವಾಗಬೇಕು ಎಂದು ದೇಶದ ಪ್ರಮುಖ ಕೇಂದ್ರೀಯ ಕಾರ್ಮಿಕ ಸಂಘಟನೆ ಸಿಐಟಿಯು 2017ರ ಮೇದಿನದ ಪ್ರಣಾಳಿಕೆಯಲ್ಲಿ ದೇಶದ ಸಮಸ್ತ ಕಾರ್ಮಿಕ ವರ್ಗಕ್ಕೆ ಕರೆ ನೀಡಿದೆ.

ಭಾರತದ ಕಾರ್ಮಿಕ ವರ್ಗ, ಯೂನಿಯನ್‌ಗಳು ಅಸ್ತಿತ್ವದಲ್ಲಿ ಇರಲಿ, ಇಲ್ಲದಿರಲಿ, ಇದ್ದರೆ ಅವು ಯಾವುದೇ ಸಂಘಟನೆಗೆ ಸಂಬದ್ಧವಾಗಿರಲಿ, ಧರ್ಮ, ಪ್ರದೇಶ, ಜಾತಿ, ಭಾಷೆ, ಲಿಂಗ ಇತ್ಯಾದಿಗಳ ಬೇಧಭಾವವಿಲ್ಲದೆ, ಸರಕಾರದ ಕಾರ್ಮಿಕ-ವಿರೋಧಿ, ಜನ-ವಿರೋಧಿ ಮತ್ತು ರಾಷ್ಟ್ರವಿರೋಧಿ ನವ-ಉದಾರವಾದಿ ಧೋರಣೆಗಳ ವಿರುದ್ಧ ಐಕ್ಯ ಹೋರಾಟಗಳನ್ನು ಬಲಪಡಿಸಬೇಕು, ಕಾರ್ಮಿಕರ ಹಕ್ಕುಗಳ ಮೇಲೆ, ಅವರ ಉದ್ಯೋಗಗಳು, ಜೀವನಾಧಾರಗಳು ಮತ್ತು ಜೀವನ ಪರಿಸ್ಥಿತಿಗಳ ಮೇಲೆ ದಾಳಿಗಳನ್ನು ಪ್ರತಿರೋಧಿಸಬೇಕು ಹಾಗೂ ಇತರ ಶ್ರಮಜೀವಿಗಳು, ರೈತಾಪಿ ಜನಗಳು, ಕೈಕಸಬುದಾರರು ಮತ್ತು ಇತರ ಗ್ರಾಮೀಣ ಕೆಲಸಗಾರರೊಂದಿಗೆ ಐಕ್ಯತೆ ಬೆಸೆದು **ನವ-ಉದಾರವಾದಿ ಧೋರಣೆಗಳ ವಿರುದ್ಧ ಹೋರಾಟವನ್ನು ಹೊಸ ಎತ್ತರಕ್ಕೆ ಒಯ್ದು ಅದಕ್ಕೆ ನಿರ್ಣಾಯಕ ಸೋಲನ್ನು ಉಂಟು ಮಾಡಬೇಕು ಎಂದು ಸಿಐಟಿಯು ಮೇದಿನ ಪ್ರಣಾಳಿಕೆ ಕರೆ ನೀಡಿದೆ.**

ಮುಂದುವರೆದು ಅದು ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ ಹಲ್ಲೆಗಳನ್ನು ಅರಿತುಕೊಂಡು ಸರ್ವಾಧಿಕಾರಶಾಹಿ ಪ್ರವೃತ್ತಿಗಳನ್ನು ವಿಫಲಗೊಳಿಸಬೇಕು ಮತ್ತು ಯಾವುದೇ ವೇಷತೊಟ್ಟು ಅಥವ ಬಣ್ಣ ಇಟ್ಟು ಕಾರ್ಮಿಕ ವರ್ಗದ ಐಕ್ಯತೆ ಹಾಗೂ ಜನತೆಯ ಐಕ್ಯತೆಯನ್ನು ಒಡೆಯುವ, ಛಿದ್ರಗೊಳಿಸುವ ಎಲ್ಲ ಪ್ರಯತ್ನಗಳ ವಿರುದ್ಧ ಜಾಗೃತರಾಗಿದ್ದು, ಇಂತಹ ಎಲ್ಲ ಪ್ರಯತ್ನಗಳನ್ನು ವಿಫಲಗೊಳಿಸಲು ತಕ್ಷಣವೇ ಮಧ್ಯಪ್ರವೇಶಿಸಬೇಕು ಎಂದು ಸಿಐಟಿಯು ದೇಶದ ಸಮಸ್ತ ಕಾರ್ಮಿಕ ವರ್ಗಕ್ಕೆ ಈ ವರ್ಷದ ಮೇದಿನದ ಸಂದರ್ಭದಲ್ಲಿ ಕರೆ ನೀಡಿದೆ.

ಅಂತರ್ರಾಷ್ಟ್ರೀಯ ರಂಗದಲ್ಲಿ, ಜಗತ್ತಿನ ವಿವಿಧ ಭಾಗಗಳಲ್ಲಿ ಅಫಘಾನಿಸ್ತಾನ, ಸಿರಿಯ, ಯೆಮೆನ್, ಲಿಬ್ಯ, ಇರಾಕ್ ಮುಂತಾದಡೆಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ನೇತೃತ್ವದ ಯುದ್ಧಗಳು ನೂರಾರು, ಸಾವಿರಾರು ನಿಶ್ಶಸ್ತ್ರ ಜನಗಳನ್ನು ಸಾಯಿಸುತ್ತಿವೆ, ಅಂಗವಿಕಲರಾಗಿಸುತ್ತಿವೆ, ಇವರಲ್ಲಿ ಹೆಚ್ಚಿನವರು ಮಹಿಳೆಯರು ಮತ್ತು ಮಕ್ಕಳು. ಜಗತ್ತಿನ ಸಂಪನ್ಮೂಲಗಳ ಮೇಲೆ ಅಮೆರಿಕದ ಯಜಮಾನಿಕೆಗಾಗಿಯೇ ಈ ಎಲ್ಲ ಯುದ್ಧಗಳನ್ನು ನಡೆಸಲಾಗುತ್ತಿದೆ. ಇವುಗಳಲ್ಲಿ ಕೋಟ್ಯಂತರ ಮಂದಿ ಮನೆಮಾರು ಕಳಕೊಂಡು ನಿರ್ಗತಿಕರಾಗುತ್ತಿದ್ದಾರೆ, ಬೇರೆ ದೇಶಗಳಿಗೆ ನಿರಾಶ್ರಿತರಾಗಿ ಹೋಗುತ್ತಿದ್ದಾರೆ. ಇವೆಲ್ಲ ಆಕ್ರಮಣಗಳ ವಿರುದ್ಧ ಸರ್ವಶಕ್ತಿಯಿಂದ ಮಧ್ಯಪ್ರವೇಶಿಸಬೇಕು, ಏಕೆಂದರೆ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟ ಶೋಷಣೆಯ ವಿರುದ್ಧ ವರ್ಗ ಹೋರಾಟದ ಭಾಗ ಎಂಬ ತನ್ನ ದೃಢ ನಂಬಿಕೆಯನ್ನು ಸಿಐಟಿಯು ಮೇದಿನದ ಪ್ರಣಾಳಿಕೆ ಪುನರುಚ್ಚರಿಸಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ಎಳ್ಳಷ್ಟೂ ಪರಿಹಾರ ಕಾಣದೆ ಮುಂದುವರೆಯುತ್ತಿದೆ. ಬೆಳವಣಿಗೆ ಏನಿದ್ದರೂ ಅದು ಬಂಡವಾಳಶಾಹಿಗಳಿಗೆ ಮಾತ್ರ, ಜನಸಾಮಾನ್ಯರಿಗೆ ನಿರುದ್ಯೋಗ ಮತ್ತು ಆತಂಕಕಾರಿ ಮಟ್ಟ ತಲುಪುತ್ತಿರುವ ಅಸಮಾನತೆಗಳು. ಬಿಕ್ಕಟಿನ ದುಷ್ಪರಿಣಾಮಗಳನ್ನು ದುಡಿಯುವ ಜನಗಳ ಮೇಲೆ ದಾಟಿಸಿ, ಅವರ ಬದುಕಿನ ಮೇಲೆ, ಜೀವನಾಧಾರದ ಹಕ್ಕುಗಳ ಮೇಲೆ ದಾಳಿ ಮಾಡಿ ಶ್ರೀಮಂತರ ಲಾಭಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುತ್ತಿರುವ ನವ-ಉದಾರವಾದಿ ಧೋರಣೆಗಳಿಂದಾಗಿ ಜಗತ್ತಿನ ಅರ್ಧದಷ್ಟು ಸಂಪತ್ತು ಕೇವಲ ಎಂಟು ಅತಿ ಶ್ರೀಮಂತರ ಸೊತ್ತಾಗಿದೆ ಎಂದು ಸಿಐಟಿಯು ಪ್ರಣಾಳಿಕೆ ಗಮನಿಸಿದೆ.

ಇಂತಹ ಧೋರಣೆಗಳ ಪರಿಣಾಮ ಹಲವಾರು ದೇಶಗಳ ವಿವಿಧ ರಾಜಕೀಯ ಬೆಳವಣಿಗೆಗಳಲ್ಲಿ ಕಾಣುತ್ತಿದೆ. ಬ್ರಿಟನ್ ಯುರೋಪಿಯನ್ ಒಕ್ಕೂಟವನ್ನು ತ್ಯಜಿಸುವ ನಿರ್ಧಾರ ಮಾಡಿದೆ. ಇಟೆಲಿ, ಗ್ರೀಸ್‌ನಂತಹ ದೇಶಗಳೂ ಈ ಒಕ್ಕೂಟದಲ್ಲಿ ಮುಮದುವರೆಯಬೇಕೇ ಬೇಡವೇ ಎಂದು ಯೋಚಿಸುತ್ತಿವೆ. ಫ್ರಾನ್ಸ್, ಇಟೆಲಿ, ನೆದರ್‌ಲ್ಯಾಂಡ್ ಮುಂತಾದ ದೇಶಗಳಲ್ಲಿ ಬಲಪಂಥೀಯ ಶಕ್ತಿಗಳು ಬಲಗೊಳ್ಳುತ್ತಿವೆ. ಅಮೆರಿಕ ಮತ್ತು ಇತರ ಪಾಶ್ಚಿಮಾತ್ಯ ದೇಶಗಳಲ್ಲಿ ವಲಸೆ ಕಾರ್ಮಿಕರ ಮೇಲೆ ಹಲ್ಲೆಗಳು, ಜನಾಂಗದ್ವೇಷಿ ದನಿಗಳು ಹೆಚ್ಚಲಾರಂಭಿಸಿದೆ.

ಅಂದರೆ ಬಂಡವಾಳಶಾಹಿ ವ್ಯವಸ್ಥೆ ಅಮೂಲ್ಯ ಮಾನವ ಸಂಪನ್ಮೂಲವನ್ನು ಮಾನವಕುಲದ ಒಳಿತಿಗೆ ಸರಿಯಾಗಿ ಬಳಸುವಲ್ಲಿ, ಒಂದು ತಾಳಿಕೆಯ ಅಭಿವೃದ್ಧಿ ತರಯವಲ್ಲಿ ಸಂಪೂರ್ಣ ವಿಫಲವಾಗಿದೆ ಎಂಬುದನ್ನು ಇದು ಎತ್ತಿ ತೋರುತ್ತದೆ ಎಂದು ಸಿಐಟಿಯು ಪ್ರಣಾಳಿಕೆ ಒತ್ತಿ ಹೇಳಿದೆ.

ನಮ್ಮ ದೇಶದೊಳಗೂ ಸರ್ವಾಧಿಕಾರಶಾಹಿ ಪ್ರವೃತ್ತಿ, ಅಸಹನೆ, ಎಲ್ಲ ತರ್ಕಬದ್ಧ, ವೈಜ್ಞಾನಿಕ ವಿಚಾರಗಳ ಮೇಲೆ, ಭಿನ್ನ ಮತಗಳ ಮೇಲೆ ದಾಳಿ ಹೆಚ್ಚುತ್ತಿದೆ, ಸ್ವಾತಂತ್ರ್ಯ ಹೋರಾಟದಿಂದ ಪ್ರಜ್ಞಾಪೂರ್ವಕವಾಗಿ ದೂರವಿದ್ದವರ ಸಂಘಟನೆ ಈಗ ರಾಷ್ಟ್ರಪ್ರೇಮದ ಸರ್ಟಿಫಿಕೇಟುಗಳನ್ನು ಹಂಚುವ ಧಿಮಾಕು ತೊರಿಸುತ್ತಿದೆ, ಅದರ ನೇತೃತ್ವದಲ್ಲಿ ಅವರ ವಿಚಾರಗಳನ್ನು ಒಪ್ಪದವರಿಗೆ 'ರಾಷ್ಟ್ರ-ವಿರೋಧಿ' ಎಂಬ ಹಣೆಪಟ್ಟಿಯನ್ನು ಅಂಟಿಸುವ ಪ್ರಯತ್ನ ನಡೆಯುತ್ತಿದೆ. ಇನ್ನೊಂದೆಡೆಯಲ್ಲಿ ದೇಶೀ ಕಾರ್ಪೊರೇಟ್‌ಗಳು ಮತ್ತು ಬಹುರಾಷ್ಟ್ರೀಯ ಕಂಪ[ನಿಗಳಿಗೆ ಸಕಲ ಸವಲತ್ತುಗಳನ್ನು , ಬಕ್ಷೀಸುಗಳನ್ನು ಒದಗಿಸಿ, ಅವರ ಲಾಭಗಳನ್ನು ಹೆಚ್ಚಿಸಲಿಕ್ಕಾಗಿ ಕಾರ್ಮಿಕರ ಮೇಲೆ ಗುಲಾಮರಂತಹ ಪರಿಸ್ಥಿತಿಗಳನ್ನು ಸೃಷ್ಟಿಸಲಾಗುತ್ತಿದೆ, **ದೇಶದಲ್ಲಿ ನವ-ಉದಾರವಾದಿ ಧೋರಣೆಗಳು ಮತ್ತು ಕೋಮುವಿಷದ ಅಪಾಯಕಾರಿ ಕೂಟ ಉಂಟಾಗಿದೆ ಎಂದು ಸಿಐಟಿಯು ಮೇದಿನದ ಸಂದರ್ಭದಲ್ಲಿ ಕಾರ್ಮಿಕ ವರ್ಗವನ್ನು ಎಚ್ಚರಿಸಿದೆ.**

ಕೋಮುವಾದಿ, ಛಿದ್ರಕಾರಿ, ಕುರುಡು ದೇಶಭಕ್ತಿಯ ಶಕ್ತಿಗಳ ವಿರುದ್ಧ ಕಾರ್ಮಿಕ ವರ್ಗದ ಮತ್ತುಜನತೆಯ ಐಕ್ಯತೆಯನ್ನು ಬೆಸೆಯುವುದು ನವ-ಉದಾರವಾದಿ ಧೋರಣೆಗಳ ವಿರುದ್ಧ ಹೋರಾಟದ ಅಭಿನ್ನ ಅಂಗ ಎಂದು ಒತ್ತಿ ಹೇಳಿರುವ ಸಿಐಟಿಯುನ ಮೇದಿನದ ಪ್ರಣಾಳಿಕೆ ಧರ್ಮ, ಜಾತಿ, ಪ್ರದೇಶ ಇತ್ಯಾದಿ ಹೆಸರಲ್ಲಿ ಜನಗಳ ಐಕ್ಯತೆಯನ್ನು ಮುರಿಯುವ ಪ್ರಯತ್ನಗಳನ್ನು ಬಲವಾಗಿ ಪ್ರತಿರೋಧಿಸುತ್ತ, ಎಲ್ಲ ಶ್ರಮಜೀವಿ ವಿಭಾಗಗಳನ್ನು ಒಂದುಗೂಡಿಸಿ ನವ-ಉದಾರವಾದಿ ಧೋರಣೆಗಳು, ಕೋಮುವಾದ ಮತ್ತು ಮೂಲಭೂತವಾದದ ವಿರುದ್ಧ ಹೋರಾಟದ ಮೂಲಕ ದೇಶದ ವರ್ಗಬಲಾಬಲವನ್ನು ಬದಲಿಸಿ ಒಂದು ಜನಪರ ಎಡ ಮತ್ತು ಪ್ರಜಾಪ್ರಭುತ್ವಾದಿ ಪರ್ಯಾಯವನ್ನು ರೂಪಿಸುವ ಹೊಣೆ ಕಾರ್ಮಿಕ ವರ್ಗದ ಮೇಲಿದೆ ಎಂಬ ಅರಿವು ತನಗಿದೆ ಎಂದಿದೆ.

ಕಾರ್ಮಿಕರ ಮತ್ತು ಜನತೆಯ ಐಕ್ಯತೆಯ ಹಾಗೂ ದೇಶದ ಹಿತಗಳ ರಕ್ಷಣೆಯ ಪ್ರಯತ್ನಗಳಲ್ಲಿ ತಾನು ಮುಂಚೂಣಿಯಲ್ಲಿ ಇರುವುದಾಗಿ ಸಿಐಟಿಯು ಮೇದಿನ ಪ್ರಣಾಳಿಕೆ ದೇಶದ ಕಾರ್ಮಿಕ ವರ್ಗಕ್ಕೆ ಮತ್ತು ಜನತೆಗೆ ಭರವಸೆ ನೀಡಿದೆ.

'ತ್ರಿವಳಿ ತಲಾಖ್ ಬಗ್ಗೆ ಇರುವ ಆತಂಕ 'ಮರ್ಯಾದಾ ಹತ್ಯೆ'ಗಳ ಬಗ್ಗೆ ಏಕಿಲ್ಲ?

ತ್ರಿವಳಿ ತಲಾಖ್ ವಿರುದ್ಧ ಮುಸ್ಲಿಂ ಮಹಿಳೆಯರು ಮತ್ತು ಮುಸ್ಲಿಂ ಮಹಿಳಾ ಸಂಘಟನೆಗಳು ಹಲವಾರು ವರ್ಷಗಳಿಂದ ಇದಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಸುಪ್ರಿಂ ಕೋರ್ಟ್ ಸೇರಿದಂತೆ ಹಲವು ನ್ಯಾಯಾಲಯಗಳಲ್ಲಿ ಅರ್ಜಿಗಳನ್ನು ಹಾಕಿದ್ದಾರೆ. ಆದರೆ ಈಗ ಉತ್ತರಪ್ರದೇಶದ ಮುಖ್ಯಮಂತ್ರಿಗಳು ಮುಸ್ಲಿಂ ಮಹಿಳೆಯರು ತ್ರಿವಳಿ ತಲಾಖ್‌ನಿಂದ ಮುಕ್ತಿ ಪಡೆಯಲು ಎಷ್ಟು ಉತ್ಸುಕರಾಗಿದ್ದಾರೆ ಎಂದು ತಿಳಿಯಲು ಒಂದು ಸರ್ವೆ ನಡೆಸುತ್ತಿದ್ದಾರೆಂಬುದು ದೊಡ್ಡ ಸುದ್ದಿಯಾಗಿದೆ. ತಾನು ಲಿಂಗ ಸಮಾನತೆಯಲ್ಲಿ ನಂಬಿಕೆ ಇಟ್ಟಿದ್ದೇನೆ ಎಂದಿದ್ದಾರೆ. **ಆದರೆ ಅದು ಮುಸ್ಲಿಂ ಮಹಿಳೆಯರ ಮೇಲಷ್ಟೇ ಗುರಿಯಿಟ್ಟಂತೆ ಕಾಣುತ್ತದೆ. ಏಕೆಂದರೆ ಉತ್ತರಪ್ರದೇಶದಲ್ಲಿ ಹಿಂದೂ ಮಹಿಳೆಯರ ಹೀನ ಪರಿಸ್ಥಿತಿಯ ಬಗ್ಗೆ ಅವರು ಮೌನವಾಗಿಯೇ ಇದ್ದಾರೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಹೇಳಿದೆ.**

ಉತ್ತರ ಪ್ರದೇಶದಲ್ಲಿ ತಮ್ಮ ಜೀವನ ಸಂಗಾತಿಯನ್ನು ಆರಿಸಿಕೊಳ್ಳುವವ ಯುವತಿಯರ ಹಕ್ಕನ್ನು ಕುಟುಂಬದ ಮರ್ಯಾದೆಯ ಹೆಸರಲ್ಲಿ ಹತ್ತಿಕ್ಕಲಾಗುತ್ತಿದೆ, ಇಂತಹ ಅಪರಾಧಗಳ, 'ಮರ್ಯಾದಾ ಹತ್ಯೆ'ಗಳ ಸಂಖ್ಯೆ ಗಮನಾರ್ಹವಾಗಿ ಏರಿದೆ. ಯೋಗಿ ಆದಿತ್ಯನಾಥರ ಹಿಂದೂ ಯುವ ವಾಹಿನಿ ಮಂದಿ ಮನೆಯೊಳಗೇ ನುಗ್ಗಿ ಯುವ ಜೋಡಿಗಳಿಗೆ ಹಿಂಸೆ ಕೊಡುತ್ತಿದ್ದಾರೆ. **ಇತ್ತೀಚಿನ ರಾಷ್ಟ್ರೀಯ ಅಪರಾಧಗಳ ದಾಖಲಾತಿ ಮಂಡಳಿ(ಎನ್‌ಸಿಆರ್‌ಬಿ)ಯ ಅಂಕಿ-ಅಂಶಗಳ ಪ್ರಕಾರ ಮನೆಯೊಳಗಿನ ಹಿಂಸಾಚಾರ ಮತ್ತು ಲೈಂಗಿಕ ಅಪರಾಧಗಳ ಸಂಖ್ಯೆಯಲ್ಲಿ ಈ ರಾಜ್ಯ ಇಡೀ ದೇಶದಲ್ಲೆ ಮೊದಲ ಸ್ಥಾನದಲ್ಲಿದೆ. ಅದರೆ ಈ ಬಗ್ಗೆ ಅಲ್ಲಿನ ಹೊಸ ಮುಖ್ಯಮಂತ್ರಿಗಳು ಯಾವುದೇ ಆತಂಕ ವ್ಯಕ್ತಪಡಿಸುತ್ತಿಲ್ಲ.**

ಉತ್ತರಪ್ರದೇಶದ ಭೂಸುಧಾರಣಾ ಕಾಯ್ದೆ ಕೃಷಿ ಭೂಮಿಯಲ್ಲಿ ಪಾಲು ಪಡೆಯುವ ಹಕ್ಕನ್ನು ಮಹಿಳೆಯರಿಗೆ ನಿರಾಕರಿಸಿದೆ. ಪರಂಪರಾಗತ ಆಸ್ತಿಯಲ್ಲಿ ಮಹಿಳೆಯರ ಪಾಲು ಕುರಿತಾಗಿ ಹಿಂದೂ ಉತ್ತರಾಧಿಕಾರ ಕಾಯ್ದೆಯಲ್ಲಿ ಭೂಸುಧಾರಣೆ ಮತ್ತು ಭೂಮಿತಿ ಕಾಯ್ದೆಗಳಿಗೆ ಇದ್ದ ವಿನಾಯ್ತಿಯನ್ನು 2005ರಲ್ಲಿ ತಂದ ಬದಲಾವಣೆಗಳು ತೆಗೆದು ಹಾಕಿದ್ದರೂ ಈ ನಿರಾಕರಣೆ ಮುಂದುವರೆದಿದೆ. ವೈವಾಹಿಕ ಆಸ್ತಿಯಲ್ಲಿ ಸಮಾನ ಪಾಲು ಕೊಡುವ ಶಾಸನ ಇಲ್ಲವಾದ್ದರಿಂದ ಮತ್ತು ಜೀವನಾಂಶದ ಹಕ್ಕನ್ನು ಜಾರಿಗೊಳಿಸುತ್ತಿಲ್ಲವಾದ್ದರಿಂದ ಹಿಂದೂ ವಿಧವೆಯರು, ಪರಿತ್ಯಕ್ತೆಯರು ಮತ್ತು ವಿಚ್ಛೇದಿತ ಮಹಿಳೆಯರು ಸಂಕಟಗಳನ್ನು ಅನುಭವಿಸುತ್ತಲೇ ಇದ್ದಾರೆ. ತಮ್ಮ ಮಕ್ಕಳ ಪಾಲಕರಾಗಿಯೂ ಅವರಿಗೆ ಸಮಾನ ಹಕ್ಕುಗಳಿಲ್ಲ ಎಂಬ ಸಂಗತಿಯತ್ತ ಎಐಡಿಡಬ್ಲ್ಯುಎ ಗಮನ ಸೆಳೆದಿದೆ.

ಮುಸ್ಲಿಂ ಮಹಿಳೆಯರು ಮಾತ್ರ ಹಿಂದುಳಿದಿದ್ದಾರೆ, ಅವರು ಮಾತ್ರ ಹೀನ ಪರಿಸ್ಥಿತಿಯಲ್ಲಿದ್ದಾರೆ ಎಂದೆ ತೋರಿಸುವ ನಿಲುವನ್ನು ಖಂಡಿಸುತ್ತ, ಹಿಂದೂ ಮಹಿಳೆಯರೂ ಸೇರಿದಂತೆ ಎಲ್ಲ ಮಹಿಳೆಯರೂ ಮನೆಯೊಳಗಿನ ಹಿಂಸಾಚಾರ ಮತ್ತಿತರ ಸ್ವರೂಪಗಳ ಹಿಂಸಾಚಾರಗಳನ್ನು ಎದುರಿಸುತ್ತಿದ್ದಾರೆ, ಆಸ್ತಿ ಮತ್ತು ಇತರ ಹಕ್ಕುಗಳು ಲಭ್ಯವಾಗದೆ ನರಳುತ್ತಿದ್ದಾರೆ ಎಂದು ಎಐಡಿಡಬ್ಲ್ಯುಎ ನೆನಪಿಸಿದೆ.

ಮಾತೆಂದರೆ ಇದು

ನಮ್ಮನ್ನು ನೇಣಿಗೇರಿಸುವ ಮೂಲಕ ಬೆವರು ಸುರಿಸಿ ದುಡಿದು ಕೊರತೆ ಮತ್ತು ಸಂಕಟದಲ್ಲಿ ಬದುಕುತ್ತಿರುವ ಕೋಟ್ಯಂತರ ದಮನಿತರು-ಕೂಲಿ ಗುಲಾಮರು ತಮ್ಮ ಮುಕ್ತಿಯನ್ನು ನಿರೀಕ್ಷಿಸುವ ಆಂದೋಲನವನ್ನು ನೀವು ತುಳಿದು ಹಾಕಬಹುದು ಎಂದು ಭಾವಿಸಿದ್ದರೆ ಖಂಡಿತಾ ನಮ್ಮನ್ನು ನೇಣಿಗೇರಿಸಿ. ಇಲ್ಲಿ ನೀವು ಒಂದು ಕಿಡಿಯ ಮೇಲೆ ಕಾಲಿಡುತ್ತೀರಿ, ಅದರೆ ಅಲ್ಲಿ ಮತ್ತು ಅಲ್ಲಿ, ನಿಮ್ಮ ಹಿಂದೆ, ನಿಮ್ಮ ಮುಂದೆ ಮತ್ತು ಎಲ್ಲೆಡೆಗಳಲ್ಲಿ ಜ್ವಾಲೆಗಳು ಉರಿಯುತ್ತವೆ. ಇದು ಅಂತರ್ಗಾಮಿ ಬೆಂಕಿ. ನೀವದನ್ನು ನಂದಿಸಲಾರಿರಿ.

-ಆಗಸ್ಟ್ ಸ್ಪಯೆಸ್
20 ಅಗಸ್ಟ್ 1886ರಂದು ನೇಣಿಗೇರಿದ
ಮೇದಿನದ ಹುತಾತ್ಮರಲ್ಲಿ ಒಬ್ಬರು

ಒಂದು ಲಕ್ಷಕ್ಕೂ ಹೆಚ್ಚು ರೈಲ್ವೆ ಚಾಲಕ ಸಿಬ್ಬಂದಿಯ ಉಪವಾಸ ಮುಷ್ಕರ

ಭಾರತೀಯ ರೈಲ್ವೆಯ ರೈಲುಗಳನ್ನು ದೇಶಾದ್ಯಂತ ಓಡಿಸುವ ಕಾಯಕದಲ್ಲಿ ತೊಡಗಿರುವ ಒಂದು ಲಕ್ಷಕ್ಕೂ ಹೆಚ್ಚು ಲೋಕೋ ಪೈಲಟ್‌ಗಳು ಮತ್ತು ಗಾರ್ಡ್‌ಗಳು ಎಪ್ರಿಲ್ 25ರ ಬೆಳಿಗ್ಯೆ 8 ಗಂಟೆಯಿಂದ ಎಪ್ರಿಲ್ 26ರ ಸಂಜೆ 8ಗಂಟೆಯ ವರೆಗೆ 36 ಗಂಟೆಗಳ ಉಪವಾಸ ಮುಷ್ಕರ ನಡೆಸಿದ್ದಾರೆ. ಭಾರತ ಸರಕಾರ ಮತ್ತು ಅದರ ರೈಲ್ವೆ ಇಲಾಖೆ ಬಹಳಕಾಲದಿಂದ ನೆನಗುದಿಗೆ ಹಾಕಿರುವ ತಮ್ಮ ಬೇಡಿಕೆಗಳನ್ನು ನೆನಪಿಸಲು ಅವರು ಈ ಹೋರಾಟ ನಡೆಸಿರುವುದಾಗಿ ಆಲ್ ಇಂಡಿಯ ಲೋಕೋ ರನ್ನಿಂಗ್ ಸ್ಟಾಫ್ ಅಸೋಸಿಯೇಷನ್(ಎಐಎಲ್‌ಆರ್‌ಎಸ್‌ಎ) ಮತ್ತು ಆಲ್ ಇಂಡಿಯ ಗಾರ್ಡ್ಸ್ ಕೌನ್ಸಿಲ್(ಎಐಜಿಸಿ) ತಿಳಿಸಿವೆ.

ಈ ಎರಡು ಸಂಘಟನೆಗಳ ಜಂಟಿ ಕರೆಯ ಮೇರೆಗೆ ಈ ಮುಷ್ಕರ ನಡೆದಿದೆ. ರೈಲುಗಳನ್ನು ಓಡಿಸುತ್ತಿರುವವರು, ಹೆಚ್ಚುವರಿ ಸಿಬ್ಬಂದಿಯಾಗಿ ಡ್ಯೂಟಿಯ ಮೇಲೆ ಪಯಣಿಸುತ್ತಿರುವವರು, ತರಬೇತಿಯಲ್ಲಿರುವವರು, ವಿಶೇಷ ಡ್ಯೂಟಿಯಲ್ಲಿ ಇರುವವರು, ಡ್ಯೂಟಿ ಮುಗಿಸಿ ಮನೆಗಳಲ್ಲಿ, ದೂರದ ರೆಸ್ಟ್‌ರೂಂಗಳಲ್ಲಿ ಇರುವವರು, ರಜೆಯಲ್ಲಿರುವವರು, ರೈಲ್ವೆ ಕಾರ್ಯಕ್ರಮಗಳಲ್ಲಿ ಇರುವವರು- ಹೀಗೆ ಎಲ್ಲರೂ ಈ ಉಪವಾಸ ಮುಷ್ಕರದಲ್ಲಿ ಭಾಗವಹಿಸಿದ್ದಾರೆ ಎಂದು ಈ ಎರಡು ಸಂಘಟನೆಗಳ ಮುಖಂಡರು ಹೇಳಿದ್ದಾರೆ. ಈ ಸಂಘಟನೆಗಳ ಕೇಂದ್ರ ಮುಖಂಡರು ದಿಲ್ಲಿಯ ಜಂತರ್‌ಮಂತರ್‌ನಲ್ಲಿ ಮತ್ತು ಇತರ ಮುಖಂಡರು ಮತ್ತು ಕಾರ್ಯಕರ್ತರು ಎಲ್ಲ ವಿಭಾಗೀಯ ಕಾರ್ಯಾಲಯಗಳ ಮುಂದೆ ಉಪವಾಸ ಮುಷ್ಕರದಲ್ಲಿ ಭಾಗವಹಿಸಿದರು.

ಜಂತರ್‌ಮಂತರ್‌ನಲ್ಲಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಉಪವಾಸ ಮುಷ್ಕರವನ್ನು ಉದ್ಘಾಟಿಸಿದರು. ಭಾರತೀಯ ರೈಲ್ವೆ ನೌಕರರ ರಾಷ್ಟ್ರೀಯ ಒಕ್ಕೂಟ(ಎನ್‌ಎಫ್‌ಐಆರ್)ದ ಮುಖಂಡರಾದ ಬಿ ಸಿ ಶರ್ಮ, ಎಐಎಲ್‌ಆರ್‌ಎಸ್‌ಎ ಮಹಾ ಕಾರ್ಯದರ್ಶಿ ಎಂಎನ್‌ಪ್ರಸಾದ್, ಎಐಜಿಸಿ ಪ್ರಧಾನ ಕಾರ್ಯದರ್ಶಿ ಶ್ರೀವಾಸ್ತವ್ ಮತ್ತು ಆಮ್ ಆದ್ಮಿ ಪಕ್ಷದ ಶಾಸಕ ಯಾದವ್ ಮಾತನಾಡಿದರು.

ಅಸುರಕ್ಷತೆಯ ಮತ್ತು ಅಮಾನವೀಯ ದುಡಿಮೆಯ ಪರಿಸ್ಥಿತಿಗಳತ್ತ ಮತ್ತೊಮ್ಮೆ ಸರಕಾರದ ಮತ್ತು ಸಾರ್ವಜನಿಕರ ಗಮನ ಸೆಳೆಯಲು ಈ ಹೋರಾಟವನ್ನು ನಡೆಸುತ್ತಿರುವುದಾಗಿ ಅವರು ಹೇಳಿದ್ದಾರೆ. ಕೆಟ್ಟ ಸ್ಥಿತಿಯಲ್ಲಿರುವ ರೈಲು ಇಂಜಿನ್‌ಗಳು, ಹಳಿಗಳು ಮತ್ತಿತರ ಸರಂಜಾಮುಗಳು, ದೋಷಪೂರಿತ ಸಿಗ್ನಲ್ ವ್ಯವಸ್ಥೆ, ಸತತವಾಗಿ, ವಿರಾಮವಿಲ್ಲದೆ 15–20 ಗಂಟೆಗಳ, ಮುಖ್ಯ ಕಚೇರಿಯಿಂದ ಅಥವ ಕುಟುಂಬದಿಂದ ಸದಾ 4–5 ದಿನಗಳ ಕಾಲ ದೂರ ಇರಬೇಕಾದಂತಹ ಡ್ಯೂಟಿ ವ್ಯವಸ್ಥೆ, ಇಂತಹ ಡ್ಯೂಟಿಯ ನಂತರ ಸೂಕ್ತ ವಿರಾಮದ ವ್ಯವಸ್ಥೆಯ ಕೊರತೆಯಲ್ಲದೆ , ರಜಾ ನಿರಾಕರಿಸುವುದು,ಇತರ ಕಿರುಕುಳಗಳು ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವುದು, ಹಾಗೂ ಏಳನೇ ವೇತನ ಆಯೋಗದ ಜಾರಿಯಲ್ಲಿ ಅನ್ಯಾಯ ಇವೆಲ್ಲದರ ವಿರುದ್ಧ ರೈಲು ಚಾಲಕ ಸಿಬ್ಬಂದಿ ಈ ಮುಷ್ಕರವನ್ನು ನಡೆಸಿದ್ದಾರೆ.

ರೈಲು ಓಡಿಸುವ ಕೆಲಸವನ್ನು 'ತೀವ್ರ ಸ್ವರೂಪದ ಡ್ಯೂಟಿ' ಎಂದು ವರ್ಗೀಕರಿಸಿ ಕೆಲಸದ ಗರಿಷ್ಟ ಮಿತಿಯನ್ನು 8ಗಂಟೆಗಳಿಗೆ ಸೀಮಿತಗೊಳಿಸುವುದು, ಎರಡಕ್ಕಿಂತ ಹೆಚ್ಚು ಸತತ ರಾತ್ರಿ ಡ್ಯೂಟಿ ಇಲ್ಲದಂತೆ ಮತ್ತು ವಾರದಲ್ಲಿ 40ಗಂಟೆಗಳ ವಿರಾಮ ಇರುವಂತೆ ಸಿಬ್ಬಂದಿ ಕೊಂಡಿಗಳ ಪರಿಷ್ಕರಣೆ, ಗೂಡ್ಸ್ ಟ್ರೈನ್‌ಗಳನ್ನು ಬ್ರೇಕ್ ವ್ಯಾನ್ ಮತ್ತು ಗಾರ್ಡ್‌ಗಳಿಲ್ಲದೆ ಓಡಿಸುವುದನ್ನು ನಿಲ್ಲಿಸುವುದು, ಏಳನೇ ವೇತನ ಆಯೋಗದಲ್ಲಿ ಇತರ ಕೇಂದ್ರ ಸರಕಾರದ ಸಿಬ್ಬಂದಿಗೆ ನೀಡಿದಂತೆ 14.29% ವೇತನ ಏರಿಕೆ ಮುಂತಾದವುಗಳು ಈ ಉಪವಾಸ ಮುಷ್ಕರದ ಪ್ರಮುಖ ಬೇಡಿಕೆಗಳು.

ಸಂಪಾದಕೀಯ

‘ಪಾತಾಳ ಗಂಗೆ’ ಅವೈಜ್ಞಾನಿಕ ಅಪಾಯಕಾರಿ

ಅಂತರ್ಜಲ ಮಟ್ಟ ಕುಸಿದು, ನೀರೇ ಇಲ್ಲ ಎಂಬಂತಿರುವ ಗ್ರಾಮಗಳಿಗೆ ನೀರು ಪೂರೈಸಲು ‘ಪಾತಾಳ ಗಂಗೆ’ ಯೋಜನೆ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ನಿರ್ಧರಿಸಿದೆ. ‘ಪಾತಾಳ ಗಂಗೆ’ ಯೋಜನೆಯಲ್ಲಿ ನೆಲದಡಿಯಲ್ಲಿ ಸ್ವಾಭಾವಿಕವಾಗಿ ಹರಿಯುವ ನೀರನ್ನು ಮೇಲೆತ್ತಲಾಗುತ್ತದೆ. ಸಮುದ್ರದ ಆಳದಲ್ಲಿರುವ ತೈಲವನ್ನು ಮೇಲೆತ್ತಿದ ರೀತಿಯಲ್ಲಿಯೇ ಭೂಮಿ ಆಳದಲ್ಲಿ ಹರಿಯುವ ನೀರನ್ನು ಮೇಲೆತ್ತುವ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಆರ್ಡಿಪಿಆರ್) ‘ವಾಟರ್ಕ್ವೆಸ್ಟ್’ ಸಂಸ್ಥೆಯ ಸಹಯೋಗದಲ್ಲಿ ಸಿದ್ದಪಡಿಸಿದೆ.

ರಾಜ್ಯದ 10 ಕಡೆಗಳಲ್ಲಿ 6 ತಿಂಗಳ ಅವಧಿಯಲ್ಲಿ ಹಂತಹಂತವಾಗಿ ಯೋಜನೆ ಕಾರ್ಯಗತಗೊಳಿಸುವ ಪ್ರಸ್ತಾವನೆಯನ್ನು ‘ವಾಟರ್ಕ್ವೆಸ್ಟ್’ ಎಂಬ ಕಂಪನಿ ಸಲ್ಲಿಸಿದೆ. ಇದು ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಅಮೆರಿಕದ ‘ಸ್ಕೈಕ್ವೆಸ್ಟ್’ ಸಂಸ್ಥೆಯ ಅಂಗ ಸಂಸ್ಥೆ. ಮೊದಲು ಗಂಟೆಗೆ ಸರಾಸರಿ 80 ರಿಂದ 120 ಕ್ಯುಬಿಕ್ ಮೀಟರ್ (ಒಂದು ಕ್ಯುಬಿಕ್ ಮೀಟರ್ ಅಂದರೆ ಒಂದು ಸಾವಿರ ಲೀಟರ್ ನೀರು) ನೀರು ಮೇಲೆತ್ತುವ 2 ಬಾವಿಗಳನ್ನು (ಕೊಳವೆ ಬಾವಿ ಮಾದರಿಯಲ್ಲಿ) ತಲಾ ರೂ. 12.48 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಿದೆ. ಸರಾಸರಿ ಅಷ್ಟೇ ಪ್ರಮಾಣದಲ್ಲಿ ನೀರೆತ್ತುವ ಉಳಿದ ಎಂಟು ಬಾವಿಗಳಿಗೆ ವೆಚ್ಚ ಕಡಿಮೆ ಮಾಡಿ ಅಂದರೆ, ತಲಾ ರೂ. 9.26 ಕೋಟಿ ವೆಚ್ಚದಲ್ಲಿ ಕೊರೆಯಲಿದೆ. ಎಲ್ಲಾ 10 ಬಾವಿಗಳಿಗೆ ಸರಾಸರಿ ರೂ. 9.90 ಕೋಟಿ ವೆಚ್ಚವಾಗಲಿದೆ ಎಂದು ಸಂಸ್ಥೆ ಪ್ರಸ್ತಾವನೆಯಲ್ಲಿ ತಿಳಿಸಿದೆ.

ರಾಜ್ಯ ಸರಕಾರ ಗುರುತಿಸಿದ 10 ಸ್ಥಳಗಳಲ್ಲಿ ‘ವಾಟರ್ಕ್ವೆಸ್ಟ್’ ನೀರಿನ ಇರುವಿಕೆ ಬಗ್ಗೆ ಸಮೀಕ್ಷೆ ನಡೆಸಿದೆ. ಈ ಸ್ಥಳಗಳಲ್ಲಿ ನೀರಿನ ಹರಿವು 60ರಿಂದ 130 ಕ್ಯುಬಿಕ್ ಮೀಟರ್ ಇದೆ. 330 ರಿಂದ 650 ಮೀಟರ್ ಆಳದಲ್ಲಿ ದಿನಕ್ಕೆ 13.5 ರಿಂದ 28.6 ಲಕ್ಷ ಲೀಟರ್ ನಷ್ಟು ನೀರು ಸಿಗುವ ಸಾಧ್ಯತೆ ಇದೆ ಎಂದು ಹೇಳಿದೆ. ಆ 10 ಸ್ಥಳಗಳು ಇಂಡಿ, ಆಲಂದ, ಶ್ರೀನಿವಾಸಪುರ, ಪಾವಗಡ, ಚಿಕ್ಕನಾಯಕನ ಹಳ್ಳಿ, ಸಿದ್ದಘಟ್ಟ, ಚಳ್ಳಕೆರೆ, ಆನೇಕಲ್, ಬೆಳದಡಿ, ನಬಪುರ, ಮಹಲಿಂಗಪುರ, ತಿರ್ಲಾಪುರ, ಅಣ್ಣಿಗೇರಿ ಗಳಿಂದ 3 ರಿಂದ 11 ಕಿ.ಮೀ. ದೂರದಲ್ಲಿವೆ.

ನೆಲದಾಳದ ನೀರಿನ ಈ ಯೋಜನೆಗೆ ಜಲತಜ್ಞರು, ಭೂಗರ್ಭ ವಿಜ್ಞಾನಿಗಳು, ಪರಿಸರವಾದಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ‘ನೆಲದ ಅಡಿಯಲ್ಲಿ ಸ್ವಾಭಾವಿಕವಾಗಿ ಹರಿಯುವ ನೀರಿನ ಸೆಲೆಗಳು ಇರುತ್ತವೆ. ಅವನ್ನು ಪತ್ತೆ ಮಾಡಲಾಗಿದೆ. ಮಳೆ ನೀರು ಅಥವಾ ಮೇಲ್ಮೈ ನೀರಿನಿಂದ ಇದು ಸ್ವತಂತ್ರವಾಗಿರುತ್ತದೆ. ಸಮುದ್ರದ ನೀರು ಭೂಮಿಗೆ ಇಳಿಮುಖವಾಗಿ ಹರಿಯುವುದರಿಂದ ಸೆಲೆ ಬತ್ತುವುದಿಲ್ಲ. ಸ್ವಯಂ ಆಗಿ ಭರ್ತಿಯಾಗುತ್ತದೆ’ ಎಂಬ ‘ವಾಟರ್ಕ್ವೆಸ್ಟ್’ ಹೇಳಿಕೆಯನ್ನು ತಜ್ಞರು ಪ್ರಶ್ನಿಸಿದ್ದಾರೆ. ಬರಿಯ ‘ವಾಟರ್ಕ್ವೆಸ್ಟ್’ನ ಹೇಳಿಕೆಯ ಆಧಾರದ ಮೇಲೆ ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯ ತಾಂತ್ರಿಕ ಸಾಧ್ಯತೆ, ಅಂತರ್ಜಲದ ಮೇಲೆ ಮತ್ತು ಇತರ ಪರಿಸರ ಪರಿಣಾಮಗಳು – ಇವುಗಳ ಬಗ್ಗೆ ಜಲತಜ್ಞರು, ಭೂಗರ್ಭ ವಿಜ್ಞಾನಿಗಳು, ಪರಿಸರವಾದಿಗಳ ಜತೆ ಯಾವುದೇ ಚರ್ಚೆ ಸಂವಾದ ನಡೆಸದೆ ಏಕಾಏಕಿ ಸರಕಾರ ಈ ಯೋಜನೆಗೆ ಕೈ ಹಾಕಿರುವುದು ಅವೈಜ್ಞಾನಿಕ ನಿರ್ಧಾರ.

ರಾಜ್ಯದ ಹಲವು ಗ್ರಾಮೀಣ ಜನವಸತಿಗಳಲ್ಲಿ ಆರ್ಸೆನಿಕ್, ಅಧಿಕ ಫ್ಲೋರೈಡ್ ಅಥವಾ ಒಂದಕ್ಕಿಂತ ಹೆಚ್ಚು ರಾಸಾಯನಿಕ ವಸ್ತುಗಳಿರುವ ಕಲುಷಿತ ನೀರು ಸಿಗುತ್ತಿದೆ. ಆಳಕ್ಕೆ ಹೋದಂತೆ ಖನಿಜಯುಕ್ತ ನೀರು ಸಿಗುತ್ತಿದೆ. ಆದ್ದರಿಂದ ನೆಲದಡಿಯ ನೀರಿನ ಗುಣಮಟ್ಟದ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕಾಗಿದೆ. ಈ ಯೋಜನೆ ನೈಸರ್ಗಿಕ ಅಸಮತೋಲನ ಸೃಷ್ಟಿಸುತ್ತದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಉಸ್ತುವಾರಿ ಕೇಂದ್ರದ ನಿರ್ದೇಶಕರು ಅಭಿಪ್ರಾಯ ಪಟ್ಟಿದ್ದಾರೆ.

ಅಂತರ್ಜಲದ ನೈಸರ್ಗಿಕ ಪುನರುತ್ಪಾದನೆ ಮತ್ತು ಮರುಸ್ಥಾಪಿಸುವಿಕೆಗೆ ದಶಕಗಳೇ ತೆಗೆದುಕೊಳ್ಳುತ್ತವೆ. ಭೂಗರ್ಭದ ನೀರಿನ ಅತಿ ಬಳಕೆ ಮತ್ತು ದುರ್ಬಳಕೆ ಕೆರೆ, ನದಿ ಮತ್ತು ತೊರೆಗಳ ನೀರಿನ ಪೂರೈಕೆಯನ್ನು ಕಡಿಮೆಗೊಳಿಸುತ್ತದೆ. ಅಂತರ್ಜಲ ಮಟ್ಟದಲ್ಲಿನ ಬದಲಾವಣೆಯು ಜಲ ಸಂಪನ್ಮೂಲದ ಅಸಮತೋಲನಕ್ಕೆ ಕಾರಣವಾಗಬಹುದು. ಭೂಗರ್ಭ ಕೊರೆದು ನೀರೆತ್ತಲು ಮುಂದಾಗಿರುವುದು ನೀರಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರವಾದರೂ, ದೀರ್ಘಕಾಲದಲ್ಲಿ ಪರಿಸರಕ್ಕೆ ಹಾನಿಕರ. ಎಂದು ಹಲವು ಭೂಗರ್ಭ ತಜ್ಞರೂ ಪರಿಸರತಜ್ಞರೂ ಅಭಿಪ್ರಾಯ ಪಟ್ಟಿದ್ದಾರೆ.

ಸತತ ಬರದಿಂದಾಗಿ ಅಂತರ್ಜಲದ ಮೇಲೆ ಗಂಭೀರ ಪರಿಣಾಮ ಉಂಟಾಗಿದೆ. ನೀರಿನ ಮಟ್ಟ ತಳ ಸೇರಿರುವ ಅಂಶವನ್ನು ಕೇಂದ್ರ ಭೂ ಜಲ ಮಂಡಳಿ (ಸಿಜಿಡಬ್ಲ್ಯುಬಿ) ಗುರುತಿಸಿದೆ. ಅನೇಕ ಕಡೆಗಳಲ್ಲಿ ನೆಲಮಟ್ಟದ ಹರಿವು ಸ್ಥಗಿತಗೊಂಡಿದೆ. ವರ್ಷಪೂರ್ತಿ ಹರಿಯುವ ನದಿಗಳು ಋತುಮಾನದ ನದಿಗಳಾಗಿ ಬದಲಾಗಿವೆ. ಸಾವಿರಾರು ಅಡಿ ಕೊರೆದರೂ 30ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ನೀರು ಸಿಗದೇ ಇರುವುದರಿಂದ ಅಲ್ಲಿ ಕೊಳವೆ ಬಾವಿ ತೋಡದಂತೆ ಸರ್ಕಾರ 2013ರಲ್ಲೇ ಅಧಿಸೂಚನೆ ಹೊರಡಿಸಿದೆ. ಇಂತಹ ಕಡೆಗಳಲ್ಲಿ ಮಳೆ ನೀರು ಸಂಗ್ರಹ ಮತ್ತು ನೀರಿನ ಸಂರಕ್ಷಣೆಗೆ ಒತ್ತು ನೀಡಬೇಕಾದ ತುರ್ತು ಅಗತ್ಯವಿದೆ ಎಂದು ಪರಿಸರವಾದಿ ಹಾಗೂ ಜಲತಜ್ಞರ ಅಭಿಪ್ರಾಯ.

ಈ ಎಲ್ಲಾ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡು, ‘ಪಾತಾಳ ಗಂಗೆ’ ಯೋಜನೆಯ ತಾಂತ್ರಿಕ ಸಾಧ್ಯಷತೆ, ಅಂತರ್ಜಲದ ಮೇಲೆ ಮತ್ತು ಇತರ ಪರಿಸರ ಪರಿಣಾಮಗಳು–ಇವುಗಳ ಬಗ್ಗೆ ರಾಜ್ಯ ಸರಕಾರ ಜಲತಜ್ಞರು, ಭೂಗರ್ಭ ವಿಜ್ಞಾನಿಗಳು, ಪರಿಸರವಾದಿಗಳ ಚರ್ಚೆ ಸಂವಾದ ನಡೆಸಬೇಕು. ಇಂತಹ ಚರ್ಚೆ–ಸಂವಾದ ಇಲ್ಲದೆ, ಇಂತಹ ದೀರ್ಘಕಾಲೀನ ಅಪಾಯಕಾರಿ ಪರಿಣಾಮಗಳಿರುವ ಇಂತಹ ಯೋಜನೆಯನ್ನು ಸರಕಾರ ಕೈಗೆತ್ತಿಕೊಳ್ಳಬಾರದು.

ಜಾತ್ಯಾತೀತತೆ, ಸಬಲೀಕರಣ, ಮುನ್ನಡೆ
ಮೇ 14–15 : ಮುಸ್ಲಿಂ ಯುವ ಸಮಾವೇಶಕ್ಕೆ ಬನ್ನಿ



ಅನುಮಾನಿತ, ಅವಮಾನಿತ ಸಮುದಾಯದ ನೋವು ನಲಿವುಗಳ ಕುರಿತು ಚರ್ಚೆ, ಸಂವಾದ ಎಂಬ ಉದ್ದೇಶದೊಂದಿಗೆ ಮಂಗಳೂರಿನ ಶಾಂತಿ ನಿಲಯದಲ್ಲಿ ಮೇ 14, 15 ರಂದು ಎರಡು ದಿನಗಳ ಕಾಲ ಆಯೋಜಿಸಿರುವ "ಮುಸ್ಲಿಂ ಯುವ ಸಮಾವೇಶ" ದ ಗೋಷ್ಟಿಗಳು ಅಂತಿಮಗೊಂಡಿದೆ. ಆಹ್ವಾನ ಪತ್ರಿಕೆ ಸಿದ್ದಗೊಂಡಿದೆ. ಬಡತನ, ಹಸಿವು, ಅನಾದಾರ, ಅನುಮಾನ, ತಾರತಮ್ಯ, ಅವಮಾನಕ್ಕೆ ಗುರಿಯಾಗಿ ರಾಜಕೀಯ ಬಲಿಪಶು ಸಮುದಾಯವಾಗಿ ಅಭದ್ರತೆಯಿಂದ ನರಳುತ್ತಿರುವ ಮುಸ್ಲಿಮರನ್ನು ಸಕಾರಾತ್ಮಕ ದಿಕ್ಕಿನಲ್ಲಿ ಆಲೋಚನೆಗೆ ಹಚ್ಚುವ, ತಮ್ಮೆದುರಿನ ಸಮಸ್ಯೆ, ಸವಾಲುಗಳಿಗೆ ಪ್ರಜಾಪ್ರಭುತ್ವವಾದಿ ದಾರಿಯಲ್ಲಿ ಎದುರುಗೊಳ್ಳುವ, ಹಕ್ಕುಗಳಿಗಾಗಿ ಧ್ವನಿಎತ್ತುವ ವಿಧಾನಗಳ ಕುರಿತು ಚರ್ಚಿಸಲು, ಚಿಂತಿಸಲು ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಸಮಾವೇಶವನ್ನು ಡಿ.ವೈ.ಎಫ್ಐ. ಅಖಿಲ ಭಾರತ ಅಧ್ಯಕ್ಷ ಮುಹಮ್ಮದ್ ರಿಯಾಜ್ ಉದ್ಘಾಟಿಸಲಿದ್ದು, ರಹಮತ್ ತರಿಕೆರೆ, ಮುಜಾಫರ್ ಅಸಾದಿ, ದಿನೇಶ್ ಅಮೀನ್ ಮಟ್ಟು, ಫಣಿರಾಜ್, ರಂಜಾನ್ ದರ್ಗಾ, ಅಮಾನುಲ್ಲಾ ಖಾನ್, ಪೀರ್ ಬಾಷಾ ಮುಂತಾದ ಹಲವು ಪ್ರಗತಿಪರರು ತಜ್ಞರು ಭಾಗವಹಿಸಲಿದ್ದಾರೆ. ಮುಸ್ಲಿಂ ಸಮುದಾಯದ ಸಾಮಾಜಿಕ–ಶೈಕ್ಷಣಿಕ ಹಿಂದುಳಿದಿರುವಿಕೆ, ರಾಜಕೀಯ ಪ್ರಾತಿನಿಧ್ಯ, ದಮನಿತ ಸಮುದಾಯಗಳ ಐಕ್ಯತೆ, ಮುಸ್ಲಿಮರ ಬಗ್ಗೆ ಮಾಧ್ಯಮ ಪೂರ್ವಾಗ್ರಹ, ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಮರು ಮುಂತಾದ ಹಲವು ವಿಷಯಗಳ ಬಗ್ಗೆ ಚರ್ಚೆ ಸಂವಾದ ನಡೆಯಲಿವೆ.

ಕೋಮುವಾದದ ದಾಳಿಗಳಿಂದ ಕುಗ್ಗಿರುವ, ತನ್ನ ಇತಿಹಾಸ, ಪರಂಪರೆಯನ್ನೇ ಮರೆತು ಕೀಳರಿಮೆಗೆ, ಹತಾಷೆಗೆ ಒಳಗಾಗಿರುವ ಸಮುದಾಯದಲ್ಲಿ ಆತ್ಮವಿಶ್ವಾಸ, ಹೊಸ ಚೈತನ್ಯ ತುಂಬಲು ಪೂರಕವಾಗುವ ದಿಕ್ಕಿನಲ್ಲಿ ನಡೆಯುವ ಈ ಸಮಾವೇಶದಲ್ಲಿ ಸಮುದಾಯದ ಬಗ್ಗೆ ಕಾಳಜಿ ಹೊಂದಿರುವ ಜಾತ್ಯಾತೀತ ಮನೋಭಾವದ ಮುಸ್ಲಿಂ ಯುವ ತಲೆಮಾರು ಭಾಗವಹಿಸಲಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಸಮಾವೇಶದಲ್ಲಿ ಭಾಗಿಯಾಗಲು ಯುವಜನರು ಹೆಸರುಗಳನ್ನು ನೊಂದಾಯಿಸತೊಡಗಿದ್ದಾರೆ. ಬಹಳಷ್ಟು ಜನ ಭಾಗಿಯಾಗಲು ಆಸಕ್ತಿ ವ್ಯಕ್ತ ಪಡಿಸುತ್ತಿದ್ದಾರೆ. ಈ ರೀತಿ ಆಸಕ್ತ ಯುವ ಸಮುದಾಯಕ್ಕೆ ಸಮಾವೇಶದಲ್ಲಿ ಭಾಗಿಗಳಾಗಲು ಮುಕ್ತ ಅವಕಾಶ ಕಲ್ಪಿಸಲಾಗಿದ್ದು, ಹೊರಜಿಲ್ಲೆಗಳಿಂದ ಭಾಗವಹಿಸಲು ಆಸಕ್ತರಾಗಿರುವವರು ಹೆಸರು ನೊಂದಾಯಿಸಿದರೆ ವಸತಿ ಸಹಿತ ಏರ್ಪಾಡುಗಳನ್ನು ಮಾಡಲಾಗುವುದು.

ಕರ್ನಾಟಕದ ಇತಿಹಾಸದಲ್ಲೆ ಪ್ರಥಮ ಬಾರಿಗೆ ಇಂತಹ ಒಂದು ಪ್ರಯತ್ನ ನಡೆಯುತ್ತಿದ್ದು, ತಾವೆಲ್ಲರು ಬೆಂಬಲಿಸುತ್ತೀರಿ, ಯಶಸ್ಸಿನಲ್ಲಿ ಸಹಭಾಗಿಗಳಾಗುತ್ತೀರಿ ಎಂದು ಭಾವಿಸುತ್ತೇವೆ, ಆಶಿಸುತ್ತೇವೆ. ನಿಮ್ಮ ನಿರೀಕ್ಷೆಯಲ್ಲಿರುತ್ತೇವೆ.

–ಡಿ.ವೈ.ಎಫ್.ಐ.

ಮಂಗಳೂರು ನಿವೇಶನ ರಹಿತರ ಚಳುವಳಿಗೆ ಜಯ



ಮಂಗಳೂರು ಮಹಾನಗರ ಪಾಲಿಕೆಯ ಎದುರು ನಿವೇಶನ ರಹಿತರ ಹೋರಾಟ ಸಮಿತಿಯು ದಿನಾಂಕ 24ರಂದು ಬೆಳಿಗ್ಗೆ 10 ಗಂಟೆಗೆ ಅನಿರ್ದಿಷ್ಟಾವಧಿ ಚಳುವಳಿಯನ್ನು ಕೈಗೊಂಡಿದ್ದು ಎರಡನೇ ದಿನ ಅಂದರೆ 25ರಂದು ಸಂಜೆ 7.30 ಗಂಟೆಗೆ ಮಹಾನಗರ ಪಾಲಿಕೆಯ ಆಯುಕ್ತರು ಲಿಖಿತ ಭರವಸೆಯ ಮೂಲಕ ನಮ್ಮ ಬೇಡಿಕೆಗಳನ್ನು ಪರಿಗಣಿಸುವ ಭರವಸೆ ನೀಡಿರುವ ಹಿನ್ನಲೆಯಲ್ಲಿ ಮುಷ್ಕರವನ್ನು ಹಿಂದಕ್ಕೆ ಪಡೆಯಲಾಗಿದೆ. ಕಳೆದ ಅಕ್ಟೋಬರ್ ತಿಂಗಳಲ್ಲಿ ಮಂಗಳೂರು ನಗರ ದಕ್ಷಿಣ ಕ್ಷೇತ್ರಕ್ಕೆ ಮತ್ತು ಡಿಸೆಂಬರ್ ತಿಂಗಳಲ್ಲಿ ಮಂಗಳೂರು ಉತ್ತರ ಕ್ಷೇತ್ರಕ್ಕೆ ನಿವೇಶನ ರಹಿತರ ಅಂತಿಮ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡಿದ್ದರೂ ಈ ಬಗ್ಗೆ ನಮ್ಮ ಸಂಘಟನೆಗೆ ಆ ಪಟ್ಟಿಯನ್ನು ನೀಡದೆ ಗುಪ್ತವಾಗಿ ಇರಿಸಿದ ಮಂಗಳೂರು ನಗರಾಶ್ರಯ ಸಮಿತಿಯ ದುರುದ್ದೇಶದ ಬಗ್ಗೆ ಪಟ್ಟಿ ದೊರೆಯುವುದರಿಂದಲೇ ಹಲವಾರು ಹಂತದ ಪ್ರತಿಭಟನೆಯನ್ನು ನಡೆದ ಅವಧಿಯಲ್ಲಿ ಇರುವ ದೋಷಗಳ ಬಗ್ಗೆ ತನಿಖೆ ನಡೆಸಬೇಕೆಂದು ಒತ್ತಾಯಿಸಿತ್ತು.

ಈ ಸಮಯದಲ್ಲಿ ನಿವೇಶನ ರಹಿತರ ಹೋರಾಟ ಸಮಿತಿಯು ಒಂದು ಖಾಸಗಿ ಸಂಸ್ಥೆಯಿಂದ 15 ವಾರ್ಡಿನಲ್ಲಿ ಸತ್ಯಶೋಧನಾ ವರದಿಯನ್ನು ಪಡೆಯಲು ಬಯಸಿತು. ಅದರಲ್ಲಿ ಆ ವಾರ್ಡಿನಲ್ಲಿ ಆಯ್ಕೆಗೊಂಡ 350 ಮಂದಿ ಫಲಾನುಭವಿಯಲ್ಲಿ 69 ಮಂದಿ ಅನರ್ಹರಿದ್ದಾರೆನ್ನುವುದು ವರದಿ ನೀಡಿತ್ತು. ಆಗ ನಾವು ವಾರ್ಡು ಮಟ್ಟದ ಚಳುವಳಿ, ಜಿಲ್ಲಾಧಿಕಾರಿ ಕಚೇರಿ ಎದುರು ಚಳುವಳಿ, ಸುರತ್ಕಲ್ ಕಚೇರಿ ಮುತ್ತಿಗೆ ಚಳುವಳಿಗಳನ್ನು ನಡೆಸಿ ವ್ಯಾಪಕ ಹೋರಾಟ ರೂಪಿಸಿ ಜಿಲ್ಲಾಧಿಕಾರಿಯವರಿಗೆ ಅನರ್ಹ ಪಟ್ಟಿ ಸಲ್ಲಿಸಲಾಗಿತ್ತು. ಎರಡು ತಿಂಗಳು ಕಳೆದರೂ ಯಾವುದೇ ಪ್ರತಿಕ್ರಿಯೆ ಬಾರದ ಕಾರಣ ಮುಂದಿನ ಚಳುವಳಿ ರೂಪಿಸಲಾಯಿತು. ಅಲ್ಲದೆ ವಿಧವೆಯರಿಗೆ, ಅಂಗವಿಕಲರಿಗೆ ಮತ್ತು ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರಿಗೆ ಯೋಗ್ಯವಾದ ಪ್ರಾತಿನಿಧ್ಯ ನೀಡಿರುವುದಿಲ್ಲ. ಬಡ ಪರಿಶಿಷ್ಟ ಜಾತಿ/ಪಂಗಡದ ಫಲಾನುಭವಿಗಳನ್ನು ಕೈಬಿಡಲಾಗಿದೆ.

ಈ ರೀತಿಯ ಗೊಂದಲ ಪಕ್ಷಪಾತ, ಅನ್ಯಾಯದ ವಿರುದ್ಧ ಅನಿವಾರ್ಯವಾಗಿ ಮಹಾನಗರ ಪಾಲಿಕೆ ಸ್ಪಂದಿಸದೇ ಇರುವಾಗ ಅನಿರ್ದಿಷ್ಟಾವಧಿ ಹೋರಾಟ ರೂಪಿಸುವುದು ಅನಿವಾರ್ಯವಾಯಿತು. ಈ ಹಿನ್ನಲೆಯಲ್ಲಿ ಮಹಾನಗರ ಪಾಲಿಕೆಯ ಎದುರು ತಾ. 24ರಿಂದ ಹಗಲು ರಾತ್ರಿ ಹೋರಾಟ ಪ್ರಾರಂಭವಾಯಿತು. ನಿವೇಶನ ರಹಿತರ ಹೋರಾಟ ಸಮಿತಿಯ ಜೊತೆ ತಾ. 25-04-2017ರಂದು ಸಂಜೆ 4ಕ್ಕೆ ದ್ವಿಪಕ್ಷೀಯ ಮಾತುಕತೆ ಮಹಾನಗರ ಪಾಲಿಕೆಯ ಆಯುಕ್ತರ ಸಮ್ಮುಖದಲ್ಲಿ ದೀರ್ಘ ಮಾತುಕತೆ ನಡೆದು ಅಂತಿಮವಾಗಿ ಲಿಖಿತ ರೂಪದಲ್ಲಿ ಉತ್ತರ ನೀಡುವುದಾಗಿ ಭರವಸೆ ನೀಡಿದರು. ರಾತ್ರಿ 7.30ಕ್ಕೆ ಜಂಟಿ ಆಯುಕ್ತರು ಹೋರಾಟ ಸ್ಥಳಕ್ಕೆ ಆಗಮಿಸಿ ಲಿಖಿತವಾದ ಪತ್ರವನ್ನು ನೀಡಿದರು. ಅಂತಿಮವಾಗಿ ಎರಡು ದಿನಗಳ ಕಾಲ ನಡೆದ ಹಗಲು ರಾತ್ರಿ ಹೋರಾಟವನ್ನು ಮುಕ್ತಾಯಗೊಳಿಸಲಾಯಿತು.

ಭರವಸೆಗಳು

1. ಪದವು ಶಕ್ತಿನಗರದಲ್ಲಿ ಜಿ+3 ಮಾದರಿ ಮನೆ ನಿರ್ಮಾಣ ಮಾಡಲು ಕೇಂದ್ರ ಹಾಗೂ ರಾಜ್ಯ ಸರಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರಕಿರುತ್ತದೆ. ಅಂದಾಜು ಪಟ್ಟಿಯನ್ನು ತಯಾರಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲು ಸುಮಾರು 1 ತಿಂಗಳು ಕಾಲಾವಕಾಶ ಬೇಕಾಗಿದ್ದು ತದನಂತರ ಟೆಂಡರ್ ಪ್ರಕ್ರಿಯೆಗೆ 2 ತಿಂಗಳು ಕಾಲವಕಾಶ ಬೇಕಾಗಿರುತ್ತದೆ. ಜಿ+3 ವಸತಿ ನಿರ್ಮಾಣಕ್ಕೆ ಅಂದಾಜು ಸುಮಾರು 2 ವರ್ಷ ತಗಲುವುದು.
2. ತಾವು ನೀಡಿದ ನಿವೇಶನ ರಹಿತರ ಪಟ್ಟಿಯಲ್ಲಿರುವ ಅನರ್ಹರ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ವರದಿಯನ್ನು ತಯಾರಿಸಲಾಗಿದೆ. ಸದ್ರಿ ವರದಿಯನ್ನು ಆಶ್ರಯ ಆಯ್ಕೆ ಸಮಿತಿಯಲ್ಲಿ ಮಂಡಿಸಿ ಮುಂದಿನ ಕ್ರಮ ಜರುಗಿಸಲಾಗುವುದು.
3. ಪ್ರಥಮ ಹಂತದಲ್ಲಿ ಕೈಗೊಂಡ ಯೋಜನೆಯ ಪ್ರಕ್ರಿಯೆ ಮುಕ್ತಾಯವಾದ ಕೂಡಲೇ ಎರಡನೇ ಹಂತದಲ್ಲಿ ಕಣ್ಣೂರಿನ ಕನ್ನಗುಡ್ಡೆಯ 11.25 ಎಕ್ರೆ ಜಾಗಕ್ಕೆ ಅರ್ಹ ನಿವೇಶನರಹಿತರನ್ನು ಆಯ್ಕೆ ಮಾಡಲಾಗುವುದು.

ಸಿಪಿಐ(ಎಂ) ದ.ಕ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಹೇಳಿದರು. ಅವರು ದಿನಾಂಕ 24-04-2017ರಂದು ಮಂಗಳೂರು ಮಹಾನಗರ ಪಾಲಿಕೆ ಎದುರು ನಿವೇಶನರಹಿತರ ಹೋರಾಟ ಸಮಿತಿ ನೇತೃತ್ವದಲ್ಲಿ ಆರಂಭವಾದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿದ್ದರು. ಹೋರಾಟದಲ್ಲಿ ಕೃಷ್ಣಪ್ಪ ಕೊಂಚಾಡಿ, ಸುನಿಲ್ ಕುಮಾರ್ ಬಜಾಲ್, ಮುನೀರ್ ಕಾಟಿಪಳ್ಳ, ಸಂತೋಷ್ ಬಜಾಲ್, ಸಾಧಿಕ್ ಕಣ್ಣೂರು, ನವೀನ್ ಬೊಲ್ಪುಗುಡ್ಡೆ, ಯೋಗೀಶ್ ಜಪ್ಪಿನಮೊಗರು, ಮಾಜಿ ಕೋರ್ಪೋರೇಟರ್ ಜಯಂತಿ ಬಿ. ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

ಹೋರಾಟದ ನೇತೃತ್ವವನ್ನು ಹೋರಾಟ ಸಮಿತಿಯ ಮುಖಂಡರಾದ ಪ್ರೇಮನಾಥ ಜಲ್ಲಿಗುಡ್ಡೆ, ಸಂತೋಷ್ ಶಕ್ತಿನಗರ, ಪ್ರಭಾವತಿ ಬೋಳೂರು, ನೂತನ್ ಕೊಂಚಾಡಿ, ಮಂಜುಳಾ ಶೆಟ್ಟಿ, ರೋಹಿಣಿ ಜಲ್ಲಿಗುಡ್ಡೆ, ಇರ್ಫಾ ಕಣ್ಣೂರು ವಹಿಸಿದರು.


– ಸಂತೋಷ್ ಶಕ್ತಿನಗರ

ಉರ್ವ ಸ್ಟೋರ್ಸ್ ಡಿವೈಎಫ್ಐ ಭವನ ಉದ್ಘಾಟನೆ

ಭಾರತದ ಸರ್ವತೋಮುಖ ಅಭಿವೃದ್ಧಿಗೆ ನವಸಮಾಜದ ನಿರ್ಮಾಣಕ್ಕೆ ಬೇಕಾಗಿರುವುದು ರಾಮಾಯಣದ ಭಾರತ ಅಲ್ಲ. ಮಹಾಭಾರತದ ಭಾರತ ಅಲ್ಲ. ಬದಲಾಗಿ ಬುದ್ಧರವರ ಭಾರತ, ಬಸವಣ್ಣರವರ ಭಾರತ, ಭಗತ್‌ಸಿಂಗ್‌ರವರ ಭಾರತ, ಡಾ. ಬಿ. ಆರ್. ಅಂಬೇಡ್ಕರ್‌ರವರ ಭಾರತ ಬೇಕಾಗಿರುವುದೆಂದು ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳು ದಿನಾಂಕ 23-04-2017ರಂದು ಮಂಗಳೂರು ನಗರ ಉರ್ವಾಸ್ಟೋರ್‌ನ ಸುಂಕದಕಟ್ಟೆ ಪ್ರದೇಶದಲ್ಲಿ ಕಾಮ್ರೇಡ್ ಸುಧೀರ್ ಕುಮಾರ್ ಸ್ಮಾರಕ ಗ್ರಂಥಾಲಯ ಮತ್ತು ಡಿವೈಎಫ್ಐ ಭವನವನ್ನು ಉದ್ಘಾಟಿಸಿ ಮಾತನಾಡಿದರು. ಮುಂದುವರಿದು ಮಾತನಾಡುತ್ತಾ, ಡಿವೈಎಫ್ಐ ಸಂಘಟನೆ ದೇಶಾದ್ಯಂತ ಬಡವರ ಅನ್ಯಾಯಕ್ಕೊಳಗಾದವರ ಬಗ್ಗೆ ನಿರಂತರ ಬೀದಿಗಿಳಿದು ಅವರ ಧ್ವನಿಯಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಡಿವೈಎಫ್ಐ ಭವನವು ಜನರ ಸಮಸ್ಯೆಗಳ ಬಗ್ಗೆ ಚರ್ಚಿಸಲು ವೇದಿಕೆಯಾಗಬೇಕೆಂದು ಆಶಿಸಿದರು.

ಈ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿವೈಎಫ್ಐ ಭವನ ಕಟ್ಟಡ ಸಮಿತಿಯ ಕಾರ್ಯದರ್ಶಿ ಪ್ರದೀಪ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಮಂಗಳೂರು ನಗರದ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಡಿವೈಎಫ್ಐ ಜಿಲ್ಲಾಧ್ಯಕ್ಷರಾದ ದಯಾನಂದ ಶೆಟ್ಟಿ, ಕಾರ್ಯದರ್ಶಿ ಸಂತೋಷ್ ಕುಮಾರ್ ಬಜಾಲ್, ನಿವೇಶನರಹಿತರ ಹೋರಾಟ ಸಮಿತಿಯ ಮಂಗಳೂರು ನಗರ ಕಾರ್ಯದರ್ಶಿ ಸಂತೋಷ್ ಶಕ್ತಿನಗರ, ಕಟ್ಟಡ ಸಮಿತಿಯ ಮಂಗಳೂರು ನಗರ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಡಿವೈಎಫ್ಐ ಮಾಜಿ ರಾಜ್ಯಾಧ್ಯಕ್ಷರಾದ ಎಸ್. ವೈ. ಗುರುಶಾಂತ್, ಚಲನ ಚಿತ್ರ ನಟರಾದ ವಿಸ್ಮಯ ವಿನಾಯಕ ಭಾಗವಹಿಸಿದ್ದರು. ಕಾರ್ಯಕ್ರಮದ ನೇತೃತ್ವವನ್ನು ಸ್ಥಳೀಯ ಮುಖಂಡರಾದ ಮನೋಜ್ ಕುಲಾಲ್, ಕಿಶೋರ್, ಧನರಾಜ್, ಇಕ್ಬಾಲ್, ನಾಗೇಂದ್ರ, ರಘುವೀರ, ಶ್ರುತಿ, ಹರಿನಾಕ್ಷಿ, ಪ್ರಶಾಂತ್ ಎಂ. ಬಿ, ಪ್ರಶಾಂತ್ ಆಚಾರ್, ಸುಕೇಶ್ ಮುಂತಾದವರು ವಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಉಪಾಧ್ಯಕ್ಷರಾದ ಬಿ.ಕೆ. ಇಮ್ತಿಯಾಜ್ ವಹಿಸಿದ್ದರು.

– ಧನರಾಜ್



ಪಂಜಿಮೊಗರು ಶಾಲೆಯಲ್ಲಿ ಚಿಣ್ಣರ ಮೇಳ



ಭಗತ್ ಸಿಂಗ್ ಮೆಮೋರಿಯಲ್ ಟ್ರಸ್ಟ್ (ರಿ.) ಪಂಜಿಮೊಗರು, ಮಕ್ಕಳ ಸ್ವರ, ಡಿ.ವೈ. ಎಫ್.ಐ , ಎಸ್.ಎಫ್.ಐ ಪಂಜಿಮೊಗರು ಘಟಕಗಳ ನೇತೃತ್ವದಲ್ಲಿ ಚಿಣ್ಣರ ಮೇಳ 2017 ಪಂಜಿಮೊಗರು ಸರಕಾರಿ ಶಾಲೆಯಲ್ಲಿ ಎಪ್ರಿಲ್ 18 ರಂದು 22 ರ ವರೆಗೆ ಯಶಸ್ವಿಯಾಗಿ ನಡೆಯಿತು. ಶಿಬಿರವನ್ನು ಸ್ಥಳೀಯ ಶಿಕ್ಷಣ ಪ್ರೇಮಿ ಪಿ.ಸಿ ಸುಕುಮಾರ್ ಉದ್ಘಾಟಿಸಿದರು. ಕಾರ್ಪೊರೇಟರ್ ದಯಾನಂದ ಶೆಟ್ಟಿ, ಶಾಲಾಭಿವೃದ್ಧಿ ಸಮಿತಿಯ ಸುರೇಶ್ ಕುಲಾಲ್ ಡಿವೈಎಫ್ಐ ಮುಖಂಡರಾದ ನೌಶಾದ್, ಹನುಮಂತ ಉಪಸ್ಥಿತರಿದ್ದರು

ಶಿಬಿರದಲ್ಲಿ ಪ್ರಖ್ಯಾತ ಸಂಪನ್ಮೂಲ ವ್ಯಕ್ತಿಗಳಿಂದ ಚಿತ್ರಕಲೆ, ಮಿಮಿಕ್ರಿ, ಕರಕುಶಲ ಕಲೆ, ಜನಪದ, ಜಾಗೃತಿ, ದೇಶಭಕ್ತಿ ಸಂಗೀತ, ಪೇಪರ್ ಕ್ರಾಫ್ಟ್, ರಸ್ತೆ ಸುರಕ್ಷತೆ ಮತ್ತು ಪ್ರಥಮ ಚಿಕಿತ್ಸೆ, ಮಾಧ್ಯಮ ಮತ್ತು ಪತ್ರಿಕೆ, ಅಭಿನಯ, ಸಿನಿಮಾ ಪ್ರದರ್ಶನ ಹಾಗೂ ಹಾವುಗಳ ಕುರಿತು ಜಾಗೃತಿ ಮತ್ತು ಮಾಹಿತಿ ಹಾವು ಮತ್ತು ನಾವು ಕಾರ್ಯಕ್ರಮಗಳು ನಡೆಯಿತು.

ಐದು ದಿನಗಳ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ರಾಜ್ಯದ ಪ್ರಖ್ಯಾತ ಚಿತ್ರಕಾರರಾದ ಚಿತ್ರಕಾರ ಜಿ ಕಂದನ್ ಪಂಜಿಮೊಗರು, ಮೈಮ್ ರಾಮ್‌ದಾಸ್, ಅಕ್ಷತಾ ಕುಡ್ಲ, ನವೀನ್ ಪಿಲಾರ್, ಗುರುರಾಜ್ ಸನಿಲ್, ಸಹಮತ ಫಿಲಂ ಸೊಸೈಟಿಯ ತಂಡ, ವೀಣಾ ಮತ್ತು ವಾಣಿ ಪಂಜಿಮೊಗರು, ತಸ್ಲೀಮಾ ಬಾನು, ಭಾರತೀಯ ರೆಡ್ ಕ್ರಾಸ್‌ನ ಡಾ. ಬಿ ಆರ್ ಭಟ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.

ಶಿಬಿರದಲ್ಲಿ ಸಂಯೋಜಕರಾದ ಸೌಮ್ಯ, ರಾಘವೇಂದ್ರ, ಶರಣ್ ದೀಪ್, ಸುನಿಲ್, ಆಕಾಶ್, ಕಾರ್ತಿಕ್, ಸಂತೋಷ್, ಚರಣ್, ಅನಿಲ್, ಮನೀಶ್, ಮುಸ್ತಾಫ ಉಪಸ್ಥಿತರಿದ್ದರು.

ರೇಗಾ ಅಡಿಯಲ್ಲಿ ಕೆರೆ ಹೂಳೆತ್ತುವ ಕಾರ್ಯಕ್ರಮ ವಿಸ್ತರಣೆ



ರೇಗಾ ಅಡಿಯಲ್ಲಿ ಹಲವು ಕಡೆ ಕೆರೆ ಹೂಳೆತ್ತುವ ಗುಳೆ ಹೋಗುವ ಕಾರ್ಮಿಕರಿಗೆ ಕೆಲಸ ಒದಗಿಸುವ ಕಾರ್ಯಕ್ರಮವನ್ನು ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಜ್ಞಾ ಕಾನೂನು ಸಲಹಾ ಸಮಿತಿ ಇನ್ನೂ ಹಲವು ಕಡೆ ವಿಸ್ತರಿಸಿದೆ. ಮೂರು ಹಳ್ಳಿಗಳ ವರದಿಗಳು

ಶಾದಿಪುರ:

ದಿನಾಂಕ 20.4.2017ರಂದು ಚಿಂಚೋಳಿ ತಾಲ್ಲೂಕಿನ ಶಾದಿಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೆರೆಯಲ್ಲಿ 321 ಶ್ರಮಿಕರಿಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯಡಿಯಲ್ಲಿ ಕಾಮಗಾರಿಯನ್ನು ಆರಂಭಿಸಲಾಯಿತು. ನಾಲ್ಕು ದಿನಗಳ ಕಾಲ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಜ್ಞಾ ಕಾನೂನು ಸಲಹಾ ಸಮಿತಿ ಉದ್ಯೋಗ ಖಾತ್ರಿ ಅನುಷ್ಠಾನದ ಅಭಿಯಾನ ನಡೆಸಿ ಶಾದಿಪುರ ಮತ್ತು ವೆಂಕಟಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮ ಮತ್ತು ಥಾಂಡಾಗಳಿಂದ ಮೂರುವರೆ ಸಾವಿರದಷ್ಟು ಕಾರ್ಮಿಕರಿಗೆ ಕೆಲಸಕ್ಕಾಗಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ 321 ಜನರ ಹೆಸರಿಗೆ ಕೆಲಸ ಒದಗಿಸುವ ಯಾದಿಯನ್ನು ಸಿದ್ದಗೊಳಿಸಿ ಎನ್.ಎಂ.ಆರ್. ಸೃಜಿಸಿ ಸಾಮೂಹಿಕವಾಗಿ ಕೆಲಸ ದೊರೆಯುವಂತೆ ಕ್ರಮ ಕೈಗೊಳ್ಳಲಾಗಿತ್ತು.

ಶಾದಿಪುರ ವ್ಯಾಪ್ತಿಯ ಕೆರೆಯಲ್ಲಿ ಇಂದು ಬೆಳಿಗ್ಗೆ 10.00 ಗಂಟೆಗೆ ಕೆರೆಯ ಹೂಳೆತ್ತುವ ಕಾಮಗಾರಿಯನ್ನು ಉದ್ಘಾಟನೆ ಮಾಡಲಾಯಿತು. ಕಾಮಗಾರಿಯ ಉದ್ಘಾಟನೆಯು ಜನವಾದಿ ಮಹಿಳಾ ಸಂಘಟನೆಯ ನೀಲಾ ಕೆ ಹಾಗೂ ತಾಲ್ಲೂಕು ಪಂಚಾಯತ್ ಇಓ ಅವರಾದ ಅನಿಲಕುಮಾರ ರಾಠೋಡ, ಸಂತೋಷಕುಮಾರ ಯಾಚೆ ಸಹಾಯಕ ನಿರ್ದೇಶಕರು, ಶಾದಿಪುರ ಪಿಡಿಓ ರಾಮಕೃಷ್ಣ ಅವರು ನೆರವೇರಿಸಿದರು. ಮೀನಾಕ್ಷಿ ಬಾಳಿ, ಪ್ರಭು ಖಾನಾಪುರೆ, ನಂದಾದೇವಿ ಮಂಗೊಂಡಿ, ಮೀನಾಕುಮಾರಿ ನೌಬಾದಕರ್, ರೇಷ್ಮಾ ಕುಂದನ್, ನಿಂಗಪ್ಪ ಮುಂತಾದವರು ಕೆರೆಯ ಹೂಳೆತ್ತುವ ಮೂಲಕ ಉದ್ಘಾಟನೆಗೆ ನೆರವು ನೀಡಿದರು. ಜೊತೆಗೆ ಕ್ಷೇತ್ರ ಸಹಾಯಕರಾದ ಬಾಬು ಬೇಗಾರ, ಶಂಕರ್, ನಬಿಪಟೇಲ, ಗುಂಡಪ್ಪ, ಶ್ರೀಕಾಂತ, ಶ್ರೀನಾಥ, ಪಂಡರಿನಾಥ, ಶ್ರೀಧರ ವಗ್ಗಿ, ಚಂದ್ರಕಾಂತ, ದಶರಥ, ಮೈಬೂಬ, ಆಕಾಶ್ ಚಂದನಕೇರಾ, ನಾಗೇಂದ್ರ ಯಾದವ್, ಮುಂತಾದವರು ಕೆರೆಯ ಕಾಮಗಾರಿ ಚಾಲನೆಗೆ ನೆರವು ನೀಡಿದರು.

ಆರಂಭದಲ್ಲಿ ರೇಷ್ಮಾ ಕುಂದನ್, ಇವರು ಶ್ರಮಿಕ ಗೀತೆಯನ್ನು ಹಾಡಿದರು. ನತೆಯನ್ನುದ್ದೇಶಿಸಿ ಮಾತನಾಡಿದ ನೀಲಾ ಕೆ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯಾದ ಅನಿಲಕುಮಾರು ರಾಠೋಡ ಶಾದಿಪುರ ಪಿಡಿಓ ರಾಮಕೃಷ್ಣ ಅವರುಗಳು ಮಾತನಾಡಿದರು. ಸಭೆಯಲ್ಲಿ ತಾಂತ್ರಿಕ ಸಹಾಯಕರಾದ ಶ್ರೀಕಾಂತ ಅವರು ಇದ್ದು ಮಾರ್ಕ್‌ಔಟ್ ಮಾಡಿಕೊಟ್ಟರು. ಮತ್ತು ಅಭಿಯಾನದುದ್ದಕ್ಕೂ ಜೊತೆಗಿದ್ದು ರೇಗಾ ಜಾರಿಗೆ ನೆರವಾಗಿರುವರು. ಬಿಲ್ ಕಲೆಕ್ಟರ್ ಅಶೋಕ ಮುತ್ತಂಗಿಕರ ಹಾಗೂ ಹೈದರ್ ಅವರು ರೇಗಾ ಕಾರ್ಯಕ್ರಮ ಯಶಸ್ವಿಗೆ ನೆರವಾದರು.

ಗೌಡಗಾಂವ ನಾಲಾ :

ದಿನಾಂಕ 25-4-2017 ರಂದು ಮಹಾತ್ಮಾ ಗಾಂಧೀ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಬೆವರಹನಿ ಬಳಗವು ಕೊಗನೂರ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಗೌಡಗಾಂವದ ಅಮರ್ಜಾ ನಾಲಾದಲ್ಲಿ ಹೂಳು ಎತ್ತುವ ಕೆಲಸಕ್ಕೆ ಚಾಲನೆ ನೀಡಿತು. ಗೌಡಗಾಂವ ಎಂಬುದು ಅಫಜಲಪೂರ ತಾಲೂಕಿನಲ್ಲಿರುವ ಪುಟ್ಟ ಹಳ್ಳಿ, ಅಲ್ಲಿ 200 ಕ್ಕೂ ಮೇಲ್ಪಟ್ಟು ಕೂಲಿ ಕಾರ್ಮಿಕರು ಇದ್ದಾರೆ.

ಬೆವರಹನಿ ಬಳಗದ ಮಹಿಳೆಯರು ಗುರುತು ಪರಿಚಯವಿಲ್ಲದ ಹಳ್ಳಿಗಳಿಗೆ ತೆರಳಿ ಕೆಲಸ ಮಾಡಿಸುವ ಬದಲು ಆ ಎಲ್ಲ ಮಹಿಳೆಯರು ತಮ್ಮ ತವರೂರುಗಳನ್ನೆ ಆಯ್ಕೆ ಮಾಡಿಕೊಂಡರು. ಅದ-ಕ್ಕೆ ಅವರು ತವರ ಋಣ ತೀರಿಸೋಣ ಎಂದು ಹೆಸರಿಟ್ಟರು. ಈ ಹಿನ್ನಲೆಯಲ್ಲಿ ಅಶ್ವಿನಿ ಮದನಕರ್ ಮತ್ತು ನಂದಾದೇವಿ ಮಂಗೋಂಡಿಯವರು ಕೂಲಿಕಾರ್ಮಿಕ ಮಹಿಳೆಯರೊಟ್ಟಿಗೆ ಅವರ ಹಳ್ಳಿಗಳಿಗೆ ತೆರಳಿ ಖಾತ್ರಿ ಕಾಯ್ದೆಯ ಸ್ವರೂಪ, ಪ್ರಕೀಯೆ ಇತ್ಯಾದಿಗಳನ್ನು ತಿಳಿಸಿ ಬಂದರು. ಗೌಡಗಾಂವದಲ್ಲಿ ಹೋಗಿ ತಡರಾತ್ರಿಯವರೆಗೆ ಕುಳಿತು ನಲವತ್ತು ಜನರ ನಮೂನೆ 1 ಮತ್ತು 6 ನ್ನು ತುಂಬಿಸಿ ಪಂಚಾಯತಿಗೆ ಸಲ್ಲಿಸಿ ಬಂದಿದ್ದರು

ಇದರ ಫಲವಾಗಿ ಅಲ್ಲಿನ ಪಿಡಿಓ ಮೋತಿರಾಮ ಅವರು ದಿನಾಂಕ 24-4-2017 ರಂದು ಎನ್ ಎಂ ಆರ್(ಕೆಲಸದ ಆದೇಶ) ತೆಗೆದರು. ಇಂದು ಮುಂಜಾನೆ ಗೌಡಗಾಂವಕ್ಕೆ ಬೆವರಹನಿ ಬಳಗದ ಡಾ ಮೀನಾಕ್ಷಿ. ಬಾಳಿ, ಡಾ ಪ್ರಭು ಖಾನಾಪುರೆ, ಅಶ್ವಿನಿ ಮದನಕರ್ ಅವರು ತೆರಳಿದ್ದರು. ಅಫಜಲಪೂರ ತಾಲೂಕಿನ ಎ.ಡಿ ರಮೇಶ ಸುಲ್ಪಿಯವರು ಬಂದಿದ್ದರು. ಕಲಬುರಗಿ ಜಿಲ್ಲೆಯ ಪ್ರಮುಖ ಹಳ್ಳವಾಗಿರುವ ಅಮರ್ಜಾದಲ್ಲಿ ಸುಮಾರು ನಲವತ್ತು ಜನರಿಗೆ ಅಳತೆ ಪ್ರಮಾಣ ಗುರುತಿಸಿ ಕೆಲಸದ ಉದ್ಘಾಟನೆ ಮಾಡಲಾಯಿತು. ಕೆಲಸ ಪ್ರಾರಂಭಕ್ಕಿಂತ ಮುಂಚೆ ಮೀನಾಕ್ಷಿ ಬಾಳಿಯವರು ಉದ್ಯೋಗ ಖಾತ್ರಿ ಕಾಯ್ದೆಯ ಕುರಿತು ವ್ಯಾಪಕ ಮಾಹಿತಿ ನೀಡಿದರು. ಕೆಲಸ ಮಾಡಿದ ನಂತರ ಕೂಲಿ ದೊರೆಯುವ ಕ್ರಮವನ್ನು ಕುರಿತು ಎಚ್ಚರಿಕೆ ನೀಡಿ ಕಾರ್ಮಿಕರು ತಮ್ಮ ಉದ್ಯೋಗದ ಚೀಟಿ ಮತ್ತು ಬ್ಯಾಂಕ್ ಅಕೌಂಟ ಯಾರಿಗೂ ಕೊಡದಂತೆ ಮನವಿ ಮಾಡಿದರು. ನಂತರ ಪ್ರಭು ಖಾನಾಪುರೆ ಮತ್ತು ಅಶ್ವಿನಿ ಮದನಕರ್ ಅವರು ಕೆಲಸದ ಸ್ಥಳದಲ್ಲಿ ದೊರೆಯುವ ಸೌಲಭ್ಯಗಳನ್ನು ಕುರಿತು ಮಾಹಿತಿ ನೀಡಿದರು. ಎ.ಡಿ ರಮೇಶ ಅವರು ಗುದ್ದಲಿ ಹಾಕಿ ಕೆಲಸಕ್ಕೆ ಚಾಲನೆ ನೀಡಿದರಲ್ಲದೆ ಕೂಲಿಯನ್ನು 15 ದಿನದೊಳಗಾಗಿ ಪಾವತಿಯಾಗುವಂತೆ ನೋಡಿಕೊಳ್ಳುವುದಾಗಿ ಭರವಸೆ ನೀಡಿದರು. ಕೆಲಸವನ್ನು ಆಶಿಸಿ ಇನ್ನೂ ಹತ್ತಾರು ಕಾರ್ಮಿಕರು ನಾಲಾದಲ್ಲಿ ಉಪಸ್ಥಿತರಿದ್ದರಾದರೂ ಎನ್.ಎಂ.ಆರ್ ದೊರೆಯದ್ದಕ್ಕಾಗಿ ಅವರು ಕೆಲಸ ಮಾಡಲು ಸಾಧ್ಯವಾಗಲಿಲ್ಲ. ಪಿಡಿಓ ಮೋತಿರಾಮ ನಾಳೆಯೇ ಅವರಿಗೆ ಕೆಲಸ ಕೊಡುವುದಾಗಿ ಭರವಸೆ ನೀಡಿದರು. ನಾಳೆ ಅಲ್ಲಿ ನೂರಕ್ಕಿಂತಲೂ ಹೆಚ್ಚು ಕೂಲಿಕಾರರು ಕೆಲಸಕ್ಕೆ ಬರಲಿದ್ದಾರೆ.

ಚಿಕ್ಕನಿಂಗದಳ್ಳಿ :

22.4.2017 ರಂದು ಚಿಂಚೋಳಿ ತಾಲ್ಲೂಕಿನ ಶಾದಿಪುರ ಗ್ರಾಮ ಪಂಚಾಯತನ ಚಿಕ್ಕನಿಂಗದಳ್ಳಿ ಗ್ರಾಮದ ಹತ್ತಿರವಿರುವ ಕೆರೆಯಲ್ಲಿ ಕೆರೆ ಹೂಳೆತ್ತುವ ಕಾಮಗಾರಿಯನ್ನು ಆರಂಭಿಸಲಾಯಿತು. ಕಾಮಗಾರಿಯ ಉದ್ಘಾಟನೆಯನ್ನು ತಾಲ್ಲೂಕು ಪಂಚಾಯತನ ಕಾರ್ಯ ನಿರ್ವಹಣಾಧಿಕಾರಿ, ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಅಧ್ಯಕ್ಷರಾದ ಡಾ.ಮೀನಾಕ್ಷಿ ಬಾಳಿ ಇವರು ನೆರವೇರಿಸಿದರು. ನೀಲಾ ಕೆ, ನಿಂಗಪ್ಪ ಮಂಗೊಂಡಿ, ರಾಘವೇಂದ್ರ ಭಜಂತ್ರಿ, ಸಿಪಿಐ, ಲೋಕಾಯುಕ್ತ ಇವರು ಜನತೆಯನ್ನುದ್ದೇಶಿಸಿ ಮಾತನಾಡಿದರು. ತಾಲ್ಲೂಕು ಪಂಚಾಯತ್ ಅ ಧ್ಯ-ಕ್ಷೆ ರೇಣುಕಾ ಚವ್ಹಾಣ ಹಾಗೂ ತಾ.ಪ.ಸದಸ್ಯರಾದ ರಾಮರಾವ್ ಇವರು ಹಾಜರಿದ್ದರು. ತಾಲ್ಲೂಕು ಪಂಚಾಯತನ ಕಾರ್ಯನಿರ್ವಹಣಾಧಿಕಾರಿಯಾದ ಅನಿಲ ರಾಠೋಡ, ಡಾ.ಮೀನಾಕ್ಷಿ ಬಾಳಿ, ನಿಂಗಪ್ಪ ಮಂಗೊಂಡಿ ನೀಲಾ ಕೆ, ಶಾದಿಪುರ ಗ್ರಾ.ಪ. ಅಭಿವೃದ್ಧಿ ಅಧಿಕಾರಿಯಾದ ರಾಮಕೃಷ್ಣ ಅವರುಗಳು ಮಾತನಾಡಿದರು. ಶ್ರೀಕಾಂತ, ತಾಂತ್ರಿಕ ಸಹಾಯಕರು, ಕ್ಷೇತ್ರ ಸಹಾಯಕರಾದ ಶ್ರೀಧರ, ನಬಿ ಪಟೇಲ್, ಶಂಕರ್ ಸಿಂಗ್, ಗುಂಡಪ್ಪ, ಉಮೇಶ್, ಜಗನ್ನಾಥ್, ಸಾಯಬಣ್ಣ ಮುಂತಾದವರು ಭಾಗವಹಿಸಿದರು. ತಾಲ್ಲೂಕು ಪಂಚಾಯತ್ನ ಐಸಿ ಕೋಆರ್ಡಿನೇಟರ್ ಭೀಮಾಶಂಕರ್ ಉಪಸ್ಥಿತರಿದ್ದರು.

– ಡಾ ಮೀನಾಕ್ಷಿ ಬಾಳಿ



ಪೇಜಾವರ ಶ್ರೀಗಳ ಹೇಳಿಕೆ – ಸಿಪಿಐ(ಎಂ) ವಿಷಾದ

1992ರ ಬಾಬರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಎಲ್. ಕೆ.ಅಧ್ವಾಣಿ, ಉಮಾ ಭಾರತಿ ಮೊದಲಾದವರ ಮೇಲಿನ ಆರೋಪ ಸಾಬೀತಾದರೂ ಅವರು ತಪ್ಪಿತಸ್ಥರಲ್ಲ ಎಂದು ಪೇಜಾವರ ಶ್ರೀಗಳು ಹೇಳಿರುವುದು ವಿಷಾದದ ಸಂಗತಿ ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಅಭಿಪ್ರಾಯ ಪಟ್ಟಿದೆ.

ಬ್ರಿಟಿಷರ ವಿರುದ್ದ ಹೋರಾಡಿದ ಭಾರತದ ಜನತೆ 1950 ಜನವರಿ 26ರಂದು ಡಾ.ಬಿ.ಆರ್. ಅಂಬೇಡ್ಕರ್ ನೇತೃತ್ವದಲ್ಲಿ ರಚಿಸಿದ ಸಂವಿಧಾನವನ್ನು ಅಂಗೀಕರಿಸಿದೆ. ಈ ಸಂವಿಧಾನದಲ್ಲಿ ಎಲ್ಲಾ ಧರ್ಮಗಳಿಗೂ ಸಮಾನ ಅವಕಾಶವಿದೆ. ಯಾವುದೇ ಧರ್ಮ ಶ್ರೇಷ್ಠ ಎಂಬುದಾಗಲೀ, ಇತರೆ ಧರ್ಮದವರು 2ನೇ ದರ್ಜೆ ನಾಗರಿಕರು ಎಂಬುದಾಗಲೀ ಇಲ್ಲ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಮುಸಲ್ಮಾನರೂ ಸಾಕಷ್ಟು ತ್ಯಾಗ ಮಾಡಿದ್ದಾರೆ. ಅಂತಹ ಸ್ವಾತಂತ್ರ್ಯದ ಆಶಯವನ್ನು ಉಳಿಸಿ ಬೆಳೆಸಬೇಕು.

ರಾಮ ಮಂದಿರ ಕಟ್ಟುವುದಕ್ಕೆ ಯಾರದೂ ವಿರೋಧವಿಲ್ಲ. ಆದರೆ ಅದು ಕೋರ್ಟಿನ ತೀರ್ಮಾನದಂತೆ ಆಗಬೇಕು. ಈ ದೇಶದ ಸಂವಿಧಾನದಂತೆ ನಡೆಯಬೇಕು. ಪೇಜಾವರ ಶ್ರೀಗಳು ಬಾಬರಿ ಮಸೀದಿ ಧ್ವಂಸವನ್ನು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೋಲಿಸಿದ್ದು ಆಘಾತಕಾರಿ ಎಂದು ಸಿಪಿಐ(ಎಂ) ಬಣ್ಣಿಸಿದೆ. ಇದು ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಡಿದ ಅವಮಾನವಾಗಿದೆ.

ಆಘಾತಕ್ಕೆ ಒಳಗಾಗಿರುವ ಸಮುದಾಯವನ್ನು ಇನ್ನಷ್ಟು ಆತಂಕಕ್ಕೆ ಒಳಪಡಿಸುವುದರ ಬದಲಾಗಿ ಆ ಸಮುದಾಯಕ್ಕೆ ಸ್ಥೈರ್ಯ, ಧೈರ್ಯತುಂಬಿಸುವ ಕೆಲಸ ಆಗಬೇಕಾಗಿದೆಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಅಭಿಪ್ರಾಯ ಪಟ್ಟಿದೆ.

ನಾಳಿನ ಕಾರ್ಯಕ್ರಮಗಳು

- **"ಕಾರ್ಮಿಕ ಹಕ್ಕುಗಳ ರಕ್ಷಣೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳ ಜಾರಿ ಹಾಗು ಸಾರ್ವಜನಿಕ ಉದ್ದಿಮೆಗಳ ಉಳಿವಿಗಾಗಿ"** ಮೇ 1 2017 ಕಾರ್ಮಿಕ ದಿನಾಚರಣೆ
- **"ಮುಸ್ಲಿಂ ಯುವ ಸಮಾವೇಶ್"** ಮೇ 14–15, ಡಿವೈಎಫ್ಐ ಮಂಗಳೂರು
- **"ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ"** ಕಾರ್ಯಾಗಾರ, ಜೂನ್ 3–4, ಬೆಂಗಳೂರು
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1–2, ಕುಂದಾಪುರ

ಅತಿಥಿ ಅಂಕಣ



ಪ್ರೊ. ರಾಜೇಂದ್ರಚೆನ್ನಿ

ಹಿಂಸೆಯ ವ್ಯಾಖ್ಯಾನಗಳು

ಬಹುಪಾಲು ಚಿಂತಕರು ಅಂದುಕೊಂಡಿದ್ದೆಂದರೆ ಇಪ್ಪತ್ತನೆಯ ಶತಮಾನದ ಹಿಂಸೆಯ ಪರ್ವವು ಮುಗಿದ ಮೇಲೆ ಮತ್ತು ಅದರ ಸಮಗ್ರವಾದ ವ್ಯಾಖ್ಯಾನಗಳು ಬಂದ ಮೇಲೆ ಮತ್ತೆ ಅಂಥ ಹಿಂಸೆ ಘಟಿಸಲಾರದು ಎಂದು. ಬಹುಶಃ ಮನುಷ್ಯ ಕುಲಕ್ಕೇ ಹಠಾತ್ತನೇ ಬಂದು ಹಿಡಿದು–ಕೊಂಡಿದ್ದ ಆವೇಶದ ಹುಚ್ಚು (Frenzy) ಇಳಿದು ಹೋಗಿರಬಹುದೆಂದು. ಆದರೆ 21 ನೇ ಶತಮಾನದ ಈ ದಶಕಗಳು ಇಂಥ ನಿರೀಕ್ಷೆಗಳನ್ನು ಸುಳ್ಳಾಗಿಸಿವೆ. ಧರ್ಮ, ರಾಷ್ಟ್ರೀಯತೆ, ರಾಜಕೀಯ ಸಿದ್ಧಾಂತ, ಜನಾಂಗೀಯ ದ್ವೇಷ, ಲಿಂಗ ತಾರತಮ್ಯ ಹೀಗೆ ಹಿಂಸೆಗೆ ಇರಬಹುದಾದ ಕಾರಣಗಳ, ಪಟ್ಟಿಯು ಕೊನೆಯಿಲ್ಲದಂತೆ ಬೆಳೆಯುತ್ತಲೇ ಇದೆ. ಹಿಂಸೆಗೆ ಕಾರಣಗಳನ್ನು ಹುಡುಕುವುದರಲ್ಲಿ ಮನುಷ್ಯರ ಎಲ್ಲಾ ಶಕ್ತಿಯೂ ಸೋರಿ ಹೋಗುತ್ತದೆ. ಈ ಹಿಂಸೆ ಮನುಷ್ಯಕುಲದ ಕೊನೆಗಾಲವನ್ನೇ ತರಬಲ್ಲದು ಎನ್ನುವುದು ಈಗ ಅತಿಶಯೋಕ್ತಿಯಾಗಿ ಕಾಣುತ್ತಿಲ್ಲ.

ಬಹುಶಃ ಹಿಂಸೆಯ ಬಗ್ಗೆ ಗಾಂಧಿ ಚಿಂತನೆ ಅತ್ಯಂತ ಸಮರ್ಪಕವಾಗಿತ್ತು. ಅವರ ಕಾಲದ ಹಿಂಸೆ ಆವರೆಗಿನ ಮನುಷ್ಯ ಇತಿಹಾಸದಲ್ಲಿಯೇ ಅತಿ ಹೆಚ್ಚಿನದಾಗಿತ್ತು. ಎರಡು ಮಹಾಯುದ್ಧಗಳು, ವಿಶ್ವದ ಬಹುಭಾಗವನ್ನು ಆವರಿಸಿದ್ದ ವಸಾಹತುಶಾಹಿಯ ಶೋಷಕ ಹಿಂಸೆ, ಮುಸೊಲಿನಿ, ಸ್ಟಾಲಿನ್ ಹಾಗೂ ಹಿಟ್ಲರ್‌ರಿಂದಾಗಿ ನಡೆದ ಮಾರಣ ಹೋಮಗಳು, ಅಸಂಖ್ಯಾತ ಕೊಲೆಗಳು– ಒಟ್ಟಾರೆ ಮನುಷ್ಯರ ಕಲ್ಪನಾ ಶಕ್ತಿಯನ್ನು ಮೀರಿ ಹೋದ ಹಿಂಸೆ ಇದಾಗಿ–ತ್ತು. ಅದನ್ನು ವಿವರಿಸಲು ಹಾಗೂ ವ್ಯಾಖ್ಯಾನಿಸಲು ತಕ್ಕುದಾದ ಭಾಷೆಗಳು, ರೂಪಕಗಳೇ ಇರಲಿಲ್ಲ. ಹಿಂಸೆಯ ವಿರಾಟ್ ಸ್ವರೂಪವು ಕಲ್ಪನೆ ಹಾಗೂ ಭಾಷೆಗಳ ಸಾಮರ್ಥ್ಯದ ತುದಿಗೆ ತಂದು ಮೌನದ ಮಡಿಲಲ್ಲಿ ತಳ್ಳಿ ಹೋಗುವಂಥಹದ್ದಾಗಿತ್ತು. ಹೀಗಾಗಿ ಮಾರಣ ಹೋಮದ ಅಮಾನುಷ ಹಿಂಸೆಯ ಬಗ್ಗೆ ಮೌನ ಮುರಿದು ಬರೆಯ ತೊಡಗುವುದು ಯಹೂದಿ ಬರಹಗಾರರಿಗೆ ಒಂದು ಕಠೋರವಾದ ನೈತಿಕ ಪ್ರಶ್ನೆಯಾಗಿತ್ತು. ಮೌನವನ್ನು ಮುರಿಯುವುದೋ ಅಥವಾ ಆದದ್ದನ್ನು ಮರೆತು ಬಿಡುವುದೋ? ಹೇಗೋ ಬದುಕುಳಿದವರು ಮತ್ತೆ ನಡೆದು ಹೋದ ಹಿಂಸೆಯನ್ನು ಧ್ಯಾನಿಸುವುದೇ? ಇದೇ ಪ್ರಶ್ನೆ ಭಾರತದ ವಿಭಜನೆಯ ಸಂದರ್ಭದಲ್ಲಿ ಅಮಾನುಷವಾದ ಹಿಂಸೆಯನ್ನು ಕಂಡು ಅನುಭವಿಸಿದವರು ಎದುರಿಸಬೇಕಾಯಿತು.

ಸೃಜನಶೀಲ ಬರಹಗಾರರೇನೋ ಕಾವ್ಯ ಕಥನದ ಮೂಲಕ ತಮ್ಮ ಅನುಭವವನ್ನು ಹೇಳಿಕೊಂಡರು. ಆದರೆ ಸಾಮಾನ್ಯರು? ಊರ್ವಶಿ ಭುತಾಲಿಯ ಅವರ, ವಿಭಜನೆಯಲ್ಲಿ ಬದುಕುಳಿದವರ ಜೊತೆಗಿನ ಸಂದರ್ಶನಗಳ ಮತ್ತು ತಮ್ಮ ಸಂಶೋಧನೆಯ ಸಂಗ್ರಹವಾಗಿರುವ ಕೃತಿಗೆ The other side of Silence ಅಂದರೆ 'ಮೌನದ ಇನ್ನೊಂದು ಬದಿ'ಯೆಂದು ಕರೆದಿದ್ದಾರೆ. ಅದರಲ್ಲಿ ಈ ಸಾಮಾನ್ಯರು,' ಇರಲಿ ಬಿಡಿ, ಮತ್ತೆ ಆ ನೆನಪುಗಳನ್ನು ಕೆದಕುವುದು ಏಕೆ' ಎಂದು ಮಾತು ಆರಂಭಿಸುತ್ತಾರೆ. ಬಹುಪಾಲು ಚಿಂತಕರು ಅಂದುಕೊಂಡಿದ್ದೆಂದರೆ ಇಪ್ಪತ್ತನೆಯ ಶತಮಾನದ ಹಿಂಸೆಯ ಪರ್ವವು ಮುಗಿದ ಮೇಲೆ ಮತ್ತು ಅದರ ಸಮಗ್ರವಾದ ವ್ಯಾಖ್ಯಾನಗಳು ಬಂದ ಮೇಲೆ ಮತ್ತೆ ಅಂಥ ಹಿಂಸೆ ಘಟಿಸಲಾರದು ಎಂದು. ಬಹುಶಃ ಮನುಷ್ಯ ಕುಲಕ್ಕೇ ಹಠಾತ್ತನೇ ಬಂದು ಹಿಡಿದುಕೊಂಡಿದ್ದ ಆವೇಶದ ಹುಚ್ಚು (Frenzy) ಇಳಿದು ಹೋಗಿರಬಹುದೆಂದು.

ಆದರೆ 21 ನೇ ಶತಮಾನದ ಈ ದಶಕಗಳು ಇಂಥ ನಿರೀಕ್ಷೆಗಳನ್ನು ಸುಳ್ಳಾಗಿಸಿವೆ. ಹಿಂಸೆ ಅದೆಷ್ಟು ರೂಪಗಳನ್ನು ಪಡೆದುಕೊಂಡು, ಅದೆಷ್ಟು ವ್ಯಾಪಕವಾಗಿ ನಡೆಯುತ್ತಿದೆಯೆಂದರೆ ಅದರ ಕೇವಲ ಪತ್ರಿಕಾ ವರದಿಯಂಥ ವರದಿಯೂ ಅಸಾಧ್ಯವಾಗಿದೆ. ಜಗತ್ತಿನ ನಕಾಶೆಯೊಂದನ್ನು ಇಟ್ಟುಕೊಂಡು ಹಿಂಸೆ ನಡೆಯುತ್ತಿರುವ ಪ್ರದೇಶಗಳಿಗೆ ಕೆಂಪು ಬಣ್ಣವನ್ನು ಹಚ್ಚುತ್ತಾ ಹೋದರೆ ಬಿಳಿ ಬಣ್ಣಕ್ಕೆ ಒಂದಿಂಚು ಭಾಗವೂ ಉಳಿಯಲಾರದು. ಧರ್ಮ, ರಾಷ್ಟ್ರೀಯತೆ, ರಾಜಕೀಯ ಸಿದ್ಧಾಂತ, ಜನಾಂಗೀಯ ದ್ವೇಷ, ಲಿಂಗ ತಾರತಮ್ಯ ಹೀಗೆ ಹಿಂಸೆಗೆ ಇರಬಹುದಾದ ಕಾರಣಗಳ, ಪಟ್ಟಿಯು ಕೊನೆಯಿಲ್ಲದಂತೆ ಬೆಳೆಯುತ್ತಲೇ ಇದೆ. ಹಿಂಸೆಗೆ ಕಾರಣಗಳನ್ನು ಹುಡುಕುವುದರಲ್ಲಿ ಮನುಷ್ಯರ ಎಲ್ಲಾ ಶಕ್ತಿಯೂ ಸೋರಿ ಹೋಗುತ್ತದೆ. ಈ ಹಿಂಸೆ ಮನುಷ್ಯ ಕುಲದ ಕೊನೆಗಾಲವನ್ನೇತರಬಲ್ಲದು ಎನ್ನುವುದು ಈಗ ಅತಿಶಯೋಕ್ತಿಯಾಗಿ ಕಾಣುತ್ತಿಲ್ಲ.

ಹಿಂಸೆ ಈ ಪರಿಯದ್ದಾದರೆ ಅದರ ವ್ಯಾಖ್ಯಾನ ಹಾಗೂ ಸಮರ್ಥನೆಗಳು ಇನ್ನೂ ಹೆಚ್ಚು ಭೀತಿ ಹುಟ್ಟಿಸುತ್ತವೆ. ಯಾವ ಪ್ರಕಾರದ ಹಿಂಸೆಯಾದರೂ ಅದಕ್ಕೆ ಸಮರ್ಥನೆಯೇ ಇಲ್ಲ ಎಂದ ಗಾಂಧಿಯವರನ್ನು ಒಪ್ಪದಿರುವವರೇ ಬಹಳ ಜನ. ಆದರೆ ಸರಳ ಪ್ರಶ್ನೆಯೆಂದರೆ ಹಿಂಸೆಯನ್ನು ಅದು ಹೇಗೆ ಒಪ್ಪಲು ಸಾಧ್ಯ? ಸಮರ್ಥಿಸುವುದು ಹೇಗೆ ಸಾಧ್ಯ? ಈ ಸಮರ್ಥನೆಗಳ ಭ್ರಮೆಗಳಿಂದ ಹೊರಬರದೇ ಯಾವುದೇ ನೈತಿಕ ಕ್ರಿಯೆಯೂ ಅಸಾಧ್ಯ. ಗುಜರಾತಿನಲ್ಲಿ ನಡೆದ ಜನಾಂಗೀಯ ಕೊಲೆಗಳನ್ನು 'reaction to action' ಎಂದು ಸಮರ್ಥಿಸಲಾಯಿತು. ನಂತರದ ಜನಾಂಗೀಯ ಹತ್ಯೆಗಳನ್ನು ಪ್ರತೀಕಾರವೆಂದು ಅಥವಾ ಪ್ರತಿಕ್ರಿಯೆಯೆಂದು ಸಮರ್ಥಿಸಲಾಯಿತು. ಅತ್ಯಂತ ಅಸಹ್ಯದ ಸಂಗತಿಯೆಂದರೆ ಕೊಲೆಗಳಲ್ಲಿ ಭಾಗವಹಿಸುವುದು ಎನ್ನಲಾಗುವ ಅನೇಕರಿಗೆ ಗೌರವದ ಸ್ಥಾನಗಳನ್ನು ಕೊಡಲಾಯಿತು. ಅವರು ಶಿಕ್ಷೆಯಿಲ್ಲದೇ ಹೊರಬರುವಂತೆ ಸಾಕ್ಷ್ಯಗಳನ್ನು ತಿರುಚಲಾಯಿತು.

ಪ್ರತಿಯೊಂದು ಚುನಾವಣೆಯ ಮೊದಲು ಅನೇಕ ಪತ್ರಿಕೆಗಳು ಅಭ್ಯರ್ಥಿಗಳ ಹಿನ್ನೆಲೆಯ ಬಗ್ಗೆ ಬರೆಯುತ್ತವೆ. ನಮ್ಮ ಜನ ಪ್ರತಿನಿಧಿಗಳಲ್ಲಿ ಬಹುಸಂಖ್ಯಾತರು ಅಪರಾಧಿಗಳು ಹಾಗೂ ಖದೀಮರು. ಇನ್ನು ಅವರು ಘೋಷಿಸಿಕೊಳ್ಳುವ ಆಸ್ತಿಗಳ ಬಗ್ಗೆ ಅಷ್ಟು ಆಸ್ತಿಯನ್ನು ಅಕ್ರಮವಾಗಿ ಮಾತ್ರ ಸಂಪಾದಿಸಲು ಸಾಧ್ಯ ಎನ್ನುವುದು ಪುಟ್ಟ ಮಗುವಿಗೂ ಅರ್ಥವಾಗುತ್ತದೆ. ಅಂದರೆ ಹಿಂಸೆ ಹಾಗೂ ಅಪರಾಧಗಳನ್ನು ಮನ್ನಿಸುವ ಅಥವಾ ಪರಿಗಣಿಸದೇ ಇರುವ ಅಮಾನವೀಯ ಸ್ಥಿತಿಗೆ ನಾವೆಲ್ಲ ಬಂದು ತಲುಪಿದ್ದೇವೆ. ಹೀಗಾಗಿ ಗೋರಕ್ಷಣೆಯ ಹೆಸರಿನಲ್ಲಿ ಮನುಷ್ಯರನ್ನು ಕೊಲ್ಲುವವರನ್ನು, ಸಿದ್ಧಾಂತದ ಹೆಸರಿನಲ್ಲಿ ಪೋಲೀಸರನ್ನು, ಸೈನಿಕರನ್ನು ಕೊಲ್ಲುವವರನ್ನು ನಾವು ಕೊಲೆಗಾರರು ಎಂದು ಕರೆಯಲು ಹಿಂಜರಿಯುತ್ತೇವೆ. ಎಲ್ಲೋ ಮನಸ್ಸಿನ ಮೂಲೆಯಲ್ಲಿ ಸಮರ್ಥನೀಯ ಕೊಲೆ ಅಸಮರ್ಥನೀಯ ಕೊಲೆಯೆಂದು ವಿಭಾಗ ಮಾಡಿಕೊಂಡು ಬಿಟ್ಟಿದ್ದೇವೆಯೆ? ಜಗತ್ತಿನಲ್ಲಿ ಇಂದು ನಡೆಯುವ ಯಾವುದೇ ಹತ್ಯೆಗೆ ಯಾರೂ ಕ್ಷಮೆ ಕೇಳುವುದಿಲ್ಲ. ಪ್ರಾಯಶ್ಚಿತ್ತ ಮಾಡಿಕೊಳ್ಳುವುದಿಲ್ಲ. ದೊಡ್ಡ ಗಂಟಲಿನಲ್ಲಿ ಸಮರ್ಥನೆ ಮಾಡುತ್ತಾರೆ. ಅಥವಾ ಅದು ಅನಿವಾರ್ಯವೆನ್ನುವ ಸಮಜಾಯಿಷಿ ಕೊಡಲಾಗುತ್ತದೆ.

ನಾನು ಇದನ್ನು ಬರೆಯುವ ಒಂದು ದಿನ ಮುಂಚೆ ಜಾರ್ಖಂಡಿನಲ್ಲಿ 25 ಜನ CRPF ರ ಸದಸ್ಯರನ್ನು ನಕ್ಸಲೀಯರು ಕೊಂದಿದ್ದಾರೆ. ಅವರ ಬಲಿದಾನವನ್ನು ಹುಸಿ ಹೋಗಲು ಬಿಡುವುದಿಲ್ಲವೆಂದು ಸರಕಾರವು ಸಿನಿಮೀಯ ಶೈಲಿಯಲ್ಲಿ ಹೇಳಿಕೆ ಕೊಡುತ್ತಿದೆ. ನಿರೀಕ್ಷೆಯಂತೆ





ಬಲಪಂಥೀಯ ವಕ್ತಾರರು ಎಡಪಂಥೀಯರು ಸುಮ್ಮನೆ ಏಕಿದ್ದಾರೆಂದು ಮತ್ತು ಮಾನವ ಹಕ್ಕುಗಳ ಹೋರಾಟಗಾರರ ಮೇಲೆ ಮೋಟಾರ್ ಬೈಕುಗಳನ್ನು ಓಡಿಸಿ ಸಾಯಿಸುವುದರಿಂದ ಭಯೋತ್ಪಾದನೆ ನಿಲ್ಲುತ್ತದೆಯೆಂದು ಹೇಳುತ್ತಿದ್ದಾರೆ. (ಈ ಎರಡನೇ ಹೇಳಿಕೆ ಜಾರ್ಖಂಡ್ ಪೋಲೀಸ್‌ನ ಅತ್ಯಂತ ಹಿರಿಯ ಅಧಿಕಾರಿಯದು) ಬಿ.ಜೆ.ಪಿ.ಯ ಒಬ್ಬ ಟಿ.ವಿ ವಕ್ತಾರರ ಪ್ರಕಾರ ವ್ಹೀಲ್‌ಚೇರ್‌ನಿಂದ ಏಳಲಾಗದ ಸಾಯಿಬಾಬಾ ಅವರಂಥ ನಕ್ಸಲ್ ಸಮರ್ಥಕರೇ ಇದಕ್ಕೆ ಕಾರಣವೆನ್ನುತ್ತಿದ್ದಾರೆ. ಎದ್ದುಕಾಣುವುದೆಂದರೆ ಚುನಾವಣೆಗಳಲ್ಲಿ ಪಡೆದ ಬಹುಮತದ ಸಹಾಯದಿಂದ ಏಕಪಕ್ಷದ ಸರ್ವಾಧಿಕಾರದ ಕಡೆಗೆ ಸಾಗುತ್ತಿರುವ ಸರಕಾರಕ್ಕೆ ನಮ್ಮ ಸೈನಿಕರನ್ನು, ಪೋಲೀಸರನ್ನು ರಕ್ಷಿಸಲು ಆಗುತ್ತಿಲ್ಲ. ಪಾಕಿಸ್ತಾನದ ಗಡಿಗಳಿಂದ, ಕಾಶ್ಮೀರದ ನೆಲಗಳಿಂದ, ಜಾರ್ಖಂಡ್‌ದ ಕಾಡುಗಳಿಂದ ಅದೆಷ್ಟು ದಾಳಿಗಳು ನಡೆದಿವೆ? ಅದೆಷ್ಟು ಜನರು ಬಲಿಯಾಗಿದ್ದಾರೆ? ಈ ಹಿಂಸೆಗಳ ಹಿಂದಿರುವ ಯಾವ ಸಮಸ್ಯೆಯನ್ನೂ ಪರಿಹರಿಸುವ ಸಾಮರ್ಥ್ಯವೇ ಸರಕಾರಕ್ಕಿಲ್ಲ. ಅಂಥ ನೈತಿಕ ಬಲವೂ ನಮ್ಮ ಯಾವುದೇ ನಾಯಕರಿಗಿಲ್ಲ.

ಭಾರತವು ಸ್ವಾತಂತ್ರ್ಯದ ಸಂಭ್ರಮದಲ್ಲಿದ್ದಾಗ ಗಾಂಧಿ ತಮ್ಮ ಹತ್ಯೆಯ ಬೆದರಿಕೆಗಳನ್ನು ಕಡೆಗಣಿಸಿ ನೌಖಾಲಿ, ಕಲ್ಕತ್ತಾಗಳಲ್ಲಿ ಕೋಮು ಹಿಂಸೆಯನ್ನು ನಿಲ್ಲಿಸಲು ಅಲ್ಲಿಗೆ ಹೋದರು. ಹಿಂಸೆಯನ್ನು ನಿಲ್ಲಿಸಿದರು ಕೂಡ. ಈಗ ಅಭಿಮಾನಿಗಳ ಎದುರು ಉದ್ದುದ್ದ ಭಾಷಣಗಳನ್ನು ಮಾಡಿ ತಾವೂ ಮೈಮರೆಯುವ ನಾಯಕರಿದ್ದಾರೆ. ಇವರೆಲ್ಲರೂ ಹಿಂಸೆಯನ್ನು ಸಮರ್ಥಿಸಿಕೊಂಡು ಬಂದವರು. ಇವರಿಗೆ ಹಿಂಸೆಯನ್ನು ನಿಲ್ಲಿಸುವ ನೈತಿಕ ಬಲವೆಲ್ಲಿಂದ ಬರಬೇಕು? ನಾನು ನಿರೀಕ್ಷಿಸಿದಂತೆ ಇತ್ತೀಚಿನ ಈ ನರಬಲಿಯನ್ನು ಉಪಯೋಗಿಸಿಕೊಂಡು ನಾಗರೀಕರ ಸ್ವಾತಂತ್ರ್ಯಗಳ ಮೇಲೆ ದಾಳಿಗಳನ್ನು ಹೆಚ್ಚಿಸಬಹುದೇ ಹೊರತು ಕ್ರಿಯಾಶೀಲವಾಗಿ ಸರಕಾರಗಳು ಏನನ್ನು ಮಾಡಲಾರವು. ಏನು ನಡೆದರೂ ಅದನ್ನು ಚುನಾವಣೆಗಳಲ್ಲಿ ಮತಗಳನ್ನಾಗಿ ಪರಿವರ್ತಿಸಿಕೊಳ್ಳಲು ನಮ್ಮ ಎಲ್ಲಾ ರಾಜಕೀಯ ಪಕ್ಷಗಳು ಸಿದ್ಧವಾಗಿ ನಿಂತಿವೆ.

ಇಂದಿನ ಹಿಂಸಾ ಪರ್ವದಲ್ಲಿ ನಾವು ನೈತಿಕವಾಗಿ ಪಾಲುದಾರರಾಗಬಾರದೆಂದರೆ ಗಾಂಧಿಯ ಹಾಗೆ ಎಲ್ಲಾ ಹಿಂಸೆಗಳನ್ನು ಯಾವ ಸಮರ್ಥನೆಯ ಪ್ರಯತ್ನವೂ ಇಲ್ಲದೇ ಖಂಡಿಸಬೇಕು. ಮನುಷ್ಯ ಜೀವಿಗಳ ಹತ್ಯೆಗೆ ಯಾವ ಸಮರ್ಥನೆಯೂ ಇಲ್ಲ.



ಸಾಮಾಜಿಕ ಪರಿವರ್ತನೆಯ ಹೋರಾಟದಲ್ಲಿ ಕಾರ್ಮಿಕ ವರ್ಗದ ರಾಜಕೀಯ ಕರ್ತವ್ಯ



ಅಮೆರಿಕ ಮತ್ತು ಯುರೋಪಿನಲ್ಲಿ ಕಾಣುತ್ತಿರುವ ದುಡಿಯುವ ಜನಗಳ ವಿರೋಧಿಯಾದ ಬಲಪಂಥೀಯ ಪಲ್ಲಟಕ್ಕೆ ಟ್ರೇಡ್ ಯೂನಿಯನ್ ಹೋರಾಟಗಳು ಮತ್ತು ನವ-ಉದಾರವಾದಿ ಬಂಡವಾಳಶಾಹಿಗೆ ಪ್ರತಿರೋಧ ಒಡ್ಡುವ ಇತರೆ ಚಳವಳಿಗಳನ್ನು ಒಂದು ಸ್ಪಷ್ಟ ಎಡ ವೇದಿಕೆಗೆ ಬೆಸೆಯದಿರುವುದು ಕಾರಣವಾಗಿದೆ. ಇಂಥ ಎಡ ವೇದಿಕೆಯಷ್ಟೇ ಒಂದು ಸಮರ್ಥ ರಾಜಕೀಯ ಪರ್ಯಾಯವಾಗುವ ಸಾಧ್ಯತೆಯನ್ನು ಹೊಂದಿದೆ. ಭಾರತದಲ್ಲೂ ನವ-ಉದಾರವಾದಿ ಬಂಡವಾಳಶಾಹಿ ಮತ್ತು ಕೋಮುವಾದದ ವಿರುದ್ಧ ಹೋರಾಟದ ಅವಳಿ ಕಾರ್ಯಭಾರಗಳನ್ನು ನಿಭಾಯಿಸಲು ಕಾರ್ಮಿಕ ವರ್ಗ ಸಮರ್ಥವಾಗುವಂತೆ ಸಜ್ಜುಗೊಳಿಸಲು ರಾಜಕೀಯ ಪ್ರಜ್ಞೆಯನ್ನು ಬೆಳೆಸಬೇಕಾಗಿದೆ.

*** ಪ್ರಕಾಶ್ ಕಾರಟ್**

ಕಾರ್ಮಿಕ ವರ್ಗದ ಪಾರಂಪರಿಕ ಸೌಹಾರ್ದ ದಿನವಾದ ಮೇ ದಿನವನ್ನು ಜಗತ್ತಿನಾದ್ಯಂತ ಕಾರ್ಮಿಕರು, ಟ್ರೇಡ್ ಯೂನಿಯನ್‌ಗಳು ಮತ್ತು ಕಾರ್ಮಿಕ ವರ್ಗದೊಂದಿಗೆ ಸಂಪರ್ಕವಿರುವ ರಾಜಕೀಯ ಪಕ್ಷಗಳು ಆಚರಿಸುತ್ತವೆ.

ಇದು ಜಾಗತಿಕ ರಾಜಕೀಯ ಸೆಲೆಗಳು ಮತ್ತು ಅವು ಕಾರ್ಮಿಕ ವರ್ಗದ ಚಳವಳಿ ಮತ್ತು ಎಡ ರಾಜಕೀಯಕ್ಕೆ ಹೇಗೆ ಸಂಬಂಧಿಸಿವೆ ಹಾಗೂ ಹೇಗೆ ತಟ್ಟಿವೆ ಎಂಬುದರ ಮೌಲ್ಯಮಾಪನ ಮಾಡಲು ಇದು ಒಂದು ಸೂಕ್ತ ಸಮಯವಾಗಿದೆ. ಕಳೆದ ವರ್ಷ ಬಹಳಷ್ಟು ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿ ರಾಜಕಾರಣವು ಇನ್ನಷ್ಟು ಬಲಪಂಥಕ್ಕೆ ಹೊರಳಿದ್ದನ್ನು ಕಂಡಿದ್ದೇವೆ. ಯುರೋಪ್‌ನಲ್ಲಿ ಅತಿ-ಬಲಪಂಥೀಯ ಮತ್ತು ಅನ್ಯದ್ವೇಷಿ ಪಕ್ಷಗಳ ಜನಪ್ರಿಯತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷರಾಗಿ ಆಯ್ಕೆಯಾದರು. ಫ್ರಾನ್ಸ್‌ನಲ್ಲಿ ಮರಿನೆ ಲೆ ಪೆನ್ ನೇತೃತ್ವದ ನ್ಯಾಷನಲ್ ಫ್ರಂಟ್, ನೆದರ್‌ಲ್ಯಾಂಡ್‌ನಲ್ಲಿ ಫ್ರೀಡಂ ಪಾರ್ಟಿ, ಜರ್ಮನಿಯಲ್ಲಿ ಆಲ್ಟರ್ನೇಟಿವ್ ಫಾರ್ ಜರ್ಮನಿ ಪಕ್ಷಗಳಿಗೆ ಬೆಂಬಲ ಹೆಚ್ಚುತ್ತಿರುವುದು ಇವೆಲ್ಲ ಈ ವಿದ್ಯಮಾನಕ್ಕೆ ಕೈಗನ್ನಡಿಯಾಗಿದೆ.

ಲ್ಯಾಟಿನ್ ಅಮೆರಿಕದಲ್ಲೂ ಎಡಪಂಥೀಯರ ವಿರುದ್ಧ ಬಲಪಂಥೀಯರ ಆಕ್ರಮಣ ಹೆಚ್ಚುತ್ತಿದೆ. ಬ್ರೆಜಿಲ್ ಮತ್ತು ಅರ್ಜೆಂಟೀನಾದಲ್ಲಿ ಬಲಪಂಥೀಯರು ಅಧಿಕಾರಕ್ಕೆ ಬಂದ ನಂತರ ಅಮೆರಿಕನ್ ಸಾಮ್ರಾಜ್ಯಶಾಹಿ ಬೆಂಬಲಿತ ಬಲಪಂಥೀಯರು ವೆನಿಜುವೆಲಾದ ಪರಿಸ್ಥಿತಿಯನ್ನು ಅಸ್ಥಿರಗೊಳಿಸಲು ಆಕ್ರಮಣಕಾರಿಯಾಗಿ ಪ್ರಯತ್ನಿಸುತ್ತಿದ್ದಾರೆ.

ಈ ಬಲಪಂಥೀಯ ಪಲ್ಲಟಕ್ಕೆ ಮುಖ್ಯವಾಹಿನಿ ಸೋಷಲ್ ಡೆಮಾಕ್ರಟಿಕ್ ಪಕ್ಷಗಳ ದಿವಾಳಿಕೋರ ರಾಜಕೀಯವೇ ಯುರೋಪ್‌ನಲ್ಲಿ ಒಂದು ಕಾರಣವಾಗಿದೆ. ಸಾಂಪ್ರದಾಯಿಕವಾಗಿ ಕಾರ್ಮಿಕರ ಜೊತೆ ಸಂಬಂಧ ಹೊಂದಿರುವ ಈ ಪಕ್ಷಗಳು ಹಿಂದಿನ ಮೂರ್‍ನಾಲ್ಕು ದಶಕಗಳಲ್ಲಿ ಯುರೋಪ್‌ನಲ್ಲಿ ಅಳವಡಿಸಲಾದ ನವ-ಉದಾರವಾದಿ ಧೋರಣೆಗಳೊಂದಿಗೆ ಶಾಮೀಲಾಗಿದ್ದವು. ಅವುಗಳು ಸರಕಾರ ನಡೆಸುತ್ತಿದ್ದಾಗ ಮಿತವ್ಯಯದ ಕ್ರಮಗಳನ್ನು ಅನುಸರಿಸಿದವು. ಇದರಿಂದ ಕಾರ್ಮಿಕರು ಮತ್ತು ದುಡಿಯುವ ವರ್ಗದ ಇತರ ವಿಭಾಗಗಳ ಮೇಲೆ ಕೆಟ್ಟ ಪರಿಣಾಮ ಉಂಟಾದವು. ಕಳೆದ ಕೆಲವು ವರ್ಷಗಳಿಂದ ಉದ್ಯೋಗಗಳು ಮತ್ತು ಸಾಮಾಜಿಕ ಕಲ್ಯಾಣ ಯೋಜನೆಗಳ ಮೇಲೆ ಸತತವಾಗಿ ದಾಳಿ ನಡೆಯುತ್ತಿರುವುದು ಕಾರ್ಮಿಕ ವರ್ಗವನ್ನು ಸೋಷಲ್ ಡೆಮಾಕ್ರಟಿಕ್ ಪಕ್ಷಗಳಿಂದ ದೂರ ತಳ್ಳುತ್ತಿವೆ. ಅನೇಕ ಕಡೆ, ಒಂದು ವಿಶ್ವಾಸಾರ್ಹ ಎಡ ಪರ್ಯಾಯ ಇಲ್ಲದಿರುವುದರಿಂದ ಪ್ರಸ್ತುತ ವ್ಯವಸ್ಥೆಯ ವಿರುದ್ಧದ ಆಕ್ರೋಶ ಹಾಗೂ ಪರಕೀಯ ಭಾವದಿಂದಾಗಿ ಬಲಪಂಥೀಯ ರಾಷ್ಟ್ರೀಯವಾದಿ ಪಕ್ಷಗಳಿಗೆ ಬೆಂಬಲ ಹೆಚ್ಚುತ್ತಿರುವುದು ಕಂಡು ಬಂದಿದೆ. ಟ್ರಂಪ್ ಯಶಸ್ಸು ಮತ್ತು ಯುರೋಪಿಯನ್ ಒಕ್ಕೂಟವನ್ನು ವಿರೋಧಿಸುವ ಬಲಪಂಥೀಯ ರಾಷ್ಟ್ರೀಯವಾದಿ ಪಕ್ಷಗಳ ಬೆಂಬಲದಲ್ಲಿ ಏರಿಕೆ ಈ ವಿದ್ಯಮಾನದ ಫಲಿತವಾಗಿದೆ.

ಅದೇನೇ ಇದ್ದರೂ ಕಳೆದ ವರ್ಷ ಸೋಷಲ್ ಡೆಮಾಕ್ರಟಿಕ್ ಪಕ್ಷಗಳ ರಾಜಿ ಹಾಗೂ ಶಾಮೀಲು ರಾಜಕೀಯದ ವಿರುದ್ಧ ಬಹು ಅಗತ್ಯವಾಗಿದ್ದ ಪ್ರತಿಕ್ರಿಯೆಯಲ್ಲಿಯೂ ಗಮನಾರ್ಹ ಬದಲಾವಣೆ ಕಂಡು ಬಂದಿದೆ. ಎಡ ರಾಜಕೀಯ ತನ್ನ ಧೋರಣೆಗಳನ್ನು ಎತ್ತಿ ಹಿಡಿಯಲು ಆರಂಭಿಸಿದೆ. ಬ್ರಿಟನ್‌ನಲ್ಲಿ ಬ್ಲೇರ್‌ವಾದದಿಂದ ಕಳಂಕಿತವಾದ ಲೇಬರ್ ಪಕ್ಷವು ಜೆರೆಮಿ ಕೊರ್ಬಿನ್ ನಾಯಕರಾಗಿ ಆಯ್ಕೆಯಾದ ನಂತರ ತನ್ನ ಹಿಂದಿನ ಈ ಕಳಂಕದಿಂದ ಕಳಚಿಕೊಳ್ಳಲು ಮುಂದಾಗಿದೆ. ಅಮೆರಿಕದಲ್ಲಿ ಕಳೆದ ವರ್ಷದ ಅಧ್ಯಕ್ಷೀಯ ಚುನಾವಣೆ ಸಂದರ್ಭ ಬರ್ನಿ ಸ್ಯಾಂಡರ್ಸ್ ಅವರ 'ಡೆಮಾಕ್ರಟಿಕ್ ಸೋಷಲಿಸ್ಟ್' ವೇದಿಕೆ ಕಾರ್ಮಿಕ ವರ್ಗ, ವಿದ್ಯಾರ್ಥಿಗಳು ಮತ್ತು ಶಿಕ್ಷಿತ ಯುವಜನರಿಂದ ಹೆಚ್ಚು ಬೆಂಬಲ ಪಡೆಯುವಲ್ಲಿ ಸಫಲವಾಗಿತ್ತು. ಇದು ಡೆಮಾಕ್ರಟಿಕ್ ಪಕ್ಷದ ನವ-ಉದಾರವಾದಿ ಆರ್ಥಿಕ ಧೋರಣೆಯ ವಿರುದ್ಧದ ಬಂಡಾಯವೂ ಆಗಿತ್ತು.

ಇತ್ತೀಚೆಗೆ ಮುಕ್ತಾಯವಾದ ಫ್ರೆಂಚ್ ಅಧ್ಯಕ್ಷೀಯ ಚುನಾವಣೆಯ ಮೊದಲ ಸುತ್ತಿನಲ್ಲಿ ಜೀನ್ ಲುಕ್ ಮೆಲೆಂಕನ್ ಎಡ ವೇದಿಕೆಯಾದ ಲಾ ಇನ್‌ಸೌಮ್ಯೆಸ್ (ಅಂದರೆ ಉದ್ಧಟ ಫ್ರಾನ್ಸ್)) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು 19.62 ಶೇಕಡಾ ಮತಗಳನ್ನು ಗಳಿಸಿ ಒಬ್ಬ ಪ್ರಬಲ ಸ್ಪರ್ಧಾಳುವಾಗಿ ಹೊರಹೊಮ್ಮಿದರು. ಸೋಷಲ್ ಡೆಮಾಕ್ರಟ್ ಆದ ಸೋಷಲಿಸ್ಟ್ ಪಕ್ಷದ ಅಭ್ಯರ್ಥಿ ಕೇವಲ 6.35 ಶೇಕಡಾ ಮತಗಳನ್ನು ಗಳಿಸಿದರು.

ಈ ಎಲ್ಲಾ ದೃಷ್ಟಾಂತಗಳಲ್ಲಿ, ಒಂದು ಎಡ ವೇದಿಕೆಯ ನಾಯಕರು ಅಥವಾ ಅಭ್ಯರ್ಥಿಗಳು ಬೆಂಬಲ ಕ್ರೋಡೀಕರಿಸಲು ಮತ್ತು ಬಲಪಂಥೀಯ ಸೋಷಲ್ ಡೆಮಾಕ್ರಟಿಕ್ ಹಾಗೂ ಮಧ್ಯಪಂಥೀಯ ನಿಲವುಗಳಿಂದ ದೂರವಾಗಿ ಒಂದು ಪ್ರಬಲವಾದ ಹೋರಾಟ ನೀಡುವಲ್ಲಿ ಸಮರ್ಥರಾಗಿದ್ದನ್ನು ಗಮನಿಸಬಹುದು. ಅವರು ಗಳಿಸಿರುವ ಬೆಂಬಲ ಒಂದು ಶಕ್ತಿಶಾಲಿ ಎಡ ಪರ್ಯಾಯ ತುಂಬಬೇಕಾಗಿರುವ ನಿರ್ವಾತವನ್ನು ತೋರಿಸಿದೆ.

ಟ್ರೇಡ್ ಯೂನಿಯನ್‌ಗಳು ಮತ್ತು ಕಾರ್ಮಿಕರು ಬಜೆಟ್ ಮಿತವ್ಯಯ ಕ್ರಮಗಳಿಗೆ ಹಾಗೂ ನವ-ಉದಾರವಾದಿ ಧೋರಣೆಗಳಿಗೆ ಪ್ರತಿರೋದ-ಒಡ್ಡುತ್ತಿದ್ದರೂ, ಒಂದು ವಿಚ್ಛಿನ್ನತೆ ಇತ್ತು, ಅಂದರೆ ಈ ಪ್ರತಿರೋಧವನ್ನು ಬಳಸಿಕೊಂಡು ಒಂದು ವಿಶ್ವಾಸಾರ್ಹ ರಾಜಕೀಯ ಪರ್ಯಾಯವನ್ನು ಪ್ರಸ್ತುತ ಪಡಿಸುವ ಯಾವುದೇ ರಾಜಕೀಯ ಶಕ್ತಿ ಇಲ್ಲ. ಸೋಷಲ್ ಡೆಮಾಕ್ರಾಟರು ಮತ್ತು "ಸಮಾಜವಾದಿ"ಗಳ ಮಾರಾಟದ ಕಳಂಕವಿಲ್ಲದ ಎಡ ವೇದಿಕೆಗಳು ಮೂಡಿ ಬಂದಿರುವುದು ಟ್ರೇಡ್ ಯೂನಿಯನ್ ಹೋರಾಟಗಳು ಮತ್ತು ನವ-ಉದಾರವಾದಿ ಬಂಡವಾಳಶಾಹಿಗೆ ಪ್ರತಿರೋಧ ಒಡ್ಡುವ ಇತರೆ ಚಳವಳಿಗಳನ್ನು ಒಂದು ಸ್ಪಷ್ಟ ಎಡ ವೇದಿಕೆಗೆ ಬೆಸೆಯುವ ಮುಂದಿನ ಹೆಜ್ಜೆಯನ್ನು ಅನಿವಾರ್ಯಗೊಳಿಸುತ್ತದೆ. ಇಂಥ ಎಡ ವೇದಿಕೆಯಷ್ಟೇ ಒಂದು ರಾಜಕೀಯ ಪರ್ಯಾಯವಾಗುವ ಸಾಧ್ಯತೆಯನ್ನು ಹೊಂದಿದೆ.

ಭಾರತದಲ್ಲಿ, 2016ರ ಸೆಪ್ಟೆಂಬರ್‌ನಲ್ಲಿ ನಡೆದ ಸಾರ್ವತ್ರಿಕ ಮುಷ್ಕರದ ನಂತರ ಕಾರ್ಮಿಕರ ಹೋರಾಟಗಳ ಸುಗ್ಗಿ ಕಂಡುಬಂದಿದೆ. ಸರಣಿ-ಸರಣಿಯಾಗಿ ಕಾರ್ಮಿಕ ವರ್ಗದ ಮುಷ್ಕರಗಳು ಹಾಗೂ **ಪುಟ 14 ನೋಡಿ**

ಜನಸಾಮಾನ್ಯರ ತಲಾ ಆಹಾರಧಾನ್ಯ ಬಳಕೆ ಕಡಿಮೆಯಾಗುತ್ತಿದೆ-ಏಕೆ?

ನವ-ಉದಾರವಾದಿ ಧೋರಣೆಯ ಅವಧಿಯಲ್ಲಿ ದೇಶದೊಳಗೆ ತಲಾ ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಏರಿಕೆ ಕಂಡಿಲ್ಲ, ಆದರೆ ಆಹಾರ ಧಾನ್ಯಗಳ ದಾಸ್ತಾನು ಪ್ರಮಾಣ ಹೆಚ್ಚುತ್ತಿದೆ, ರಫ್ತು ಪ್ರಮಾಣವೂ ಹೆಚ್ಚುತ್ತಿದೆ, ಇತ್ತ ಜನಗಳ ಆಹಾರಧಾನ್ಯಗಳ ತಲಾಬಳಕೆ ಇಳಿಯುತ್ತಿದೆ ಎಂದರೆ ದುಡಿಯುವ ಜನರ ಖರೀದಿ ಶಕ್ತಿ ಕುಂದಿದೆ ಎಂದೇ ಅರ್ಥ. ಮತ್ತು ಈ ರೀತಿ ಖರೀದಿ ಶಕ್ತಿ ಕುಂದಿರುವುದು ನವ-ಉದಾರವಾದಿ ವ್ಯವಸ್ಥೆಯಿಂದಾಗಿಯೇ.

-ಪ್ರೊ. ಪ್ರಭಾತ್ ಪಟ್ನಾಯಕ್

ಭಾರತದ ಆಹಾರ ಧಾನ್ಯಗಳ ತಲಾ ಉತ್ಪಾದನೆ ಮತ್ತು ಸೇವನೆ ಉದಾರೀಕರಣ ನೀತಿಗಳ ನಂತರ ಕುಸಿತ ಕಂಡರೂ ಕೆಲವು ವರ್ಷಗಳ ನಂತರ ಮತ್ತೆ ಚೇತರಿಸಿಕೊಂಡಿತು. ಆದರೆ ಈಗ ಮತ್ತೆ ಕುಸಿತದ ಹಾದಿಯಲ್ಲಿದೆ. ಸ್ವಲ್ಪ ಕಾಲ ಚೇತರಿಕೆ ಕಂಡಿದ್ದು ಸಹ ಸೀಮಿತ ಅವಧಿಗೆ ಮಾತ್ರ. ಈಗಿನ ತಲಾ ಉತ್ಪಾದನೆ ಮತ್ತು ಬಳಕೆ ಪ್ರಮಾಣವನ್ನು ಗಮನಿಸಿದರೆ ಉದಾರೀಕರಣ ನೀತಿಗಳನ್ನು ಅನುಸರಿಸುವ ಮೊದಲು ಏನಿತ್ತೋ ಅದೇ ಪ್ರಮಾಣದಲ್ಲಿದೆ.

1990-91ರಲ್ಲಿ ಆಹಾರ ಧಾನ್ಯಗಳ ತಲಾ ಉತ್ಪಾದನೆ ಮತ್ತು ಬಳಕೆಯನ್ನು ಲೆಕ್ಕ ಹಾಕಿದರೆ (1990-91ರ ಕೃಷಿ ವರ್ಷದಲ್ಲಿ ಒಟ್ಟಾರೆ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ಅದನ್ನು 1991 ರ ಮಧ್ಯಾವಧಿಯ ಜನಸಂಖ್ಯೆಗೆ ವಿಭಜಿಸಿದರೆ) ಅದು 207 ಕೆಜಿ . 2011-12ನೇ ಸಾಲಿಗೆ ಇದೇ ಲೆಕ್ಕ ಹಾಕಿದರೆ 212 ಕೆಜಿ ಆಗುತ್ತದೆ. ಇದು ಇನ್ನೊಂದು ಉತ್ತಮ ಬೆಳೆಯ ವರ್ಷವಾದ2003-04ರ ತಲಾ 196 ಕೆಜಿಗೆ ಹೋಲಿಸಿದರೆ ಕುಸಿತದಿಂದ ಚೇತರಿಕೆ ಕಂಡಿರುವುದನ್ನು ತೋರಿಸುತ್ತದೆ. ಆದರೂ ಈ ಚೇತರಿಕೆ ಅತ್ಯಲ್ಪ, ಮಾತ್ರ. 2011-12ರ ನಂತರದ ಪ್ರತಿ ವರ್ಷವೂ ತಲಾ ಆಹಾರ ಧಾನ್ಯಗಳ ಉತ್ಪಾದನೆ ಕುಸಿಯುತ್ತಾ ಸಾಗಿದೆ.

ಅಂದರೆ ಉದಾರೀಕರಣದ ಅವಧಿಯ ಕೊನೆಯಲ್ಲಿ ತಲಾ ಆಹಾರಧಾನ್ಯ ಉತ್ಪಾದನೆ ಉದಾರೀಕರಣದ ಆರಂಭದ ವರ್ಷಗಳಿಗಿಂತೇನೂ ಹೆಚ್ಚಾಗಿಲ್ಲ, ಕಡಿಮೆಯಾಗಿದೆ ಎಂದೇ ಹೇಳಬಹುದು.

ಹೀಗಿದ್ದರೂ ಸರ್ಕಾರದ ಬಳಿ ಆಹಾರ ಧಾನ್ಯಗಳ ಸಂಗ್ರಹ ಮಾತ್ರ ಉದಾರೀಕರಣದ ಆರಂಭದ ವರ್ಷಗಳ ಹೋಲಿಸಿದರೆ ಭಾರಿ ಪ್ರಮಾಣದಲ್ಲಿ ಹೆಚ್ಚಳ ಕಂಡಿದೆ. ಉದಾ:1990-91ರಲ್ಲಿ ದಾಸ್ತಾನು 15.81 ದಶಲಕ್ಷ ಟನ್ ಇತ್ತು. ಇದು ಆ ವರ್ಷದಲ್ಲಿನ ಒಟ್ಟು ಉತ್ಪಾದನೆಯ ಶೇ.9ರಷ್ಟು. 2011-12ರಲ್ಲಿ ಒಟ್ಟು ಉತ್ಪಾದನೆಯ ಶೇ.20ರಷ್ಟು ಅಂದರೆ 53 ದಶಲಕ್ಷ ಟನ್ ಸಂಗ್ರಹವಾಗಿತ್ತು. ಇದು ಇತ್ತೀಚಿನ ಎಲ್ಲ ವರ್ಷಗಳಲ್ಲೂ ನಿಜ. ಅಂದರೆ ಉತ್ಪಾದನೆಗೆ ಹೋಲಿಸಿದರೆ ದಾಸ್ತಾನಿನ ಪ್ರಮಾಣ ಉದಾರೀಕರಣದ ಮೊದಲಿಗಿಂತ ಹೆಚ್ಚಿದೆ.

ಒಂದು ವೇಳೆ ಜಾಗತೀಕರಣದ ಕೊನೆಯಲ್ಲಿ ತಲಾ ಉತ್ಪಾದನೆ ಪ್ರಮಾಣ ಜಾಗತೀಕರಣದ ಆರಂಭದ ವರ್ಷಗಳಿಗಿಂತಲೂ ಹೆಚ್ಚಾಗಿಲ್ಲ ಎಂದಾದರೆ ಮತ್ತು ಸರ್ಕಾರದ ಬಳಿ ಸಂಗ್ರಹ ಉತ್ಪಾದನೆಗೆ ಹೋಲಿಸಿದರೆ ಬಹಳ ಹೆಚ್ಚಾಗಿದೆ ಎಂದಾದರೆ ಉದಾರೀಕರಣದ ಅವಧಿಯಲ್ಲಿ ಜನರಿಗೆ ಆಹಾರ ಧಾನ್ಯಗಳ ಲಭ್ಯತೆ ಕಡಿಮೆಯಾಗಿದೆ ಎಂದಾಗುತ್ತದೆ. ನಿಜ, ಈ ಅವಧಿಯಲ್ಲಿ ಆಮದು ಹೆಚ್ಚಾಗಿದ್ದಿದ್ದರೆ ಈ ತೀರ್ಮಾನಕ್ಕೆ ಬರಲಾಗುವುದಿಲ್ಲ. ಆದರೆ ಭಾರತದಲ್ಲಿನ ಬೆಳವಣಿಗೆ ಇದಕ್ಕೆ ತದ್ವಿರುದ್ಧವಾಗಿದೆ. ಹೇಗೆಂದರೆ ಈ ಪ್ರಸಕ್ತ ಶತಮಾನದ ಪ್ರತಿಯೊಂದು ವರ್ಷದಲ್ಲೂ ಭಾರತ ಆಮದು ಮಾಡಿಕೊಂಡಿದ್ದಕ್ಕಿಂತ ರಫ್ತು ಮಾಡಿದ್ದೇ ಹೆಚ್ಚು. ಅಂದರೆ ಉದಾರೀಕರಣದ ಆರಮಭಕ್ಕೆ ಹೋಲಿಸಿದರೆ ಕೊನೆಯವೇಳೆಗೆ ಜನರಿಗೆ ಆಹಾರ ಧಾನ್ಯಗಳ ಲಭ್ಯತೆ ಕಡಿಮೆಯಾಗಿದೆ.

ಆಹಾರಧಾನ್ಯಗಳ ತಲಾಲಭ್ಯತೆ(ಗ್ರಾಂಗಳಲ್ಲಿ)	
1951:	394.9
1961;	468.7
1971:	468.8
1981:	454.8
1991:	510.1
2001:	416.2
2011:	453.6
2012:	450.3
2013:	401.4
2014:	491.2

ಇಂತಹ ಸಾಕ್ಷ್ಯವನ್ನು ಎದುರಿಸಬೇಕಾದಾಗ ಉದಾರೀಕರಣದ ಸಮರ್ಥಕರು, ಮತ್ತು ಜಿಡಿಪಿ ಬೆಳವಣಿಗೆಯಿಂದ ಸಂತೃಪ್ತರಾಗುವವರೆಲ್ಲರೂ ಮುಂದಿಡುವ ವಾದ ಏನೆಂದರೆ, ಇದು ಜನರ ಆಹಾರ ಸೇವನೆ ರೀತಿಗಳಲ್ಲಿ ಬದಲಾವಣೆಯಾಗಿರುವುದರ ಸಂಕೇತ. ಜನರಿಗೆ ಆದಾಯ ಹೆಚ್ಚಿರುವುದರಿಂದ ಅವರು ಆಧುನಿಕ ರೀತಿಯ ಆಹಾರಗಳನ್ನು ಸೇವಿಸುತ್ತಿದ್ದಾರೆ ಎನ್ನುತ್ತಾರೆ. ಇದು ಸಂಪೂರ್ಣವಾಗಿ ದೋಷಪೂರಿತ ವಾದವಾಗಿದೆ. ಜನರ ಬಳಿ ಹೆಚ್ಚು ಹಣವಿದ್ದರೆ ಆಹಾರ ಧಾನ್ಯಗಳ ನೇರ ಬಳಕೆ ಕಡಿಮೆಯಾಗುತ್ತದೆ ಎಂಬುದು ನಿಜವೇ ಆಗಿದ್ದರೂ ಅವರ ಒಟ್ಟಾರೆ ಸೇವನೆ (ನೇರ ಮತ್ತು ಪರೋಕ್ಷ ಅಂದರೆ ಸಂಸ್ಕರಿತ ಆಹಾರ ಮತ್ತು ಪ್ರಾಣಿಜನ್ಯ ಆಹಾರ-ಇದರಲ್ಲಿ ಆಹಾರಧಾನ್ಯಗಳು ಪ್ರಾಣಿಗಳ ಆಹಾರವಾಗಿ ಬಳಕೆಯಾಗುತ್ತವೆ) ಪ್ರಮಾಣದಲ್ಲಿ ಏರಿಕೆ ಕಾಣಬೇಕಾಗಿತ್ತು. ಆದರೆ ಹಾಗಾಗಿಲ್ಲ. ಅಮೆರಿಕದಲ್ಲಿ ತಲಾ ಆಹಾರ ಧಾನ್ಯಗಳ ಸೇವನೆ ಭಾರತಕ್ಕಿಂತ ಐದು ಪಟ್ಟು ಹೆಚ್ಚು, ಯೂರೋಪ್‌ನಲ್ಲಿ ಈ ಪ್ರಮಾಣ ನಾಲ್ಕು ಪಟ್ಟು ಹೆಚ್ಚು. ಅಲ್ಲದೆ ದೇಶದ ಒಳಗೂ ವಿವಿಧ ವಿಭಾಗಗಳ ಆಹಾರ ಸೇವನೆಯನ್ನು ಗಮನಿಸಿದರೆ ಆದಾಯ ಹೆಚ್ಚಿದಂತೆ ಒಟ್ಟು ಆಹಾರಧಾನ್ಯಗಳ ಬಳಕೆ ಹೆಚ್ಚುತ್ತದೆ. ಅಲ್ಲದೆ ಮೇಲಿನ ಅಂಕಿ-ಅಂಶಗಳೆಲ್ಲವೂ ಆಹಾರಧಾನ್ಯಗಳ ನೇರ ಬಳಕೆಯದ್ದಲ್ಲ, ಒಟ್ಟು ಬಳಕೆಯದ್ದು.

ಇವು ಉದಾರೀಕರಣದ ನಂತರ ಇಳಿಕೆಯನ್ನು ತೋರಿಸುತ್ತವೆಯೆಂದಾದರೆ ಜನರ ಆಹಾರ ಧಾನ್ಯಗಳ ಬಳಕೆ ಪ್ರಮಾಣ ಇಳಿಮುಖ ಕಂಡಿದೆ, ಅಂದರೆ ಉದಾರೀಕರಣ ನೀತಿಗಳು ಪ್ರತಿಕೂಲ ಬೆಳವಣಿಗೆಯನ್ನು ತಂದಿವೆ ಎಂದೇ ಅರ್ಥ.

ದೇಶದೊಳಗೆ ತಲಾ ಉತ್ಪಾದನೆ ಏರಿಕೆ ಕಾಣದಿದ್ದರೂ ಭಾರೀ ಪ್ರಮಾಣದಲ್ಲಿ ಆಹಾರ ಧಾನ್ಯಗಳ ದಾಸ್ತಾನಿದೆ, ಹೆಚ್ಚಿನ ಪ್ರಮಾಣದಲ್ಲಿ ರಫ್ತಾಗುತ್ತಿದೆ ಎಂದರೆ ದುಡಿಯುವ ಜನ ಖರೀದಿ ಶಕ್ತಿ ಕುಂದಿದೆ ಎಂದರ್ಥ. ಇದು ಬೇಡಿಕೆ ಹೆಚ್ಚಿದ್ದರಿಂದ ಉಂಟಾದ ಹಣದುಬ್ಬರ ಏರಿಕೆಯಿಂದ ಆಹಾರಧಾನ್ಯಗಳ ದರಗಳು ಹೆಚ್ಚಾಗಿ ಖರೀದಿ ಶಕ್ತಿ ಕುಂಠಿತಗೊಂಡಿದೆ ಎಂದಲ್ಲ. ನಿಜ ಆಹಾರ ಧಾನ್ಯಗಳ ದರಗಳು ಏರಿಕೆ ಕಂಡಿವೆ. ಏಕೆಂದರೆ ಉತ್ಪಾದನೆ ವೆಚ್ಚ ಹೆಚ್ಚಿರುವುದರಿಂದ. ಅದು ಆಗಿರುವುದು ಕೂಡ ಸರ್ಕಾರ ಹಲವಾರು ಕೃಷಿ ಲಾಗುವಾಡುಗಳಿಗೆ ಸಬ್ಸಿಡಿಗಳನ್ನು ಹಿಂಪಡೆದಿದ್ದರಿಂದ. ವಾಸ್ತವವಾಗಿ **ಪುಟ 14 ನೋಡಿ**

ರೈತರಿಗೆ ಮೋದಿ ಮಹಾದ್ರೋಹ : ಹನನ್ ಮೊಲ್ಲಾ





ದೇಶದ ಉದ್ದಗಲಕ್ಕೂ ನಡೆದ ಚುನಾವಣಾ ಪ್ರಚಾರ ಸಂದರ್ಭದಲ್ಲಿ ನೀಡಿದ್ದ ಭರವಸೆಗೆ ಸಂಪೂರ್ಣ ವಿರುದ್ಧವಾಗಿ ಪ್ರಧಾನಿ ನರೇಂದ್ರಮೋದಿ ನಡೆದುಕೊಳ್ಳುತ್ತಿದ್ದು, ಇದು ರೈತರಿಗೆ ಬಗೆಯುತ್ತಿರುವ ಮಹಾದ್ರೋಹ ಎಂದು ಹನನ್ ಮೊಲ್ಲಾ ಟೀಕಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್)ನ 16ನೇ ರಾಜ್ಯ ಸಮ್ಮೇಳನ ಬಹಿರಂಗ ಸಭೆ ಉದ್ಘಾಟಿಸಿ ಅವರು ಮಾತನಾಡಿದರು. (ಕಾಂ. ಎಸ್.ಹೆಚ್.ಕಪ್ಪಣ್ಣವರ ವೇದಿಕೆ, ಕಾಂ. ಹರ್‌ಸಿಂಗ್ ಸುರ್ಜಿತ್ ಸಭಾಂಗಣ. ಕಾಂ. ಸುಂದರಯ್ಯ ನಗರ ಹುಬ್ಬಳ್ಳಿ).

ಇದಕ್ಕಿಂತ ಮೊದಲು ರೈತರು, ರೈತಸಂಘದ ಕಾರ್ಯಕರ್ತರು, ನಾಯಕರು ಆಕರ್ಷಕ ಮೆರವಣಿಗೆಯೊಂದಿಗೆ ಕಾಂ. ಸುಂದರಯ್ಯ ನಗರಕ್ಕೆ ಬಂದರು.

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸ್ವಾಮಿನಾಥನ್ ಶಿಫಾರಸ್ಸನ್ನು ಜಾರಿ ಮಾಡಲು ಸಾಧ್ಯವಿಲ್ಲ ಎಂದು ಸುಪ್ರಿಂಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಿದೆ. ರೈತರ ಆತ್ಮಹತ್ಯೆ ನಿಲ್ಲಿಸಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಮೋದಿ ಅಧಿಕಾರಕ್ಕೆ ಬಂದ ಮೇಲೆ ರೈತರ ಆತ್ಮಹತ್ಯೆ ಪ್ರಮಾಣ ಶೇ. 36 ರಷ್ಟು ಹೆಚ್ಚಿದ್ದು, ಪ್ರಾಕೃತಿಕ ವಿಕೋಪಗಳಿಂದ ನಷ್ಟಕ್ಕೆ ತುತ್ತಾದಾಗ ರೈತರಿಗೆ ಸಮರ್ಪಕ ಪರಿಹಾರ ಒದಗಿಸುವ ಭರವಸೆ ನೀಡಿದ್ದ ಮೋದಿಯವರು, ಅಧಿಕಾರಕ್ಕೆ ಬಂದ ಮೇಲೆ ಪರಿಹಾರ ಒದಗಿಸಲು ನಿರಾಕರಿಸುತ್ತಿದ್ದಾರೆ. ಬರಪರಿಹಾರಕ್ಕೆ ಒತ್ತಾಯಿಸಿ ದೆಹಲಿಯಲ್ಲಿ ನಡೆಯುತ್ತಿರುವ ತಮಿಳುನಾಡು ರೈತರ ಸತತ ಹೋರಾಟವನ್ನು ನಿರ್ಲಕ್ಷಿಸಿದ್ದಾರೆ. 39 ದಿನಗಳಿಂದ ಅವರು ಪ್ರತಿಭಟಿಸುತ್ತಿದ್ದಾರೆ. ಭೇಟಿ ಮಾಡಲು ಪ್ರಧಾನಿ ಮಂತ್ರಿಗಳಿಗೆ ವೇಳೆ ಇಲ್ಲದಿರುವುದು ನಾಚಿಕೆಗೇಡು. ಹೀಗೆ ಭರವಸೆಗೆ ವಿರುದ್ಧವಾಗಿ ನಡೆದುಕೊಂಡು ಮೋದಿ ರೈತರಿಗೆ ಮಹಾದ್ರೋಹ ಎಸಗುತ್ತಿದ್ದಾರೆ ಎಂದರು.

ವಿಶೇಷ ಆರ್ಥಿಕ ವಲಯ, ಕೈಗಾರಿಕಾ ಕಾರಿಡಾರ್ ಮುಂತಾದ ಹೆಸರಿನಲ್ಲಿ ಕೃಷಿ ಭೂಮಿ ಕಬಳಿಕೆಯನ್ನು ಮುಂದುವರೆಸಿರುವ ನರೇಂದ್ರ ಮೋದಿ ಸರ್ಕಾರ, ಭೂ ಸ್ವಾಧೀನ ಕಾಯ್ದೆ 2013 ರನ್ನು ದುರ್ಬಲಗೊಳಿಸುತ್ತಿದೆ. ಶೇ. 68ರಷ್ಟು ಜನರ ಜೀವನಾಧಾರವಾಗಿರುವ ಕೃಷಿಯನ್ನು ಕಾರ್ಪೋರೇಟ್ ಕಂಪನಿಗಳ ವಶಕ್ಕೆ ನೀಡಲು ಮುಂದಾಗಿರುವುದು ದೇಶದ ಆಹಾರ ಭದ್ರತೆ ಮೇಲೆ ಗಂಭೀರ ಪರಿಣಾಮಗಳನ್ನು ಉಂಟು ಮಾಡಲಿದೆ. ಇದರ ವಿರುದ್ಧ ರೈತರ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಕರೆ ನೀಡಿದರು.

ನವ–ಉದಾರವಾದಿ ಆರ್ಥಿಕ ನೀತಿಗಳ ಜೊತೆ, ಆಕ್ರಮಣಕಾರಿ ಕೋಮುವಾದವನ್ನು ಹರಡುತ್ತಿರುವ ಕೇಂದ್ರ ಸರ್ಕಾರ ಗೋರಕ್ಷಣೆ–ಯ ಹೆಸರಿನಲ್ಲಿ ನಡೆಯುತ್ತಿರುವ ಗೂಂಡಾಗಿರಿಯನ್ನು ಬೆಂಬಲಿಸುತ್ತದೆ. ಇತ್ತೀಚೆಗೆ ಸಂತೆಯಿಂದ ಹೈನುಗಾರಿಕೆ ಉದ್ದೇಶಕ್ಕೆ ಹಸುವನ್ನು ಕೊಂಡು ಮನೆಗೆ ಹೋಗುತ್ತಿದ್ದ ಪೇಹ್ಲುಖಾನ್ ರೈತನನ್ನು ಹರಿಯಾಣದಲ್ಲಿ ಹೊಡೆದು ಕೊಲ್ಲಲಾಗಿದೆ. ಈ ರೈತ ಕುಟುಂಬಕ್ಕೆ 1 ಕೋಟಿ ಪರಿಹಾರ ನೀಡಬೇಕು. ಕೊಲೆಗಡುಕ ಗೂಂಡಾಗಳನ್ನು ಕಾನೂನು ಕ್ರಮಕ್ಕೆ ಒಳಪಡಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತಾನಾಡಿದ ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷ, ಮಾಜಿ ಶಾಸಕ ಜಿ.ವಿ. ಶ್ರೀರಾಮರೆಡ್ಡಿರವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿದ್ದು ಯೋಜನಾ ಆಯೋಗವನ್ನು ರದ್ದುಮಾಡಿ ನೀತಿ ಆಯೋಗ ಸೃಷ್ಠಿಸಿರುವ ಕೇಂದ್ರ ಸರ್ಕಾರ ಕೃಷಿ ಬಗ್ಗೆ ರೈತ ಪರ ನೀತಿಯನ್ನೆ ಹೊಂದಿಲ್ಲ. ಕೃಷಿ ಅಭಿವೃದ್ಧಿ ಪಡಿಸದೇ ನವಭಾರತ ನಿರ್ಮಾಣ ಸಾಧ್ಯವಿಲ್ಲ. ಕೃಷಿಕರನ್ನು ನಿರ್ಲಕ್ಷಿಸುವ ನವಭಾರತ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿರುತ್ತದೆ ಹೊರತು ರೈತರ ಪರವಾಗಿರುವುದಿಲ್ಲ ಎಂದು ತಿಳಿಸಿದರು.

ಸತತ ಬರಗಾಲದಿಂದ ನರಳುತ್ತಿರುವ ರಾಜ್ಯದ ರೈತರಿಗೆ ಪರಿಹಾರ ಒದಗಿಸಲು ರಾಜ್ಯದ ಕಾಂಗ್ರೆಸ್ ಸರ್ಕಾರ ಹಾಗೂ ಕೇಂದ್ರದ ಬಿಜೆಪಿ ಸರ್ಕಾರ ನಿರಾಕರಿಸುತ್ತಿವೆ. ಪರಸ್ಪರರ ಕಡೆ ಕೈ ತೋರುತ್ತಾ ಹೊಣೆಗೇಡಿತನ ಪ್ರದರ್ಶಿಸುತ್ತಿದೆ. ಅಸಲು ಪಾವತಿಸಿದರೆ ಬಡ್ಡಿ ಮನ್ನಾ ಮಾಡುತ್ತೇವೆ. ಎನ್ನುವ ರಾಜ್ಯ ಸರ್ಕಾರ, ಸಾಲ ಮನ್ನಾ ಸಾಧ್ಯವೇ ಇಲ್ಲ ಎನ್ನುವ ಕೇಂದ್ರ ಸರ್ಕಾರ ರೈತರನ್ನು ಆತ್ಮಹತ್ಯೆಗೆ ದೂಡುತ್ತಿವೆ ಎಂದು ಆರೋಪಿಸಿದರು.

ಬಹಿರಂಗ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೆಪಿಆರ್‌ಎಸ್ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನಪಡೆರವರು ಕೇಂದ್ರ ಸರ್ಕಾರದ ಏಳನೇ ವೇತನ ಆಯೋಗ ಡಿ ದರ್ಜೆ ನೌಕರ ಜೀವನ ನಡೆಸಬೇಕಾದರೆ ಮಾಸಿಕ ಕನಿಷ್ಠ 18 ಸಾವಿರ ರೂ ಬೇಕು ಎಂದು ಶಿಫಾರಸ್ಸು ಮಾಡಿದೆ. ಇದೇ ಮಾನದಂಡ ಅನ್ವಯಿಸಿ ರೈತ ಕುಟುಂಬದ ಆದಾಯವನ್ನು ಮಾಸಿಕ 18 ಸಾವಿರ ರೂ.ಗೆ ಹೆಚ್ಚಿಸುವಂತೆ ಒತ್ತಾಯಿಸಿದರು.

ಪ್ರಸ್ತುತ ರೈತ ಕುಟುಂಬದ ಆದಾಯ ವಾರ್ಷಿಕ 16 ಸಾವಿರ ರೂ. ಇದೆ. ಇದನ್ನು ದ್ವಿಗುಣ ಗೊಳಿಸಿದರೂ ಕೂಡ ವಾರ್ಷಿಕ 32 ಸಾವಿರ ರೂ. ಆಗುತ್ತದೆ. ಈ ರೀತಿ ಮೋಸ ಮಾಡುವ ನೀತಿ ಕೈ ಬಿಟ್ಟು ರೈತರನ್ನು ಸಬಲರನ್ನಾಗಿಸಿ ಆತ್ಮಹತ್ಯೆ ವಲಸೆ ತಡೆಗಟ್ಟಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ನಿತ್ಯಾನಂದಸ್ವಾಮಿ, ಸ್ವಾಗತ ಸಮಿತಿ ಅಧ್ಯಕ್ಷರಾದ ಕೊರವಿ, ಕಳಸಾ ಬಂಡೂರಿ ಹೋರಾಟದ ಮುಖಂಡರಾದ ಶಿವಣ್ಣ, ಅಮೃತಹಿಜಾರಿ, ಎಐಕೆಎಸ್ ನ ಜಂಟಿ ಕಾರ್ಯದರ್ಶಿ ವಿಜುಕೃಷ್ಣನ್, ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷರಾದ ಬಿ.ಎಸ್. ಸೊಪ್ಪಿನ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಾಟೀಲ್, ಕೆಪಿಆರ್‌ಎಸ್ ರಾಜ್ಯ ಪಧಾಧಿಕಾರಿಗಳಾದ ಬಯ್ಯಾ ರೆಡ್ಡಿ, ಗೋಪಿನಾಥ್, ವೆಂಕಟಾಚಲಯ್ಯ, ಸೂರ್ಯನಾರಾಯಣ, ಯಾದವಶೆಟ್ಟಿ, ಚನ್ನರಾಯಪ್ಪ ಕೆಪಿಆರ್‌ಎಸ್ ಪ್ರಧಾನ ಕಾರ್ಯದರ್ಶಿ ಯು. ಬಸವರಾಜ್ ಮುಂತಾದವರು ವೇದಿಕೆಯಲ್ಲಿದ್ದರು.





ಕರ್ನಾಟಕ ಪ್ರಾಂತ ರೈತ ಸಂಘ 16 ನೇ ರಾಜ್ಯ ಸಮ್ಮೇಳನ ಅಂಗೀಕರಿಸಿದ ನಿರ್ಣಯಗಳು

1. ಸಾಲ ಮನ್ನಾಕ್ಕಾಗಿ ಒತ್ತಾಯಿಸಿ
2. ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿಯನ್ನ ಸಮರ್ಥವಾಗಿ ನಿವಾರಿಸಲು ಆಗ್ರಹಿಸಿ ಮೇ 17–18, 2017 ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ನಿರ್ಣಯ
3. ಬಗರ್‌ಹುಕುಂ ಮತ್ತು ಅರಣ್ಯ ಭೂಮಿ ಸಾಗುವಳಿಯನ್ನು ಸಕ್ರಮ ಮಾಡಲು ಕೋರಿ
4. ಪರಿಸರ ರಕ್ಷಣೆಗೆ ಬದ್ದತೆಯನ್ನು ಪುನರುಚ್ಚರಿಸುತ್ತಲೇ ಜನರ ಬದುಕು ಮತ್ತು ನಾಗರಿಕತೆಯಿಂದ ಪರಿಸರದ ಪ್ರಶ್ನೆಗಳನ್ನು ಪ್ರತ್ಯೇಕಿಸಬೇಕೆಂಬ ಕಸ್ತೂರಿ ರಂಗನ್ ವರದಿಯ ನಿಲುವನ್ನು ತಿರಸ್ಕರಿಸುವುದು ರೈತರ ಹಿತದೃಷ್ಟಿಯಿಂದ ಅನಿವಾರ್ಯವಾದ್ದರಿಂದ ಈ ಕಸ್ತೂರಿ ರಂಗನ್ ವರದಿಯನ್ನು ಪೂರ್ತಿಯಾಗಿ ತಿರಸ್ಕರಿಸಬೇಕೆಂದು ಸರಕಾರವನ್ನು ಒತ್ತಾಯಿಸಿ
5. ಮಹದಾಯಿ ಸಮಸ್ಯೆ ಪರಿಹಾರಕ್ಕೆ ಕೇಂದ್ರ ಸರ್ಕಾರದ ಮಧ್ಯಪ್ರವೇಶಕ್ಕೆ ಆಗ್ರಹಿಸಿ ನಿರ್ಣಯ
6. ರೈತರ ಬೆಳೆಗೆ ಬೆಂಬಲ ಬೆಲೆ ನಿಗದಿ ಪಡಿಸಲು ಆಗ್ರಹಿಸಿ ನಿರ್ಣಯ
7. ತೆಂಗಿನ ಬೆಳೆ ನಷ್ಟಕ್ಕೆ ಕೇರಳ ಮಾದರಿಯಲ್ಲಿ ಪರಿಹಾರಕ್ಕೆ ಆಗ್ರಹಿಸಿ
8. ದಲಿತರ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟಲು ಹಾಗೂ ಎಲ್ಲಾ ರೀತಿಯ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯಗಳನ್ನು ನಿವಾರಿಸಿ ಆಗ್ರಹಿಸಿ ನಿರ್ಣಯ
9. ಮನೆ ನಿವೇಶನ ರಹಿತರಿಗೆ ಸೂರು ಒದಗಿಸಲು ಆಗ್ರಹ






ಕರ್ನಾಟಕ ಪ್ರಾಂತ ರೈತ ಸಂಘದ 16 ನೇ ರಾಜ್ಯ ಸಮ್ಮೇಳನದ ಸಮಾರೋಪ

ಮೇ 17-18 : ಬರಗಾಲ ಪರಿಹಾರ ತೀವ್ರಗೊಳಿಸಲು 48 ಗಂಟೆ ಹೋರಾಟ





ಕರ್ನಾಟಕದಲ್ಲಿ ಬರಗಾಲ ತೀವ್ರವಾಗಿದ್ದು ಬರಗಾಲವನ್ನು ನಿವಾರಿಸಲು ವಿಫಲವಾಗಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಮೇ 17 ಮತ್ತು 18ರಂದು 48 ಗಂಟೆಗಳ ನಿರಂತರ ಹೋರಾಟವನ್ನು ಮಾಡಲು ಕರ್ನಾಟಕ ಪ್ರಾಂತ ರೈತ ಸಂಘದ 16 ನೇ ರಾಜ್ಯ ಸಮ್ಮೇಳನ ನಿರ್ಣಯವನ್ನು ಕೈಗೊಂಡಿದ್ದು ಇದರ ಯಶಸ್ವಿಗೆ ರಾಜ್ಯದಾದ್ಯಂತ ರೈತರನ್ನು ಸಂಘಟಿಸಲು ಕಾರ್ಯಕರ್ತರು ಶ್ರಮಿಸಬೇಕೆಂದು ಅಖಿಲ ಭಾರತ ಕಿಸಾನ್ ಸಭಾದ ಉಪಾಧ್ಯಕ್ಷರಾದ ಕೆ. ವರದರಾಜನ್ ಕರೆ ನೀಡಿದರು. ಹುಬ್ಬಳ್ಳಿ ನಗರದ ಆರ್.ಎನ್.ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) 16 ನೇ ರಾಜ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿದ್ದ ಇವರು ದಿನದಿಂದ ದಿನಕ್ಕೆ ರೈತರು ಅತ್ಯಂತ ಸಂಕಷ್ಟಕ್ಕೆ ಒಳಗಾಗಿದ್ದು ಇಂತಹ ಸಂದರ್ಭದಲ್ಲಿ ರೈತರ ಕೈ ಹಿಡಿಯ ಬೇಕಾಗಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೊಧಿ ನೀತಿಗಳನ್ನು ಜಾರಿಗೊಳಿಸುತ್ತಿದ್ದು ಕಾರ್ಪೊರೇಟ್ ನೀತಿಗಳಿಗೆ ಅನುಕೂಲ ಮಾಡಿಕೊಡುತ್ತಿವೆ ಎಂದರು.

ಸಮಾರೋಪದ ಅ ಧ್ಯಕ್ಷತೆ ವಹಿಸಿದ್ದ ನೂತನ ರಾಜ್ಯ ಅ ಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿಯವರು ಮಾತನಾಡಿ ರಾಜ್ಯದಲ್ಲಿರುವ ರೈತರ ಸಂಕಟಗಳಿಗೆ ಸ್ಪಂದಿಸಲು ಪ್ರಬಲ ಚಳುವಳಿಗಳನ್ನು ರೂಪಿಸುವ ಅನಿವಾರ್ಯತೆಯಿದೆ. ಅದಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘ



ಮುಂದಿನ ದಿನಗಳಲ್ಲಿ ಯೋಜನಾ ಬದ್ಧವಾಗಿ ಕೆಲಸ ಮಾಡಲಿದೆ ಎಂದರು.

ಸಮಾರೊಪದಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳಾದ ಹನ್ನನ್ ವಮೊಲ್ಲ, ಜಂಟಿ ಕಾರ್ಯದರ್ಶಿಗಳಾದ ವಿಜು ಕೃಷ್ಣನ್ ಮತ್ತು ಸ್ವಾಗತ ಸಮಿತಿಯ ಅಧ್ಯಕ್ಷರಾದ ರಾಜಣ್ಣ ಕೊರವಿ ಮತ್ತು ಕೆಪಿಆರ್‌ಎಸ್ ನ ಜಿಲ್ಲಾ ಅಧ್ಯಕ್ಷರಾದ ಬಿ.ಎಸ್.ಸೊಪ್ಪಿನ್, ಕಾರ್ಯದರ್ಶಿ ಕೆ.ಎಚ್.ಪಾಟೀಲ್, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಪತ್ತಾರ್ ಮುಂತಾದವರು ಇದ್ದರು. ಕೊನೆಯಲ್ಲಿ ಸಮ್ಮೆಳನದ ಯಶಸ್ವಿಗೆ ದುಡಿದ ಎಲ್ಲರನ್ನು ಅಭಿನಂದಿಸಲಾಯಿತು.

ನೂತನ ರಾಜ್ಯ ಸಮಿತಿ ಆಯ್ಕೆ

47 ಸದಸ್ಯರನ್ನೊಳಗೊಂಡ ಮತ್ತು 15 ಜನರ ಪದಾಧಿಕಾರಿಗಳನ್ನೊಳಗೊಂಡ ಕರ್ನಾಟಕ ಪ್ರಾಂತ ರೈತ ಸಂಘದ ನೂತನ ರಾಜ್ಯ ಸಮಿತಿಯನ್ನು ಸಮ್ಮೇಳನದಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ರಾಜ್ಯ ಪದಾಧಿಕಾರಿಗಳು

ಅಧ್ಯಕ್ಷರು : ಜಿ.ಸಿ.ಬಯ್ಯಾರೆಡ್ಡಿ

ಉಪಾಧ್ಯಕ್ಷರು : ಜಿ.ವಿ.ಶ್ರೀರಾಮರೆಡ್ಡಿ,
ಮಾರುತಿ ಮಾನ್ಪಡೆ
ಭೀಮಸಿ ಕಲಾದಗಿ
ವೆಂಕಟಾಚಲಯ್ಯ
ಶಾಂತರಾಮ್ ನಾಯಕ್
ಯಾದವಶೆಟ್ಟಿ

ಪ್ರಧಾನ ಕಾರ್ಯದರ್ಶಿ : ಯು.ಬಸವರಾಜ್

ಜಂಟಿ ಕಾರ್ಯದರ್ಶಿಗಳು : ಸೂರ್ಯನಾರಾಯಣ, ಜಿ.ನಾಗರಾಜ್, ಗೌರಮ್ಮ ಪಾಟೀಲ್, ಚನ್ನರಾಯಪ್ಪ, ಎಚ್.ಆರ್.ನವೀನ್‌ಕುಮಾರ್, ಬಿ.ಎಸ್.ಸೊಪ್ಪಿನ್, ಶರಣಬಸಪ್ಪ ಮಮಶೆಟ್ಟಿ

ಸಾಲ ಮನ್ನಾಕ್ಕಾಗಿ ಒತ್ತಾಯಿಸಿ

ರಾಜ್ಯದಲ್ಲಿ 2014 ರಿಂದ 17 ರ ಮಾರ್ಚ್ ಕೊನೆಯ ಒಳಗೆ 2438 ರೈತರು, ಕೂಲಿಕಾರರು ಮತ್ತು ಗೇಣಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ರೀತಿಯ ತೀವ್ರ ತೊಂದರೆಯಲ್ಲಿರುವ ರೈತರು, ಕೂಲಿಕಾರರಿಗೆ ಬೆಳೆ ನಷ್ಟ ಪರಿಹಾರ ಮತ್ತು ವಿಮೆ ಮೊತ್ತ ಸಿಗಲಿಲ್ಲ ಬಾದಿತ ರೈತರು ಆತ್ಮಹತ್ಯೆಗೆ ತೆರಳದಂತೆ ತಡೆಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಾದ ಕೇಂದ್ರ ಹಾಗು ರಾಜ್ಯ ಸರ್ಕಾರಗಳು ಪರಸ್ಪರ ಆರೋಪಿಸಿಕೊಳ್ಳುತ್ತ ಎರಡೂ ಸರ್ಕಾರಗಳು ರೈತ ವಿರೊಧಿ ನೀತಿಯನ್ನ ಅನುಸರಿಸುತ್ತಿವೆ.

.. ..ಹತಾಶೆಗೊಂಡ ರೈತರು ವ್ಯವಸಾಯಕ್ಕಾಗಿ ಮಾಡಿದ ಸಾಲವನ್ನ ತೀರಿಸಲಾಗದೆ ಆತ್ಮಹತ್ಯೆಯ ದಾರಿಯನ್ನ ತುಳಿಯುತ್ತಿರುವ ಇಂತಹ ಸಂಕಷ್ಟದ ಸಂದರ್ಭದಲ್ಲಿ ರೈತ ಸಮುದಾಯದ ಸಹಾಯಕ್ಕೆ ನಿಲ್ಲಬೇಕಾದ ಸರ್ಕಾರಗಳು ರೈತರ ಸಾಲಗಳನ್ನು ಮನ್ನ ಮಾಡಲು ಸಾಧ್ಯವೇ ಇಲ್ಲ ಎಂದು ನಿರ್ಧಾಕ್ಷಣ್ಯವಾಗಿ ಹೇಳಿವೆ. ಮಾತ್ರವಲ್ಲ ರೈತರ ಬದಲು ದೊಡ್ಡ ದೊಡ್ಡ ಕಾರ್ಪೋರೇಟ್ ಕಂಪನಿಗಳ, ಶ್ರೀಮಂತರ ಸಾಲವನ್ನ ಮನ್ನ ಮಾಡುವ ಮತ್ತು ಅವರ ತೆರಿಗೆಗಳನ್ನ ಮನ್ನ ಮಾಡಲು ಸರ್ಕಾರ ತುಂಬ ಉತ್ಸುಕತೆಯಿಂದ ಇವೆ.

.. .. ..ಈ ಪರಿಸ್ಥಿತಿಯನ್ನು ಬದಲಾಯಿಸಬೇಕಾದರೆ ಒಂದು ಬಾರಿ ರೈತರ ಎಲ್ಲಾ ರೀತಿಯ ಸಾಲಗಳನ್ನು ಸರ್ಕಾರ ಮನ್ನಾ ಮಾಡಿ ಕೇರಳ ಮಾದರಿಯಲ್ಲಿ ಋಣಮುಕ್ತ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ 16 ನೇ ರಾಜ್ಯ ಸಮ್ಮೇಳನ ನಿರ್ಣಯ ಮಂಡಿಸುತ್ತದೆ.





ಪ್ರಧಾನಕಾರ್ಯದರ್ಶಿ :ಯು.ಬಸವರಾಜ್ ಅಧ್ಯಕ್ಷರು:ಜಿ.ಸಿ.ಬಯ್ಯಾರೆಡ್ಡಿ



ಜಿ.ವಿ.ಶ್ರೀರಾಮರೆಡ್ಡಿ



ಮಾರುತಿ ಮಾನ್ಪಡೆ



ಭೀಮಸಿ ಕಲಾದಗಿ



ವೆಂಕಟಾಚಲಯ್ಯ




ಶಾಂತರಾಮ್ ನಾಯಕ್



ಯಾದವಶೆಟ್ಟಿ



ಚನ್ನರಾಯಪ್ಪ



ಬಿ.ಎಸ್.ಸೊಪ್ಪಿನ್



ಸೂರ್ಯನಾರಾಯಣ



ಜಿ.ನಾಗರಾಜ್



ಗೌರಮ್ಮ ಪಾಟೀಲ್



ಶರಣಬಸಪ್ಪ ಮಮಶೆಟ್ಟಿ



ಎಚ್.ಆರ್.ನವೀನ್‌ಕುಮಾರ್

131ನೇ ವಿಶ್ವ ಮೇ ದಿನಾಚರಣೆ ಎಂದರೆ ಶೋಷಕರಿಗೆ ಸಿಂಹ ಸ್ವಪ್ನ

ಎಸ್. ವರಲಕ್ಷ್ಮಿ

1886 ಮೇ 1 ರಂದು ಅಮೇರಿಕದ ಚಿಕಾಗೊ ಧ ಹೇ ಮಾರ್ಕೆಟ್ ಬಂಡಾಯದಲ್ಲಿ 4 ಕಾರ್ಮಿಕರ ಬಲಿದಾನದಿಂದ ಆರಂಭವಾಗಿ, ದುಡಿಯುವ ಜನತೆ 8 ಗಂಟೆಯ ಕೆಲಸದ ಅವಧಿಯ ಮತ್ತು ಇತರ ಹಕ್ಕುಗಳ ಶಾಸನಬದ್ಧ ಹಕ್ಕುಗಳಿಗಾಗಿ ಸತತ ಹೋರಾಟದ ಪ್ರತೀಕವಾದ ದಿನ, ಮೇ ದಿನ.

ಈ ದಿನವನ್ನು ಪ್ರಪಂಚದ ಎಲ್ಲೆಡೆಯಲ್ಲೂ ಆಚರಿಸುತ್ತಾರೆ. ಹಾಗೆಯೇ ಭಾರತದಲ್ಲಿ, ರಾಜ್ಯದಲ್ಲಿ ಎಲ್ಲ ವಿಭಾಗಗಳಲ್ಲಿಯೂ ಕೂಡ ಮೇ ದಿನವನ್ನು ಆಚರಿಸಲಾಗುತ್ತದೆ.

ಮೇ ದಿನದ ಪ್ರಣಾಳಿಕೆ

ಇಂದು ಜಾಗತೀಕರಣ, ಆರ್ಥಿಕ ನೀತಿಗಳಿಗೆ ಬಲಿಯಾಗಿ ಹೊಸ ಸ್ವರೂಪ ಶೋಷಣೆಗಳು ಪ್ರಾರಂಭವಾಗಿವೆ. ಮೇ ದಿನದ ಪ್ರಣಾಳಿಕೆಯಲ್ಲಿ ವಿವರಿಸಿರುವಂತೆ "ಜಾಗತಿಕ ಆರ್ಥಿಕ ಬಿಕ್ಕಟ್ಟು ಕುಂಠಿತವಾಗದೆ ಮುಂದುವರೆದಿದೆ, ಬೆಳವಣಿಗೆ ಸಹ ಆಗುತ್ತಿಲ್ಲ. ಆದ ಅಲ್ಪಸ್ವಲ್ಪ ಬೆಳವಣಿಗೆಯ ಲಾಭವನ್ನು ಬಂಡವಾಳಶಾಹಿಗಳೇ ಸ್ವಾಧೀನ ಪಡಿಸಿಕೊಂಡಿದ್ದಾರೆ. ಯುವ ಜನರ ನಿರುದ್ಯೋಗ, ಅಸಮಾನತೆಗಳು ಅಪಾಯಕಾರಿ ಮಟ್ಟದಲ್ಲಿ ಬೆಳೆಯುತ್ತಿದೆ. ಜಗತ್ತಿನ 8 ಜನ ಶ್ರೀಮಂತರು ಜಗತ್ತಿನ ಅರ್ಧದಷ್ಟು ಜನರು ಹೊಂದಿದಷ್ಟು ಸಂಪತ್ತನ್ನು ಹೊಂದಿದ್ದಾರೆ. ಶ್ರಮಜೀವಿಗಳ ಧೀರ್ಘ ಹೋರಾಟಗಳಿಂದ ಪಡೆದ ಹಕ್ಕುಗಳ ಮೇಲೆ, ಅವರ ಕೆಲಸದ ಜೀವನ ಪರಿಸ್ಥಿತಿಗಳ ಮೇಲೆ ದಾಳಿ ಮಾಡುತ್ತಾ ತಮ್ಮ ಲಾಭಗಳನ್ನು ರಕ್ಷಿಸಿಕೊಳ್ಳಲು ಹೆಚ್ಚಿಸಿಕೊಳ್ಳಲು ಸ್ವದೇಶಿ ಮತ್ತು ವಿದೇಶಿ ಕಾರ್ಪೋರೇಟ್‌ಗಳಿಗೆ ರಾಷ್ಟ್ರೀಯ ಆಸ್ತಿಗಳನ್ನು ಲೂಟಿ ಮಾಡಲು ಉತ್ತೇಜನ ನೀಡುವ ಹಾಗೂ ಬಿಕ್ಕಟ್ಟನ್ನು ಪರಿಹರಿಸುವ ಆಳುವ ವರ್ಗಗಳ ಪ್ರಯತ್ನಗಳು ನಿರರ್ಥಕ ಮತ್ತು ವಿರುದ್ಧ ಪರಿಣಾಮ ಬೀರುವಂಥವು ಆಗಿವೆ."

ದೇಶದಲ್ಲಿ ಹೆಚ್ಚುತ್ತಿರುವ ಸರ್ವಾಧಿಕಾರಿ ಪ್ರವೃತ್ತಿಗಳಿಂದ ಎಲ್ಲ ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆಗಳು ಮತ್ತು ಭಿನ್ನಾಭಿಪ್ರಾಯದ ಧ್ವನಿಗಳ ಮೇಲೆ ಕೋಮುವಾದಿ ಶಕ್ತಿಗಳಿಂದ ಹೆಚ್ಚುತ್ತಿರುವ ದಾಳಿಗಳು ಮತ್ತು ಎಲ್ಲಾ ಪ್ರತಿರೋಧಗಳನ್ನು 'ದೇಶದ್ರೋಹಿ' ಎಂದು ಗುರುತಿಸಲಾಗುತ್ತಿರುವ ಕುರಿತು ತೀವ್ರ ಆತಂಕವನ್ನು ಎಚ್ಚರಿಕೆಯನ್ನು ಸಿಐಟಿಯು ವ್ಯಕ್ತ ಪಡಿಸುತ್ತಿದೆ.

ಕೇಂದ್ರದಲ್ಲಿಯ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅನುಸರಿಸುತ್ತಿರುವ ಮತ್ತು ಪ್ರೋತ್ಸಾಹಿಸುತ್ತಿರುವ ಬಗ್ಗೆ ದೇಶದ ಜನರನ್ನು ಎಚ್ಚರಿಸುತ್ತದೆ. ಈ ನೀತಿಗಳು ಒಂದು ಕಡೆ ದೇಶಿಯ ಕಾರ್ಪೋರೇಟ್‌ಗಳಿಗೆ ಮತ್ತು ಭಾರಿ ಉದ್ಯಮಿಗಳ ಕೂಟಗಳಿಗೆ ಲಾಭ ಮಾಡಿ ಕೊಡಲಾಗುತ್ತಿದೆ. ಇನ್ನೊಂದೆಡೆ ಜನಸಮುದಾಯವನ್ನು ಧರ್ಮ, ಪ್ರದೇಶ, ಜಾತಿ ಮುಂತಾದವುಗಳ ಆಧಾರದಲ್ಲಿ ವಿಭಜಿಸುವ ಮೂಲಕ ಅವರ ಐಕ್ಯತೆಯನ್ನು ಛಿದ್ರಗೊಳಿಸಿ ಕಾರ್ಮಿಕರಿಗೆ ಗುಲಾಮಗಿರಿ ತರಹದ ಪರಿಸ್ಥಿತಿಯನ್ನು ತರುತ್ತಿವೆ.

ಮೋದಿ ಸರಕಾರದ ಕಾರ್ಮಿಕ–ವಿರೋಧಿ ನೀತಿಗಳು

ಮೋದಿ ನೇತೃತ್ವದ ಸರ್ಕಾರ ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಕಾರ್ಪೋರೇಟ್‌ಗಳಿಗೆ ಮತ್ತು ಬೃಹತ್ ಉದ್ದಿಮೆದಾರ ಮನೆತನಗಳಿಗೆ ತೆ–ರಿಗೆ ರಿಯಾಯಿತಿ ಮತ್ತು ವಿನಾಯಿತಿಗಳ, ಕಾರ್ಮಿಕ ಮತ್ತು ಇತರೆ ಕಾಯ್ದೆಗಳ ಜಾರಿಯಲ್ಲಿ ವಿನಾಯಿತಿಗಳ ಭಾರಿ ಉಡುಗೊರೆಗಳನ್ನು ನೀಡುತ್ತಿದೆ. ತೆರಿಗೆ ಮತ್ತು ಬ್ಯಾಂಕು ಸಾಲ ಬಾಕಿದಾರರಿಗೆ ಪ್ರಶಸ್ತಿಗಳನ್ನು ನೀಡುತ್ತಿದೆ. ಲಾಭ ಬಡುಕ ಸ್ವದೇಶಿ ಮತ್ತು ವಿದೇಶಿ ಕಾರ್ಪೋರೇಟ್‌ಗಳಿಗೆ ದೇಶದ ಸಂಪತ್ತಿನ ಮೇಲೆ, ನಮ್ಮ ಸಾರ್ವಜನಿಕ ಕ್ಷೇತ್ರ, ನಮ್ಮ ಭೂಮಿ, ನಮ್ಮ ಜನಸಮುದಾಯದ ಮೇಲಿನ ಸಂಪೂರ್ಣ ಹತೋಟಿ ಒಪ್ಪಿಸಿ ಅನಿಯಂತ್ರಿತ ಶೋಷಣೆಗೆ ಅನುವು ಮಾಡಿಕೊಡುತ್ತಿದೆ.

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಆಗಿರುವ ಪ್ರಮುಖ ಬದಲಾವಣೆಗಳು 1) ಕಾರ್ಮಿಕ ಕಾನೂನುಗಳಿಗೆ ಉಗ್ರ ಬದಲಾವಣೆ. 2) ಸಾಮಾಜಿಕ ಭದ್ರತಾ ಯೋಜನೆಗಳನ್ನು ಘೋಷಣೆ ಮಾಡುತ್ತಲೇ ಶಾಸನ ಬದ್ಧ ಸವಲತ್ತುಗಳಾದ ಪಿಎಫ್ – ಇಎಸ್‌ಐ ಸೌಲಭ್ಯಗಳನ್ನು ರದ್ದು ಮಾಡುವ ಪ್ರಯತ್ನ. 3) ಸಾಮಾಜಿಕ ಕಲ್ಯಾಣ ಯೋಜನೆಗಳಾದ ಐಸಿಡಿಎಸ್, ಉದ್ಯೋಗ ಖಾತ್ರಿ, ಮಧ್ಯಾಹ್ನ ಬಿಸಿಯೂಟ ಯೋಜನೆ, ಎನ್‌ಆರ್‌ಹೆಚ್‌ಎಂ ಗಳಿಗೆ ಒದಗಿಸಿದ ಸಂಪನ್ಮೂಲಗಳ ತೀವ್ರ ಕಡಿತ. 4)1,69,199 ಕೋಟಿ ವರ್ಷಕ್ಕೆ ಆದಾಯ ಕೊಡುವ ಸಾರ್ವಜನಿಕ ಕೈಗಾರಿಕೆಗಳ ಆಸ್ತಿಗಳನ್ನು ಸಾರ್ವಜನಿಕ ಸೇಲ್ ಮುಖಾಂತರ ಬಂಡವಾಳ ಹಿಂಪಡೆಯುತ್ತಿರುವುದು. 5) ಹೆಚ್ಚುತ್ತಿರುವ ಖಾಸಗೀಕರಣ ಮತ್ತು ಗುತ್ತಿಗೆ – ಹೊರಗುತ್ತಿಗೀಕರಣ. 6) "ಮೇಕ್ ಇನ್ ಇಂಡಿಯಾ" ಮತ್ತು "ಸ್ಟಾರ್ಟ್ ಅಪ್ ಇಂಡಿಯಾ"ಗಳಂತಹ ಘೋಷಣೆಗಳಿದ್ದರೂ ಉದ್ಯೋಗಾವಕಾಶಗಳ ಸೃಷ್ಟಿ ನಿಧಾನ ಮತ್ತು ಇಳಿಮುಖವಾಗುತ್ತಿದೆ.

ರಾಜ್ಯ ಸರಕಾರದ ಕಾರ್ಮಿಕ–ವಿರೋಧಿ ಕ್ರಮಗಳು

ರಾಜ್ಯದಲ್ಲೂ ಹಲವು ಕಾರ್ಮಿಕ–ವಿರೋಧಿ ಕ್ರಮಗಳನ್ನು ಜಾರಿ ಮಾಡಲಾಗುತ್ತಿದೆ

- ❖ ಕಾರ್ಮಿಕ ಇಲಾಖೆ ಗುರ್ತಿಸಿರುವ 74 ಉದ್ಯಮಗಳಿಗೆ ಒಂದೇ ಬಾರಿ ಕನಿಷ್ಠ ವೇತನ ಜಾರಿ ಮಾಡದೇ ನಿರಂತರವಾಗಿ ತಾರತಮ್ಯ ಮಾಡಲಾಗುತ್ತಿದೆ.
- ❖ 23 ಉದ್ಯಮಗಳಿಗೆ ಆಗಿರುವ ಕನಿಷ್ಠ ವೇತನವನ್ನು 2015 ಏಪ್ರಿಲ್ ನಿಂದ ಜಾರಿ ಮಾಡುವ ಬದಲಿಗೆ 2016 ರಿಂದ ಜಾರಿ ಮಾಡಿ ಒಂದು ವರ್ಷದ ಆದಾಯವನ್ನು ಮಾಲೀಕರಿಗೆ ಉಳಿಸಲಾಗಿದೆ.
- ❖ ಬೀಡಿ ಕಾರ್ಮಿಕರಿಗೆ ತುಟ್ಟಿ ಭತ್ಯೆಯನ್ನು ಒಂದು ವರ್ಷ ಸ್ಥಗಿತಗೊಳಿಸಿ, ಇನ್ನು ಜಾರಿ ಮಾಡಲಿಲ್ಲ.
- ❖ ಶಾಪ್ & ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆಗೆ ಅಂಗಡಿ ಮುಂಗಟ್ಟುಗಳು 24 ಗಂಟೆ ತೆರೆದಿಡಬೇಕು. ಅಲ್ಲಿಯ ಕಾರ್ಮಿಕರು 24 ಗಂಟೆ ದುಡಿಯಬೇಕು ಹಾಗೂ ಮಹಿಳೆಯರು ರಾತ್ರಿ ಪಾಳಿಯಲ್ಲಿ ಕಡ್ಡಾಯ ದುಡಿಯಬೇಕೆಂಬ ಬದಲಾವಣೆ ತರಲು ಪ್ರಯತ್ನಿಸಲಾಗುತ್ತಿದೆ.
- ❖ ತೋಟ ಕಾರ್ಮಿಕರಿಗೆ ಸಂಬಂಧಿಸಿದ ಕಾನೂನುಗಳಲ್ಲಿ ತೋಟ ಕಾರ್ಮಿಕರಿಗೆ ಈಗ ನೀಡುತ್ತಿರುವ ಉಚಿತ ಮನೆ, ಕುಡಿಯುವ ನೀರು, ವಿದ್ಯುತ್‌ಚ್ಛಕ್ತಿ, ಆಸ್ಪತ್ರೆ ಸೌಲಭ್ಯಗಳನ್ನು ಕೊಡುವ ಅಗತ್ಯವಿಲ್ಲ ಎಂಬ ಪ್ರತಿಪಾದನೆ ತರಲಾಗುತ್ತಿದೆ.
- ❖ ಬಂಡವಾಳದ ಆಕರ್ಷಣೆಗಾಗಿ ಕೇಂದ್ರ ಸರ್ಕಾರ ತರುತ್ತಿರುವ ಕಾರ್ಮಿಕ ಕಾನೂನುಗಳ ತಿದ್ದುಪಡಿಗೆ ರಾಜ್ಯ ಸರ್ಕಾರದ ವಿರೋಧವಿಲ್ಲ.
- ❖ ಹೊಸ ಕಾರ್ಮಿಕ ನೀತಿಯನ್ನು ಮಾಲೀಕರ ಪರವಾಗಿ ತರಲು ಪ್ರಯತ್ನಿಸಲಾಗುತ್ತಿದೆ.
- ❖ ಕೃಷಿ ಬಿಕ್ಕಟಿಗೆ ಯಾವುದೇ ಪರಿಹಾರಗಳಿಲ್ಲ.
- ❖ ಉತ್ಪಾದನಾ ವಲಯಗಳಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯಿಲ್ಲ.
- ❖ 18ನೇ ವೇತನ ಆಯೋಗ ಶಿಫಾರಸ್ಸಿನಂತೆ ಕನಿಷ್ಠ ವೇತನ ಜಾರಿ ಮಾಡಲು ಪ್ರಯತ್ನಿಸಲಿಲ್ಲ.
- ❖ ಅಂಗನವಾಡಿ, ಆಶಾ, ಬಿಸಿಯೂಟ ಮುಂತಾಟ ಯೋಜನೆಗಳಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಕೇವಲ ನಿಕೃಷ್ಟವಾಗಿ ದುಡಿಸಿಕೊಳ್ಳಲಾಗುತ್ತಿದೆ.

ಮೇ ದಿನದ ಕರೆ

ನವ ಉದಾರವಾದಿ ಮತ್ತು ವಿಷಕಾರಿ ಕೋಮುವಾದಿ ಕಾರ್ಯಸೂಚಿಗಳ ಅಪಾಯಕಾರಿ ಸಂಯೋಜನೆಯ ಇಂತಹ ಪ್ರಯತ್ನಗಳ ವಿರುದ್ಧ ಈಗಾಗಲೇ ಸಿಐಟಿಯು ಕಳೆದ 2 ಮಹಾ ಮುಷ್ಕರಗಳಲ್ಲಿ 32 ಕೋಟಿ ಕಾರ್ಮಿಕರು ಭಾಗವಹಿಸಿದರು. ವಿಶೇಷವಾದ ಶೋಷಣೆಗೆ ಒಳಗಾಗಿರುವ ಗುತ್ತಿಗೆ ಕಾರ್ಮಿಕರನ್ನು ಸಂಘಟಿಸಲು ವಿಶೇಷ ಆಸಕ್ತಿ ವಹಿಸಿ ಮೇ 1 ರಿಂದ ಪ್ರಚಾರಾಂದೋಲನ ನಡೆಸಲು ಕರೆ ಕೊಟ್ಟಿದೆ.



ರಾಜ್ಯದಲ್ಲಿಯೂ ಕೂಡಾ ರಾಜ್ಯದ ಸಂಪತ್ತಿನ ಸೃಷ್ಟಿಗೆ ಕಾರಣವಾಗಿರುವ ಕಾರ್ಮಿಕರಿಗೂ ಸಮಪಾಲು ಸಿಗಬೇಕೆಂದೂ ಒತ್ತಾಯಿಸಿ ಲಕ್ಷಾಂತರ ಜನರ ಮತಪ್ರದರ್ಶನ ಮಾಡಲು ಸಿಐಟಿಯು ಕರೆ ನೀಡಿದೆ. ಮೇ 1 ರಂದು ಮೇ ದಿನದ ಇತಿಹಾಸವನ್ನು ಅದರ ಪ್ರಾಮುಖ್ಯತೆಯನ್ನು ಅರಿತು ರಾಜ್ಯದಲ್ಲಿ ಕನಿಷ್ಠ 120 ತಾಲೂಕುಗಳಲ್ಲಿಯೂ ಮೇ ದಿನಾಚರಣೆಯನ್ನು ಆಚರಿಸಲು ಕರೆ ನೀಡಿದೆ.

ಆದ್ದರಿಂದ ಕರ್ನಾಟಕದ ದುಡಿಯುವ ವರ್ಗದ ಎಲ್ಲ ವಿಭಾಗಗಳು ಸೇರಿ ತಮ್ಮ ಐಕ್ಯತೆಯನ್ನು ಪ್ರದರ್ಶಿಸುವ ಅಗತ್ಯತೆ ಇದೆ.

ಮೇ 1 2017, ಕಾರ್ಮಿಕ ದಿನಾಚರಣೆಯನ್ನು "ಕಾರ್ಮಿಕ ಹಕ್ಕುಗಳ ರಕ್ಷಣೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳ ಜಾರಿ ಹಾಗು ಸಾರ್ವಜನಿಕ ಉದ್ದಿಮೆಗಳ ಉಳಿವಿಗಾಗಿ" ಒತ್ತಾಯಿಸುವ ಪ್ರತಿಭಟನಾ ದಿನವಾಗಿ ಆಚರಿಸ ಬೇಕು. ಕೇಂದ್ರ ಸರ್ಕಾರವು ಹಲವು ಮಾರಕವಾದ ತಿದ್ದುಪಡಿಗಳನ್ನು ಕಾರ್ಮಿಕ ಕಾನೂನುಗಳಲ್ಲಿ ತರಲು ಈಗಾಗಲೇ ತೀರ್ಮಾನಿಸಿದೆ. ಜತೆಯಲ್ಲಿ ಲಾಭದಾಯಕವಾಗಿ ಕಾರ್ಯನಿರ್ವಹಿಸುವ ಹಾಗು ಕೆಲಸದ ಅವಕಾಶಗಳಲ್ಲಿ ಸಾಮಾಜಿಕ ನ್ಯಾಯವನ್ನು ಜಾರಿಗೊಳಿಸುತ್ತಿರುವ, ಜನರ ತೆರಿಗೆ ಹಣದಲ್ಲಿ ಪ್ರಾರಂಭಿಸಿ ಈಗ ಲಕ್ಷಾಂತರ ಕೋಟಿಗಳಷ್ಟು ಬೆಲೆಬಾಳುವ ಜನರ ಆಸ್ತಿಯಾಗಿರುವ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿ ಕಾರ್ಪೋರೇಟ್ ಕಂಪನಿಗಳಿಗೆ ಅಗ್ಗದ ದರದಲ್ಲಿ ಮಾರಾಟ ಮಾಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಈ ದೇಶದ್ರೋಹಿ ತೀರ್ಮಾನವನ್ನು ಈ ಮೇ ದಿನದಂದು ಜನರ ಮಧ್ಯೆ ಬಯಲುಗೊಳಿಸಬೇಕು. ಇದ–ಕ್ಕೆ ಸಾರ್ವಜನಿಕ ಉದ್ಯಮಗಳ ಕಾರ್ಮಿಕರನ್ನು ಹಾಗೂ ಇಡೀ ಕಾರ್ಮಿಕ ವರ್ಗವನ್ನೂ ಜನತೆಯನ್ನೂ ಅಣಿನೆರೆಸಬೇಕು. ಸಮಾಜವಾದಿ ಕ್ರಾಂತಿಯ 100 ವರ್ಷಾಚರಣೆಯ ಹಿನ್ನೆಲೆಯಲ್ಲಿ ಮೇ ತಿಂಗಳ ಪೂರ್ತಿಯಾಗಿ ಸೈದ್ಧಾಂತಿಕ ಪ್ರಚಾರ ಹಾಗು ಪ್ರಕ್ಷೋಭೆಗಳನ್ನು ಮಾಡಬೇಕು. ಕಾರ್ಮಿಕರ ತಿಳುವಳಿಕೆ ಮಟ್ಟವನ್ನು ಎತ್ತರಿಸಲು ಪ್ರಯತ್ನಿಸಬೇಕು ಎಂಬುದೂ ಮೇ ದಿನದ ಕರೆಯ ಭಾಗ.

ಸಮಾಜವಾದಿ ಕ್ರಾಂತಿ..... ವಿಚಾರ ಸಂಕಿರಣ.... ಪುಟ 16 ರಿಂದ

ಮಹಿಳೆಯರನ್ನು ಕೇವಲ ಭೋಗದ ವಸ್ತುವನ್ನಾಗಿ ಬಳಸಿಕೊಂಡ ಈ ಸಂಸ್ಕೃತಿ ನಮಗೆ ಅಗತ್ಯವಿದೆಯೇ? .ಕನ್ಯತ್ವ ಹರಣ ಮಾಡುವುದು, ದೈವ ಗುಣಗಳಿಗೆ ಹೆಣ್ಣು ಬಲಿಯಾಗುವುದು, ಯಜ್ಞ–ಯಾಗದಿಗಳಲ್ಲಿ ಆಕಳೂ – ಆಡು ಬಲಿಕೊಡುತ್ತಿದ್ದದು ಯಾವ ಸಂಸ್ಕೃತಿ– ಬುದ್ಧನ ಭೋದನೆಯವರೆಗೂ ಇವೆಲ್ಲಾ ನಡೆಯುತ್ತಿದ್ದವು. ಗೋವುಗಳನ್ನು ಯಜ್ಞಗಳಲ್ಲಿ ಬಲಿಕೊಡುತ್ತಿದ್ದರು. ಬುದ್ಧನ ಆಗಮನದಿಂದ ಈ ಹಿಂಸೆ ನಿಂತಿತು. ಆದರೆ ಇದೀಗ ಗೋವಿನ ರಕ್ಷಣೆ–ಯ ಹೆಸರಿನಲ್ಲಿ ಗೋವು ಮಾಂಸ ತಿನ್ನುವುದನ್ನು ಅಪರಾದ ಮಾಡಲಾಗುತ್ತಿದೆ. ಮಹಿಳೆಗೆ ಆಸ್ತಿಯ ನಿರಾಕರಣೆ ಮಾಡಲಾಗಿತ್ತು. ಸಂವಿಧಾನದಲ್ಲಿ ಅಂಬೇಡ್ಕರ್ ಒದಗಿಸಿಕೊಟ್ಟರು, ಸೋದರತ್ವ – ಸಮಾನತೆ ಮಹಿಳೆಗೆ ಇರಲಿಲ್ಲ. ಮಹಾಕಾವ್ಯಗಳನ್ನು ಪೂಜ್ಯ ಭಾವನೆಯಿಂದ ನೋಡಬೇಕು ಎನ್ನುವವರು, ಜುಂಗಪ್ಪನ ಕಾವ್ಯ, ತತ್ವಪದ, ಮಲೆ ಮಹಾದೇಶ್ವರ, ಮಂಟೇಸ್ವಾಮಿ ಪ್ರಸಂಗಗಳು ಮುಂತಾದ ನಿಜವಾದ ಕಾವ್ಯಗಳಿಗೆ ಕಾಳಜಿ ಕೊಡುವುದಿಲ್ಲ.

ಒಟ್ಟಾರೆಯಾಗಿ ಇಂದಿನ ಧರ್ಮಾಂದರು ಅಧಿಕಾರ ಏರಿದ್ದಾರೆ. ಅದರ ಸಾಂಸ್ಕೃತಿ ರಾಜಕೀಯ , ಜನರ ತಿನ್ನುವ ಹಕ್ಕನ್ನು, ಸಮಾನತೆಯ ಹಕ್ಕನ್ನೂ, ಜಾತ್ಯಾತೀತ ಮೌಲ್ಯಗಳನ್ನು ಸಂಸ್ಕೃತಿಕ ದಬ್ಬಾಳಿಕೆಯ ಮೂಲಕ ನಾಶಮಾಡುತ್ತಿವೆ. ಅಂಬೇಡ್ಕರ್ ರವರು ಕಂಡ ಸಂವಿಧಾನದ ಆಶಯಗಳ ಸಾಂಸ್ಕೃತಿಕತೆಗೆ ಧ–ಕ್ಕೆಯಾಗುತ್ತಿದೆ. ಎಚ್ಚೆತ್ತು ಕೊಂಡು ಹೋರಾಡಬೇಕಿದೆ, ಆಗ ಮಾತ್ರ ಸಾಮಾಜಿಕ ನ್ಯಾಯ ದೊರಕಿಸಲು ಸಾಧ್ಯವೆಂದರು.

ಅಂಬೇಡ್ಕರ್ 126 ಜನ್ಮ ದಿನಾಚರಣೆ–ಯ ಅಂಗವಾಗಿ ಏರ್ಪಡಿಸಲಾಗಿದ್ದ ಈ ವಿಚಾರ ಸಂಕಿರಣದಲ್ಲಿ ಆರಂಭದಲ್ಲಿ ಸಮುದಾಯದ ಪ್ರಧಾನ ಕಾರ್ಯದರ್ಶಿ ಎಸ್. ದೇವೇಂದ್ರ ಗೌಡ ಸ್ವಾಗತಿಸಿದರು. ಪ್ರಾಸ್ತಾವಿಕ ನುಡಿಯನ್ನು ಸಮುದಾಯದ ಸಂಘಟನಾ ಕಾರ್ಯದರ್ಶಿ ಡಾ। ವಿಠ್ಠಲ ಭಂಡಾರಿ ನಡೆಸಿಕೊಟ್ಟರು. ಸಮುದಾಯದ ಅಧ್ಯಕ್ಷರಾದ 'ಅಚ್ಯುತ'ರು ಉಪಸ್ಥಿತರಿದ್ದರು. 'ವಿಚಾರ ಸಂಕಿರಣ'ದ ಅಧ್ಯಕ್ಷತೆಯನ್ನು, ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ವಹಿಸಿದ್ದರು., ಕರ್ನಾಟಕ ರಾಜ್ಯ ಎಸ್.ಸಿ./ಎಸ್.ಟಿ. ನೌಕರರ ಕೇಂದ್ರ ಸಮಿತಿಯ, ಪ್ರಧಾನ ಕಾರ್ಯದರ್ಶಿ 'ಮಾಯುಶ್ರೀ' ಕಾರ್ಯಕ್ರಮದ ನಿರೂಪಣೆ ಮಾಡಿದರು. ದಲಿತ ಹಕ್ಕುಗಳ ಸಮಿತಿಯ, ರಾಜ್ಯ ಮುಖಂಡರಾದ ಎನ್. ರಾಜಣ್ಣ ವಂದನಾರ್ಪಣೆ ಸಲ್ಲಿಸಿದರು.

ಈ ಮಧ್ಯೆ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್‌ದಾಸ್ ರವರ ಜಾಗತಿಕ ಧುರೀಣ ಅಂಬೇಡ್ಕರ್ ಕಿರುಪುಸ್ತಕವನ್ನೂ, ನ್ಯಾಯಮೂರ್ತಿ ಎ.ಜೆ. ಸದಾಶಿವ ರವರಿಂದ ಬಿಡುಗಡೆ ಮಾಡಲಾಯಿತು.

ಮಾಧ್ಯಮ ಮಥನ

ವೇದನೆಯ ನಡುವೆಯೂ ಬೇಕಿತ್ತೇ ಈ ಪರಿಯ ಮೇಲಾಟ...?

ವಿಶ್ವ

ಯಾರೂ ಬಯಸದ, ನಿರೀಕ್ಷಿಸದ ಅಮಾನವೀಯ ಅವಘಡವೊಂದು ಮತ್ತೊಮ್ಮೆ ನಡೆದುಹೋಗಿದೆ. ಆಕಸ್ಮಿಕವಾಗಿ ತೆರೆದ ಕೊಳವೆ ಬಾವಿಗೆ ಬಿದ್ದ ಆರು ವರ್ಷದ ಕಂದಮ್ಮ ಕಾವೇರಿಯನ್ನು ಉಳಿಸಿಕೊಳ್ಳಲು ನಡೆಸಿದ ಪ್ರಯತ್ನಗಳೆಲ್ಲವೂ ವಿಫಲವಾಗಿವೆ.

ಬೆಳಗಾವಿ ಜಿಲ್ಲೆಯ ಝುಂಝುರವಾಡದಲ್ಲಿ ಎಪ್ರಿಲ್ 22ರಂದು ಕಟ್ಟಿಗೆ ಸಂಗ್ರಹಿಸಲೆಂದು ತೆರಳಿದ್ದ ಕೃಷಿಕೂಲಿಗಾರರಾದ ತಾಯಿ ಸವಿತಾ ಜೊತೆ ಹೋಗಿದ್ದ ಕಾವೇರಿ ಸಂಜೆ 5.30 ರ ಸುಮಾರಿಗೆ ಕೊಳವೆ ಬಾವಿಗೆ ಬಿದ್ದಿದ್ದು ಆಕೆಯನ್ನು ಜೀವಂತವಾಗಿ ಹೊರತರಲು ಮಾಡಿದ ಹರಸಾಹಸಗಳಾವುವೂ ಫಲ ನೀಡಲಿಲ್ಲ. ಇದೇ ಜೂನ್‌ನಿಂದ ಆರಂಭವಾಗುವ ಶೈಕ್ಷಣಿಕ ವರ್ಷದ ಆರಂಭದಲ್ಲಿ ಮಗಳನ್ನು ಶಾಲೆಗೆ ಸೇರಿಸಿ ಅವಳನ್ನು ವಿದ್ಯಾವಂತಳನ್ನಾಗಿ ಮಾಡಬೇಕೆಂಬ ತಂದೆ ಅಜಿತರ ಕನಸು ಭೂಮಾಲಿಕ ರೈತನೊಬ್ಬನ ಬೇಜವಾಬ್ದಾರಿಯಿಂದಾಗಿ ಮಣ್ಣು ಪಾಲಾಯಿತು.

ಇಂಥ ಅವಘಡ ಸಂಭವಿಸಿದಾಗೆಲ್ಲ ಆ ಬಗ್ಗೆ ಚರ್ಚೆಯಾಗಿ ಮತ್ತೊಮ್ಮೆ ಅಂಥ ಅನಾಹುತ ಸಂಭವಿಸುವವರೆಗೆ ಇದಕ್ಕೆ ಕಾರಣವಾಗುವ ಬೇಜವಾಬ್ದಾರಿತನವನ್ನು ಮರೆತೇ ಹೋಗಿರುತ್ತೇವೆ. ಅಧಿಕಾರಶಾಹಿಯಂತೂ ಎಂದಿನಂತೆ ಸ್ಪಂದನೆಯಿಲ್ಲದೆ ತನ್ನ ಕಾರ್ಯದಲ್ಲಿ ನಿರತವಾಗಿರುತ್ತದೆ.

ಅವಘಡ ಸಂಭವಿಸಿದ ಬೆನ್ನಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮ ನಡೆದುಕೊಂಡ ರೀತಿಯನ್ನು ಕಂಡ ಹಿನ್ನೆಲೆಯಲ್ಲಿ ಕಾವೇರಿ ವಿಚಾರವನ್ನು ಬರೆಯಬೇಕಾಯಿತು. ಕಾವೇರಿ ಪಾಳು ಬಿದ್ದ ತೆರೆದ ಕೊಳವೆ ಬಾವಿಗೆ ಬಿದ್ದ ವಿಚಾರ ಬ್ರೇಕಿಂಗ್ ಸುದ್ದಿಯಾಗಿ ಪ್ರಸಾರವಾದಾಗಿನಿಂದ ಟಿವಿ ಚಾನೆಲ್‌ಗಳು ಸತತವಾಗಿ ಕ್ಷಣಕ್ಷಣದ ಮಾಹಿತಿಯನ್ನು ಘಟನಾ ಸ್ಥಳದಿಂದ ವರದಿ ಮಾಡುತ್ತಾ ಬಂದವು. ಪುಟ್ಟ ಬಾಲಕಿ, ಮುಗ್ಧ ಬಾಲಕಿ ಜೀವಂತವಾಗಿ ಬರಬೇಕೆಂಬ ಅವುಗಳ ಕಾಳಜಿಪೂರ್ಣ ಕವರೇಜ್‌ಅನ್ನು, ಅವುಗಳ ವೃತ್ತಿ 'ಧರ್ಮ'ವನ್ನು ಯಾವ ಕಾರಣಕ್ಕೂ ಪ್ರಶ್ನಿಸಲಾಗದು.

ಆದರೆ ಕಾವೇರಿ ಬದುಕಿ ಬರಲೆಂದು ಹಾರೈಸುತ್ತಾ ಇಡೀ ರಾಜ್ಯದ ಜನರೊಂದಿಗೆ ದೇಶದ ಇತರ ಭಾಗಗಳ ಜನರು ಕಾತರದಿಂದ ಕಾಯುತ್ತಾ ಇದ್ದ ಸಂದರ್ಭದಲ್ಲಿ ಕೆಲವು ಚಾನೆಲ್‌ಗಳು ನಡೆದುಕೊಂಡ ರೀತಿ ಮಾತ್ರ ಅಸಹ್ಯ ಹುಟ್ಟಿಸುವ 'ಮಾಧ್ಯಮ ಸ್ಪರ್ಧೆ'ಗೆ ಇನ್ನೊಂದು ಉದಾಹರಣೆಯಾಗಿ ಸೇರ್ಪಡೆಯಾಯಿತು.

ಎಪ್ರಿಲ್ 23ರಿಂದಲೂ ಎನ್‌ಡಿಆರ್‌ಎಫ್, ಹಟ್ಟಿ ಚಿನ್ನದ ಗಣಿ ತಜ್ಞರು, ಅಗ್ನಿಶಾಮಕ ಪಡೆಗಳು ನಡೆಸಿದ ಕಾರ್ಯಾಚರಣೆ 24ರ ಸಂಜೆಯೂ ಮುಂದುವರಿಯುತ್ತಿದ್ದ ಸಂದರ್ಭದಲ್ಲಿ ಒಂದು ವಾಹಿನಿ ಸಂಜೆ ಸುಮಾರು ಐದು ಗಂಟೆ ಹೊತ್ತಿಗೆ 'ಕಾವೇರಿ ದೇಹವನ್ನು ಹೊರತರಲಾಗಿದೆ' ಎಂಬ ಬ್ರೇಕಿಂಗ್ ಸುದ್ದಿಯನ್ನು ಬಿತ್ತರಿಸಿತು. ಕಾವೇರಿ ಬದುಕಿ ಬರಲಿ ಎಂದು ಹಾರೈಸುತ್ತಿದ್ದ ಕೋಟಿ ಕೋಟಿ ಹೃದಯಗಳಲ್ಲಿ ಭರವಸೆಯ ಬೆಳಕು ಮಿಂಚಿದಂತಾಯಿತು! ಸುದ್ದಿ ಸತತವಾಗಿ ಪ್ರಸಾರವಾಗುತ್ತಲೇ ಇತ್ತು.

ಇರಲಿ, ನೋಡೋಣ ಎಂದು ಚಾನೆಲ್ ಬದಲಾಯಿಸಿ ಬೇರೊಂದು ಚಾನೆಲ್ ನೋಡಲು ಆರಂಭಿಸಿದೆ. ಅದರಲ್ಲಿನ ಆಂಕರ್ "ಕಾರ್ಯಾಚರಣೆ ಇನ್ನೂ ಮುಗಿದಿಲ್ಲ. ಕಾವೇರಿಯನ್ನು ತಲುಪಬೇಕಾದರೆ ಇನ್ನೂ ಎರಡು ಅಡಿ ಕೊರೆಯಬೇಕಾಗಿದೆ. ಬಾಲಕಿಯನ್ನು ಹೊರತರಲಾಗಿದೆ ಎಂಬ ಚಾನೆಲ್ ಒಂದರ ಸುದ್ದಿ ಸರಿಯಲ್ಲ" ಎಂಬುದಾಗಿ ಹೇಳುತ್ತಿದ್ದರು.



ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ

ಅದು ಸರಿಯಾದುದಾಗಿತ್ತು. ಯಾಕೆಂದರೆ ಐದು ಗಂಟೆ ಹೊತ್ತಿಗೆ ಬಾಲಕಿಯನ್ನು ಹೊರತಂದೇ ಇರಲಿಲ್ಲ. ಕಾರ್ಯಾಚರಣೆ ಮುಂದುವರಿದು ಅದು ಮುಕ್ತಾಯವಾಗಿದ್ದು ರಾತ್ರಿ 11.30 ರ ಸುಮಾರಿಗೆ. ಇಷ್ಟಾದರೂ ಐದು ಗಂಟೆಗೆ 'ಬ್ರೇಕಿಂಗ್' ಕೊಟ್ಟಿದ್ದ ಆ ಚಾನೆಲ್ ಇನ್ನೂ ಹಲವು ಗಂಟೆ ಕಾಲ ಆ ಸುಳ್ಳು ಮಾಹಿತಿಯನ್ನೇ ಬಿತ್ತರಿಸಿತು.

ಹೃದಯವೇ ಒಡೆದುಹೋಗುವಂಥ ಸನ್ನಿವೇಶದ ನಡುವೆ ಎಲ್ಲರೂ ಇರುವಾಗ ಬ್ರೇಕಿಂಗ್ ನ್ಯೂಸ್‌ನ ಹಪಾಹಪಿಗಾಗಿ ಈ ರೀತಿಯಲ್ಲಿ ಮಾಡಿದ್ದು ಸರಿಯೇ?. ಈ ಪರಿಯ ಸ್ಪರ್ಧೆ ಅಗತ್ಯವೇ?

ಮೈ ಸುಡುವ ಬಿಸಿಲಿನ ನಡುವೆಯೂ ಭೂಮಿಯ ಒಳಗಡೆ ಕೊರೆಯುವ ಕಾರ್ಯಾಚರಣೆ ನಡೆಸುತ್ತಿದ್ದ ತಜ್ಞರ ಸಾಹಸವನ್ನು ಈ ರೀತಿಯ ಸುಳ್ಳು ಮಾಹಿತಿಯಿಂದಾಗಿ ಅಣಕಿಸಿದಂತಾಗಲಿಲ್ಲವೇ ಎಂದು ಪ್ರಶ್ನಿಸಿಕೊಳ್ಳಬೇಕಾಗುತ್ತದೆ.

ಈ ನಡುವೆ ವಿಚಾರ ಮಾಡಬೇಕಾದ ಇನ್ನೂ ಒಂದು ಅಂಶವಿದೆ. ಕೆಲವು ಚಾನೆಲ್‌ಗಳ ವರದಿಗಾರರು ಆ ಪುಟ್ಟ ಬಾಲಕಿಯ ಸುಮಾರು ಎರಡು ವರ್ಷದ ತಮ್ಮನ 'ಬೈಟ್'ಗಾಗಿ ಲೋಗೋಗಳನ್ನು ಹಿಡಿದು 'ವಿಚಾರಣೆ' ನಡೆಸಿದ್ದು ನೋಡಿ ಮನಸ್ಸಿಗೆ ಖೇದವಾಯಿತು. ಪಾಪ, ಆ ಮುಗ್ಧ ಕಂದಮ್ಮ ಏನು ತಾನೆ ಹೇಳಿಯಾನು?.

ಬ್ರೇಕಿಂಗ್ ನ್ಯೂಸ್, 'ನಾನೇ ಮೊದಲು ಸುದ್ದಿ ಕೊಟ್ಟಿದ್ದು' ಎಂಬ ಸಾಧನೆಯ ಕಿರೀಟ ತೊಟ್ಟುಕೊಳ್ಳುವ ಹಪಹಪಿಕೆಗಳನ್ನು ಅವಘಡ, ದುರಂತಗಳ ಸಂದರ್ಭಗಳಲ್ಲಾದರೂ ಬದಿಗಿಟ್ಟು ಮಾಧ್ಯಮಗಳು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲಿ ಎಂದು ಆಶಿಸಿದರೆ ತಪ್ಪಾಗಲಾರದು, ಅಲ್ಲವೇ?.

ತುಮಕೂರು ವಿವಿ ಹಳೆ ಲಾಂಛನ ಉಳಿಸಿ



ತುಮಕೂರು ವಿಶ್ವವಿದ್ಯಾಲಯ ಜಿಲ್ಲೆಯ ಅಸ್ಮಿತೆಯನ್ನು ಒಳಗೊಂಡಿರುವ ಹಳೆಯ ಲಾಂಛನವನ್ನು ಮರು ಸ್ಥಾಪನೆ ಮಾಡಿರುವ ಹಿನ್ನೆಲೆಯಲ್ಲಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ನೇತೃತ್ವದಲ್ಲಿ ಕುಲಪತಿ ರಾಜಾಸಾಬ್ ಅವರಿಗೆ ಹೂಗುಚ್ಛ ನೀಡಿ ಅಭಿನಂದನೆ ಸಲ್ಲಿಸಲಾಯಿತು. ತೆಂಗು, ತುಂಬೆ, ಮಧುಗಿರಿ ಏಕಶಿಲಾ ಬೆಟ್ಟವುಳ್ಳ ತುಮಕೂರು ಜಿಲ್ಲೆಯ ಅಸ್ಮಿತೆಯನ್ನು ಸಾರುವ ಲಾಂಛನ ಮರು ಸ್ಥಾಪನೆ ಮಾಡಿರುವುದು ಜಿಲ್ಲೆಯ ಜನರಿಗೆ ನೀಡಿದ ಗೌರವಾಗಿದೆ ಎಂದು ತುಮಕೂರು ವಿವಿ ಹಳೆ ಲಾಂಛನ ಉಳಿಸಿ ಹೋರಾಟ ಸಮಿತಿ ಅಧ್ಯಕ್ಷ ಕೆ.ದೊರೈರಾಜ್, ಶ್ರೀನಿವಾಸಯ್ಯ ಹೇಳಿದ್ದಾರೆ.

ತುಮಕೂರು ಜಿಲ್ಲೆಯ ರೈತರು, ಶಿಕ್ಷಣ ತಜ್ಞರು, ಪ್ರಗತಿಪರ ಚಿಂತಕರು, ಶಿಕ್ಷಣವೇತ್ತರು, ಜನಪರ ಹೋರಾಟಗಾರರು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಸೇರಿದಂತೆ ಎಲ್ಲಾ ವರ್ಗ ಜನರ ಅಭಿಪ್ರಾಯ ಪಡೆದು ಹಳೆಯ ಲಾಂಛನವನ್ನು ರೂಪಿಸಲಾಗಿತ್ತು. ಆದರೆ ಹಿಂದಿನ ಕುಲಪತಿ ಶರ್ಮಾ ಅದನ್ನು ಏಕಾಏಕಿ ಬದಲಾವಣೆ ಮಾಡಿದರು. ಹಾಗಾಗಿ ನಾವು ಹೋರಾಟದ ಹಾದಿ ಹಿಡಿಯಬೇಕಾಯಿತು. ನಮ್ಮ ಹೋರಾಟಕ್ಕೆ ಸರ್ಕಾರ ಮತ್ತು ತುಮಕೂರು ವಿಶ್ವವಿದ್ಯಾಲಯ ಸ್ಪಂದಿಸಿ ಹಳೆಯ ಲಾಂಛನವನ್ನೇ ಮರು ಸ್ಥಾಪನೆ ಮಾಡಿದೆ. ಇದು ಜಿಲ್ಲೆಯ ಜನರಿಗೆ ತುಂಬಾ ಸಂತೋಷ ತಂದಿದೆ. ಅದಕ್ಕಾಗಿ ಕುಲಪತಿಗಳು ಮತ್ತು ಕುಲಸಚಿವರು ಸೇರಿದಂತೆ ಇದಕ್ಕಾಗಿ ಶ್ರಮಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕುಲಪತಿ ಡಾ.ರಾಜಾಸಾಬ್, ತುಮಕೂರು ಜಿಲ್ಲೆಯ ಜನರ ಹೋರಾಟದ ಹಿನ್ನೆಲೆಯಲ್ಲಿ ಸರ್ಕಾರ ಹಳೆಯ ಲಾಂಛನವನ್ನೇ ಮರು ಸ್ಥಾಪಿಸುವಂತೆ ಆದೇಶ ನೀಡಿದೆ. ಹೀಗಾಗಿ ಸಿಂಡಿಕೇಟ್ ಮತ್ತು ವಿದ್ಯಾ ವಿಷಯಕ ಪರಿಷತ್‌ನಲ್ಲಿ ಒಪ್ಪಿಗೆ ಪಡೆದು ಜಿಲ್ಲೆಯ ಅಸ್ಮಿತೆ ಸಾರುವ ಲಾಂಛನವನ್ನು ಮರು ಸ್ಥಾಪಿಸಲಾಗಿದೆ ಎಂದರು.

ಹೋರಾಟವನ್ನು ಬೆಂಬಲಿಸಿದ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ದೃಶ್ಯ ಮತ್ತು ಮಾಧ್ಯಮ ಪ್ರತಿನಿಧಿಗಳಿಗೆ ವಿವಿ ಲಾಂಛನ ಉಳಿಸಿ ಹೋರಾಟ ಸಮಿತಿ ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ಅಭಿನಂದನೆ ಸಲ್ಲಿಸುತ್ತದೆ.

ಈ ಸಂದರ್ಭದಲ್ಲಿ ಮಾಜಿ ಸಿಂಡಿಕೇಟ್ ಸದಸ್ಯ ಎಸ್.ರಮೇಶ್, ಸಮುದಾಯದ ಸುರೇಂದ್ರ ಡಾ.ಓ.ನಾಗರಾಜ್, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಪ್ರಾಂತ ರೈತ ಸಂಘದ ಬಿ.ಉಮೇಶ್, ಎಸ್‌ಎಫ್‌ಐ ಈ.ಶಿವಣ್ಣ, ಹೋರಾಟ ಸಮಿತಿ ಕಾರ್ಯದರ್ಶಿ ಎಸ್. ರಾಘವೇಂದ್ರ, ಡಿವೈಎಫ್‌ಐ ದರ್ಶನ್, ಸಮುದಾಯ ಕಾರ್ಯದರ್ಶಿ ಕೆ.ಈ.ಸಿದ್ದಯ್ಯ, ಹಾಜರಿದ್ದರು.

ಕಿರುಗತೆ

ಬಾಲಕ, ಹಸು ಮತ್ತು ಸನ್ಯಾಸಿಗಳು

– ಕಮಲಾ ದಾಸ್*

ಒಂದು ದಿನ ಒಬ್ಬ ಚಿಕ್ಕ ಬಾಲಕ ರಸ್ತೆ ಬದಿಯಲ್ಲಿದ್ದ ಕಸದ ತೊಟ್ಟಿಯಿಂದ ಒಂದು ಬಾಳೆಹಣ್ಣು ಸಿಪ್ಪೆಯನ್ನು ಹೆಕ್ಕಿದ. ಇನ್ನೇನು ತಿನ್ನಬೇಕು, ಒಂದು ಹಸು ಬಂದು ಅದನ್ನು ಅವನ ಕೈಯಿಂದ ಕಿತ್ತುಕೊಂಡಿತು. ಹುಡುಗನಿಗೆ ಬೇಸರವಾಯ್ತು, ಅವನು ಹಸುವನ್ನು ತಳ್ಳಿದ. ಹಸು ಅಂಬಾ ಎನ್ನುತ್ತ ರಸ್ತೆಯಲ್ಲಿ ಓಡಲಾರಂಭಿಸಿತು. ಇದ್ದಕ್ಕಿದ್ದಂತೆ ಎಲ್ಲಿಂದಲೋ ಕೆಲವು ಸನ್ಯಾಸಿಗಳು ಕಾಣಿಸಿಕೊಂಡರು.

"ಆ ಪವಿತ್ರ ಹಸುವಿಗೆ ತೊಂದರೆ ಕೊಟ್ಟೆಯೇನು?"– ಅವರು ಹುಡುಗನನ್ನು ಕೇಳಿದರು.

"ಇಲ್ಲ. ಅದನ್ನು ಓಡಿಸಿದೆ, ಅಷ್ಟೇ. ಅದು ನಾನು ತಿನ್ನುತ್ತಿದ್ದ ಬಾಳೆಹಣ್ಣು ಸಿಪ್ಪೆಯನ್ನು ಕಸಿಯಿತು, ಅದಕ್ಕೇ."

"ನಿನ್ನ ಧರ್ಮ ಯಾವುದು?"– ಸನ್ಯಾಸಿಗಳು ಕೇಳಿದರು.

"ಧರ್ಮ? ಏನು ಹಾಗಂದ್ರೆ?"– ಹುಡುಗ ಕೇಳಿದ.

"ನೀನು ಹಿಂದೂವೊ ಅಥವ ಮುಸಲ್ಮಾನನೋ? ಅಥವ ಕ್ರಿಶ್ಚಿಯನ್ನೋ? ನೀನು ದೇವಸ್ಥಾನಕ್ಕೆ ಹೋಗ್ತೀಯಾ ಅಥವ ಮಸೀದೆಗೋ?"

"ನಾನು ಅಲ್ಲಿಗೆ ಎಲ್ಲಿಗೂ ಹೋಗೂದಿಲ್ಲ"– ಹುಡುಗ ಉತ್ತರಿಸಿದ.

"ಅಂದರೆ ನಿನಗೆ ಪೂಜೆ–ಪ್ರಾರ್ಥನೆಯಲ್ಲಿ ನಂಬಿಕೆ ಇಲ್ಲ?"

"ನಾನು ಎಲ್ಲಿಗೂ ಹೋಗೂದಿಲ್ಲ. ನನ್ನತ್ರ ಶರ್ಟಿಲ್ಲ,



ನನ್ನ ಚಡ್ಡಿ ಹಿಂಬದಿಯಲ್ಲಿ ಹರಿದಿದೆ."

ಸನ್ಯಾಸಿಗಳು ತಮ್ಮ–ತಮ್ಮೊಳಗೇ ಏನೋ ಗುಸುಗುಸು ಎಂದರು, ನಂತರ ಹುಡುಗನತ್ತ ತಿರುಗಿ

"ನೀನು ಮುಸಲ್ಮಾನನೇ ಇರಬೇಕು. ಹಸುವಿಗೆ ನೋವುಂಟು ಮಾಡಿದ್ದೀಯಾ."


"ಆ ಹಸು ನಿಮ್ಮದೇನು?"

ಆ ಸನ್ಯಾಸಿಗಳು ಹುಡುಗನ ಕುತ್ತಿಗೆ ತಿರುಚಿದರು, ಕಸದ ತೊಟ್ಟಿಗೆ ಎಸೆದರು.

ನಂತರ ಒಟ್ಟಿಗೇ ಸ್ತುತಿಸಿದರು–"ಓಂ ನಮಃ ಶಿವಾಯ, ಓಂ ನಮಃ ಶಿವಾಯ"

** ಮಲಯಾಳಂ ಲೇಖಕಿ ಕಮಲಾ ದಾಸ್ ಅವರ 60ರ ದಶಕದಲ್ಲಿ ಬರೆದ ಕಿರುಗತೆ. ಗೋ–ಭಯೋತ್ಪಾದನೆಯ ಈ ವರ್ಷವೇ ಬರೆದಂತಿದೆ. ವಾಟ್ಸಪ್ ನಲ್ಲಿ ಹರಿದು ಬಂದು 'ಸಬರಂಗ್ ಇಂಡಿಯಾ'ದಲ್ಲಿ ಪ್ರಕಟವಾಗಿದೆ

ಡಾಕ್ಟರುಗಳಿಗೆ ಜೆನೆರಿಕ್ ಕಡ್ಡಾಯ: ಜನರಿಗಾಗಿಯೋ ಅಥವ ಮತ್ತೊಂದು....



ಪ್ರಧಾನ ಮಂತ್ರಿಗಳು ಇನ್ನೊಂದು 'ಅಚ್ಛೇ ದಿನ್' ಹೇಳಿಕೆ ನೀಡಿದ್ದಾರೆ. ಡಾಕ್ಟರುಗಳು ಇನ್ನು ಮುಂದೆ ಔಷಧಿಗಳ ಸಲಹೆ ಕೊಡುವಾಗ ಅವುಗಳ ಜೆನೆರಿಕ್ ಅಂದರೆ ಸಾರ್ವತ್ರಿಕ ಹೆಸರುಗಳನ್ನೇ ಬರೆಯುತ್ತಾರೆ, 'ಬ್ರಾಂಡ್' ಹೆಸರುಗಳನ್ನಲ್ಲ ಎಂದು ಅವರು ಸಾರಿದ್ದಾರೆ. ದೇಶದಲ್ಲಿ ಆರೋಗ್ಯಪಾಲನೆಯ ಕ್ಷೇತ್ರದಲ್ಲಿ ಜನಸಾಮಾನ್ಯರುಗಳು ಕಷ್ಟಪಟ್ಟು ಗಳಿಸುವ ಆದಾಯದ ದೊಡ್ಡ ಪಾಲು ಔಷಧಿಗಳಿಗೆ ಖರ್ಚಾಗುತ್ತಿರುವಾಗ, ಬ್ರಾಂಡ್ ಔಷಧಿಗಳ ಬೆಲೆಗಳು ವಿಪರೀತ ಮಟ್ಟದಲ್ಲಿರುವಾಗ ಇದು ನಿಜಕ್ಕೂ ಸ್ವಾಗತಾರ್ಹ ಕ್ರಮ. ಆದರೆ ಇದು ನಿಜಕ್ಕೂ ಜಾರಿಯಾಗುತ್ತದೆಯೇ ಅಥವ ಆ ಆಶಯವಾದರೂ ಇದೆಯೇ ಎಂಬುದೇ ಮುಖ್ಯ ಪ್ರಶ್ನೆ.

ಕಳೆದ ಸುಮಾರು ಮೂರು ವರ್ಷಗಳ 'ಅಚ್ಛೇ ದಿನ್' ಹೇಳಿಕೆಗಳ ಫಲಿತಾಂಶಗಳನ್ನು ನೋಡಿದರೆ ಹಾಗೆನಿಸುವುದಿಲ್ಲ, ಈ ವಿಷಯದಲ್ಲಂತೂ ಇದು ಇನ್ನೊಂದು 'ಜನಮರುಳು' ಹೇಳಿಕೆಯಾಗುವ ಸಾಧ್ಯತೆಗಳೇ ಬಹಳ ಹೆಚ್ಚು ಎಂದು ಆರೋಗ್ಯ ಕ್ಷೇತ್ರದ ಪರಿಣಿತರು ಹಾಗೂ ಔಷಧಿ ಮಾರಾಟ ವೃತ್ತಿಯಲ್ಲಿರುವವರ ಟಿಪ್ಪಣಿಗಳಿಂದ ಅನಿಸುತ್ತದೆ. ಸರಕಾರಕ್ಕೆ ನಿಜವಾಗಿಯೂ ಜನಗಳ ಔಷಧಿ ಖರ್ಚುಗಳ ಹೊರೆಯನ್ನು ಕಡಿಮೆ ಮಾಡಬೇಕೆಂದಿದ್ದರೆ ಬೇರೆ ಕಾರ್ಯಸಾಧ್ಯವಾದ ಕ್ರಮಗಳಿವೆ, ಆದರೆ ಸರಕಾರ ಅದರತ್ತ ನೋಡುವುದೂ ಇಲ್ಲ ಎನ್ನುತ್ತಾರೆ ಇವರು.

ಭಾರತ ವೈದ್ಯಕೀಯ ಮಂಡಳಿ(ಎಂಸಿಐ) ಕಳೆದ ಸಪ್ಟಂಬರ್ 28ರಂದು ಡಾಕ್ಟರುಗಳಿಗೆ ಕಳಿಸಿದ ಸುತ್ತೋಲೆ "ಪ್ರತಿಯೊಬ್ಬ ವೈದ್ಯ ಜೆನೆರಿಕ್ ಹೆಸರುಗಳನ್ನೇ ತನ್ನ ಔಷಧಿ ಸೂಚಿಯಲ್ಲಿ ಚೆನ್ನಾಗಿ ಓದಬಹುದಾದ ರೀತಿಯಲ್ಲಿ ದೊಡ್ಡಕ್ಷರಗಳಲ್ಲಿ ಬರೆಯಬೇಕು, ಈ ಮೂಲಕ ಔಷಧಿಗಳ ಒಂದು ತರ್ಕಬದ್ಧ ಬಳಕೆಯಾಗುವಂತೆ ಮಾಡಬೇಕು" ಎಂದು ತಿಳಿಸಿತ್ತು, ಆದರೆ ಬಹುಪಾಲು ಡಾಕ್ಟರುಗಳು ಇದನ್ನು ಈಗಲೂ ಅನುಸರಿಸುತ್ತಿಲ್ಲ, ಮತ್ತು ಸರಕಾರ ಈ ಬಗ್ಗೆ ಯಾವುದೇ ತಪಾಸಣೆಯನ್ನೂ ಮಾಡುತ್ತಿಲ್ಲ ಎಂಬುದೇ ಇದು ಇನ್ನೊಂದು ಟೊಳ್ಳು ಹೇಳಿಕೆ ಎಂಬ ತೀರ್ಮಾನಕ್ಕೆ ಬರುವಂತೆ ಮಾಡುತ್ತದೆ ಎನ್ನುತ್ತಾರೆ ಜನಾರೋಗ್ಯ ಆಂದೋಲನದ ಒಬ್ಬ ಗಣ್ಯ ಕಾರ್ಯಕರ್ತರೂ ಆದ ಡಾ. ಅಮಿತ್ ಸೆನ್‌ಗುಪ್ತ.

ಭಾರತದ ವೈದ್ಯಕೀಯ ಮತ್ತು ಮಾರಾಟ ಪ್ರತಿನಿಧಿಗಳ ಒಕ್ಕೂಟ(ಎಫ್‌ಎಂಆರ್‌ಎಐ)ದ ರಾಷ್ಟ್ರೀಯ ಕಾರ್ಯದರ್ಶಿ ಮಂಡಳಿ ಇನ್ನೂ ಮುಂದೆ ಹೋಗಿ ಡಾಕ್ಟರುಗಳು ಜೆನೆರಿಕ್ ಔಷಧಿಗಳನ್ನೇ ಸೂಚಿಸಿದರೆ ಅವುಗಳ ಬೆಲೆಗಳು ಇಳಿಯುತ್ತವೆ ಎಂಬ ಸರಕಾರದ ದಾವೆ ಒಂದು ವಂಚನೆಯಲ್ಲದಿದ್ದರೂ ಅಸತ್ಯವು ಎಂದು ಹೇಳಿದೆ. ಏಕೆಂದರೆ ಈ ಮೂರು ವರ್ಷಗಳ ಅಚ್ಛೇ ದಿನಗಳಲ್ಲೇ ಉತ್ಪಾದನಾ ಖರ್ಚನ್ನು ಆಧರಿಸಿದ ಒಂದು ದಕ್ಷ ಬೆಲೆ ನಿಯಂತ್ರಣ ವ್ಯವಸ್ಥೆಯನ್ನು ಕಳಚಿ ಹಾಕಲಾಗಿದೆ. ಅದರ ಜಾಗದಲ್ಲಿ ಮಾರುಕಟ್ಟೆ ಆಧಾರಿತ ಬೆಲೆ ನಿಯಂತ್ರಣದ ಹೆಸರಲ್ಲಿ ಬೇರೊಂದು ವ್ಯವಸ್ಥೆಯನ್ನು ತಂದಿದೆ, ಅದು ಬಹುರಾಷ್ಟ್ರೀಯ ಔಷಧಿ ಕಂಪನಿಗಳಿಗೆ ಭಾರೀ ಲಾಭ ಮಾಡಿಕೊಳ್ಳಲು ಅವಕಾಶವಾಗಿದೆ ಎಂದು ಎಫ್‌ಎಂಆರ್‌ಎಐ ಹೇಳುತ್ತದೆ.

ವಾಸ್ತವವಾಗಿ 2005ರ ವರೆಗೆ ಔಷಧಿಗಳಲ್ಲಿ ಪೇಟೆಂಟನ್ನು ಭಾರತ ಮಾನ್ಯ ಮಾಡುತ್ತಿರಲಿಲ್ಲವಾದ್ದರಿಂದ ಎಲ್ಲ ಔಷಧಿಗಳೂ ಜೆನೆರಿಕ್ ಹೆಸರುಗಳಲ್ಲೇ ಸಿಗುತ್ತಿದ್ದವು, ಮತ್ತು ಬೆಲೆಗಳು ತರ್ಕಬದ್ಧವಾಗಿದ್ದವು. ಆದರೆ 2005ರಲ್ಲಿ ಗಾಟ್ ಒಪ್ಪಂದದ ನಂತರ ಪೇಟೆಂಟ್ ವ್ಯವಸ್ಥೆಯನ್ನು ಒಪ್ಪಿದ್ದರಿಂದ ಅದು ಕೆಲವೇ, ಅದರಲ್ಲೂ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರೀ ಲಾಭಗಳಿಗಾಗಿ ಬೆಲೆಗಳನ್ನು ಹೆಚ್ಚಿಸಲು ಅವಕಾಶ ಮಾಡಿಕೊಟ್ಟಿತು. ನಿಜ, ಇದನ್ನು ಆರಂಭಿಸಿದ್ದು ಕಾಂಗ್ರೆಸ್ ನೇತೃತ್ವದ ಸರಕಾರವೇ. ಆದರೆ ಈ ಅಚ್ಛೇದಿನ್ ಸರಕಾರ ಆ ನವ-ಉದಾರವಾದಿ ಧೋರಣೆಯನ್ನು ಬದಲಿಸುವ ಬದಲು ಅದನ್ನು ಇನ್ನಷ್ಟು ಕಠಿಣವಾಗಿ ಜಾರಿಗೆ ತರುತ್ತಿರುವಾಗ ಕಡಿಮೆ ಬೆಲೆಯ ಜೆನೆರಿಕ್ ಔಷಧಿಯ ಬಗ್ಗೆ ಹೇಳುವುದು ಗೋಸುಂಬೆತನ ತಾನೇ?

ಈ ಸಂದರ್ಭದಲ್ಲಿ ಭಾರತದ ಔಷಧಿ ಕ್ಷೇತ್ರದ ಒಂದು ವಿಶಿಷ್ಟತೆಯತ್ತ ಎಫ್‌ಎಂಆರ್‌ಎಐ ಗಮನ ಸೆಳೆದಿದೆ. ಮುಂದುವರೆದ ದೇಶಗಳಲ್ಲಿ ಪೇಟೆಂಟ್ ಆದ ಔಷಧಿಗಳಿಗೆ ಜೆನೆರಿಕ್ ಔಷಧಿಗಳಿಂದ ಹೆಚ್ಚಿನ ಸ್ಪರ್ಧೆಯೇನೂ ಇಲ್ಲ. ಆದರೆ ಭಾರತದಲ್ಲಿ ಪೇಟೆಂಟ್ ಆದ ಔಷಧಿಗಳಿಗೆ ಇಲ್ಲಿಯ ಬ್ರಾಂಡ್ ಹೆಸರಿನ ಔಷಧಿಗಳು ತೀವ್ರ ಸ್ಪರ್ಧೆ ಒಡ್ಡುತ್ತಿವೆ. ಅಂದರೆ ಮೋದಿ ಸರಕಾರದ ಈ ಕ್ರಮ ಬಹುರಾಷ್ಟ್ರೀಯ ಔಷಧಿ ಕಂಪನಿಗಳ ಪರವಾಗಿ ಬಂದಿದೆಯೇ? ಈ ಮೂರು ವರ್ಷಗಳಲ್ಲಿ ಅಚ್ಛೇದಿನ್ ಕ್ರಮಗಳ ನಿಜಸ್ವರೂಪಗಳನ್ನು ಕಂಡಿರುವಾಗ ಈ ಪ್ರಶ್ನೆ ಸಹಜವಾಗಿಯೇ ಅರ್ಥ ಪಡೆಯುತ್ತದಲ್ಲವೇ?

ಅಲ್ಲದೆ 2005 ರ ಮೊದಲು ಇದ್ದಂತೆ ಎಲ್ಲ ಔಷಧಿಗಳೂ ಈಗ ಜೆನೆರಿಕ್ ಔಷಧಿಗಳಾಗಿ ಸಿಗುತ್ತಿಲ್ಲ. ಅಂತಹ ಸಂದರ್ಭದಲ್ಲಿ ಡಾಕ್ಟರುಗಳು ಏನು ಮಾಡಬೇಕು ಎಂಬ ಪ್ರಶ್ನೆಯನ್ನೂ ಎಫ್‌ಎಂಆರ್‌ಎಐ ಎತ್ತಿದೆ. ನಿಜ ಹೇಳಬೇಕೆಂದರೆ, ಈ ಕ್ರಮದ ಮೂಲಕ ಔಷಧಿಯ ಆಯ್ಕೆ ಡಾಕ್ಟರುಗಳ ಕೈತಪ್ಪಿ ಔಷಧಿ ಮಾರುವ ಕೆಮಿಸ್ಟ್‌ಗಳ ಕೈಸೇರುತ್ತದೆ, ಅವರು ಯಾವ ಕಂಪನಿಗಳು ತಮಗೆ ಎಷ್ಟು 'ಉತ್ತೇಜನ' ನೀಡುತ್ತವೆ ಎಂಬ ಆಧಾರದ ಮೇಲೆಯೇ ಅದನ್ನು ನಿರ್ಧರಿಸುತ್ತವೆ, ರೋಗಿಗಳ ಅಗತ್ಯಗಳಿಗೆ ಅನುಗುಣವಾಗಿ ಅಲ್ಲ. ಆದ್ದರಿಂದ ಈ ಅಚ್ಛೇದಿನ್ ಕ್ರಮವೂ ಕೂಡ ವಾಸ್ತವವಾಗಿ ಜನಸಾಮಾನ್ಯರ ಪರವಾಗಿ ಇಲ್ಲ ಎಂಬ ಎಫ್‌ಎಂಆರ್‌ಎಐ ಅಭಿಪ್ರಾಯವನ್ನು ತಳ್ಳಿ ಹಾಕುವಂತಿಲ್ಲ.

ನಿಜವಾಗಿಯೂ ಸರಕಾರಕ್ಕೆ ಜನಸಾಮಾನ್ಯರ ಮೇಲಿನ ಔಷಧಿಗಳ ಬೆಲೆಗಳ ಹೊರೆಯನ್ನು ಇಳಿಸಬೇಕೆಂದಿದ್ದರೆ ಅದು ಸಾರ್ವಜನಿಕ ವಲಯದ ಔಷಧಿ ಕಂಪನಿಗಳಾದ ಐಡಿಪಿಎಲ್, ಹೆಚ್‌ಎಎಲ್, ಬಿಸಿಪಿಎಲ್ ಮುಂತಾದವುಗಳು 80ರ ಮತ್ತು 90ರ ದಶಕದಲ್ಲಿ ಬಹಳ ದಕ್ಷತೆಯಿಂದ ಮಾಡುತ್ತಿದ್ದಂತೆ ಜೆನೆರಿಕ್ ಔಷಧಿಗಳನ್ನು ತಯಾರಿಸಲು ಅನುಕೂಲ ಮಾಡಿಕೊಡಬೇಕು. ಇದು ಅದರ 'ಮೇಕ್ ಇನ್ ಇಂಡಿಯ'ಕ್ಕೆ ಅನುಗುಣವಾಗಿಯೂ ಇರುತ್ತದೆ. ಆದರೆ ಈ ಸರಕಾರ ಅದಕ್ಕೆ ವ್ಯತಿರಿಕ್ತವಾಗಿ ಅವನ್ನು ಮುಚ್ಚುತ್ತಿದೆ, ಅವನ್ನು ಸಂಪೂರ್ಣ ನಾಶ ಮಾಡುವ ಕ್ರಮಗಳನ್ನೇ ಅನುಸರಿಸುತ್ತಿದೆ.

ಆದ್ದರಿಂದ ಸರಕಾರದ ಆಶಯ ನಿಜವಾಗಿಯೂ ಪ್ರಾಮಾಣಿಕವಾಗಿದ್ದರೆ, ಡಾಕ್ಟರುಗಳಿಗೆ ಯಾವ ಔಷಧಿಗಳನ್ನು ಸೂಚಿಸಬೇಕು ಎಂದು ಕಡ್ಡಾಯ ಮಾಡುವ ಕಾರ್ಯಸಾಧ್ಯವಲ್ಲದ ಕ್ರಮದ ಬದಲು ಎಫ್‌ಎಂಆರ್‌ಎಐ ಈ ಕೆಳಗಿನ ಸರಳ ಪರ್ಯಾಯಗಳನ್ನು ಸೂಚಿಸಿದೆ.

* ಎಲ್ಲ ಔಷಧಿಗಳ, ವೈದ್ಯಕೀಯ ಉಪಕರಣಗಳ ಬೆಲೆಗಳನ್ನು ಉತ್ಪಾದನಾ ವೆಚ್ಚದ ಆಧಾರದಲ್ಲಿ ನಿಯಂತ್ರಿಸಬೇಕು.
* ಸಾರ್ವಜನಿಕ ವಲಯದ ಔಷಧಿ ಕಂಪನಿಗಳನ್ನು ಪುನರುಜ್ಜೀವನಗೊಳಿಸಬೇಕು.
* ಭಾರತೀಯ ಪೇಟೆಂಟ್ ಕಾಯ್ದೆ, 2006ರಲ್ಲಿ ಯಾವುದೇ ಬದಲಾವಣೆ ಮಾಡಬಾರದು, ಕಡ್ಡಾಯ ಲೈಸೆನ್ಸಿಂಗ್ ವ್ಯವಸ್ಥೆಯನ್ನು ರಕ್ಷಿಸಬೇಕು.
* ಅಗತ್ಯ ಆಧಾರಿತವಾಗಿ ಔಷಧಿಗಳ ಉತ್ಪಾದನೆ ಮತ್ತು ಪೂರೈಕೆ
* ಔಷಧಿಗಳ ಮೇಲೆ ತೆರಿಗೆ, ಸುಂಕ, ವ್ಯಾಟ್(ಈಗ ಜಿಎಸ್‌ಟಿ) ಹಾಕಬಾರದು.
* ತಪ್ಪು ಮಾಡುವ ಮತ್ತು ಅನೈತಿಕ ವ್ಯಾಪಾರ ಮತ್ತು ಮಾರುಕಟ್ಟೆ ಆಚರಣೆಗಳಲ್ಲಿ ತೊಡಗಿರುವ ಕಂಪನಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಆದರೆ ಇವೆಲ್ಲ ಈ ಅಚ್ಛೇದಿನಗಳಲ್ಲಿ ಸರಳ ಕ್ರಮಗಳಾಗಿ ಉಳಿದಿಲ್ಲ, ಏಕೆಂದರೆ ಇವು ನವ-ಉದಾರವಾದಕ್ಕೆ ಸವಾಲು ಹಾಕುವ ಕ್ರಮಗಳು. ಇದಕ್ಕೆ ಬೇಕಾದ 56 ಅಂಗುಲ ಎದೆಗಾರಿಕೆ ಈ ಅಚ್ಛೇದಿನಗಳಲ್ಲಿ ಉಳಿದಿದೆಯೇ? ಅಥವ ಅಂತಹ ಪ್ರಾಮಾಣಿಕ ಆಶಯವಾದರೂ ಇದೆಯೇ?

ವಾಸ್ತವವಾಗಿ ಇದೂ ಜನಸಾಮಾನ್ಯರ ಹಿತಗಳ ಹೆಸರಲ್ಲಿ ಕಾರ್ಪೊರೇಟ್ ಹಿತಸಾಧಿಸುವ ಮತ್ತೊಂದು ಕ್ರಮ ಎಂಬ ಸಂದೇಹವೇ ಹೆಚ್ಚು.

ಸೆಲ್ಫಿಗಳನ್ನು ಸ್ವಯಂಪ್ರಶಂಸೆಗೆ ಬಳಸಬೇಡಿ, ಸಾರ್ವಜನಿಕ ಕಲ್ಯಾಣಕ್ಕೆ ಬಳಸಿ ಎಂದು ಪ್ರಧಾನ ಮಂತ್ರಿಗಳು ಸರಕಾರೀ ಅಧಿಕಾರಿಗಳಿಗೆ ಉಪದೇಶ ನೀಡಿದರು–ಸುದ್ದಿ



ವ್ಯಂಗ್ಯಚಿತ್ರ: ಮಂಜುಲ್

ಅಚ್ಛೇ ದಿನ್‌ಗಳ ಜಂಗಲ್‌ರಾಜ್

"ಕಾಶ್ಮೀರದಲ್ಲಿ ಪೋಲೀಸರ ಮೇಲೆ ಕಲ್ಲೆಸೆದರೆ ನಮಗೆ ಸಿಟ್ಟು ಬರುತ್ತದೆ, ಅದು ಸರಿಯಾದದ್ದೇ. ಆದರೆ ಪೋಲೀಸರ ಮೇಲೆ ಹಲ್ಲೆ ಮಾಡುವ ಈ ಬಿಜೆಪಿ ಎಂಪಿಗಳು ಎಂಎಲ್‌ಎಗಳು ಹೇಗೆ ಭಿನ್ನ?"

–ಇದು ಎಪ್ರಿಲ್ 23ರ ಭಾನುವಾರ ಭಜರಂಗ ದಳ ಮತ್ತು ವಿಹೆಚ್‌ಪಿ ಮಂದಿ ಉತ್ತರಪ್ರದೇಶದ ಆಗ್ರಾದ ಸದರ್ ಬಝಾರ್ ಮತ್ತು ಸಿಕ್ರಿ ಪೋಲೀಸ್ ಠಾಣೆ ನುಗ್ಗಿ ಪೋಲೀಸರ ಮೇಲೆ ಹಲ್ಲೆ ಮಾಡಿದರು ಎಂಬ ಸುದ್ದಿಗೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯಚೂರಿಯವರು ಹೇಳಿರುವ ಮಾತು.

ಈ ಹಲ್ಲೆಕೋರರಿಗೆ ನೇತೃತ್ವ ನೀಡಿದ್ದವರು ಫತೇಪುರ್ ಸಿಕ್ರಿಯ ಬಿಜೆಪಿಯ ಎಂಎಲ್‌ಎ. ಇದಕ್ಕೆ ಮೊದಲು ಆ ಪಕ್ಷದ ಮಂದಿ ದಾಂಧಲೆ ಎಬ್ಬಿಸಿದ್ದಕ್ಕೆ ಅವರನ್ನು ಹಿಡಿದು ಪೋಲೀಸರು ಎಫ್‌ಐಆರ್ ಹಾಕಿದ್ದರು. ಅವರನ್ನು ಬಿಡಿಸಿಕೊಳ್ಳಲು ಈ ದಾಳಿಯಂತೆ.

ಇದು ಉತ್ತರ ಪ್ರದೇಶದಲ್ಲಿ ಹೊಸ ಸರಕಾರ ಅಧಿಕಾರ ವಹಿಸಿದಂದಿನಿಂದ ಕಂಡು ಬರುತ್ತಿರುವ ಚಿತ್ರ.

ತಮಾಷೆಯೆಂದರೆ, ಈ ದಾಳಿ ನಡೆದ ಹಿಂದಿನ ದಿನವಷ್ಟೇ ಅಧಿಕಾರ ವಹಿಸಿಕೊಂಡ ರಾಜ್ಯದ ಹೊಸ ಡಿಜಿಪಿ ಕಾನೂನು ಮುರಿಯುವವರ ಮತ್ತು ಕಾವಲುಕೋರ ಪಡೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದರು.

* ಅದಕ್ಕೆ ಎರಡು ದಿನಗಳ ಹಿಂದೆ, ಸಹರಾಣಪುರದಲ್ಲಿ ಒಂದು ಕೋಮು ಗಲಭೆ ಭುಗಿಲೆದ್ದಿತು. ಅಲ್ಲಿನ ಬಿಜೆಪಿ ಎಂಪಿ ಒಂದು ಗುಂಪು ಕಟ್ಟಿಕೊಂಡು ಹೋಗಿ ಅಲ್ಲಿಯ ಎಸ್‌ಎಸ್‌ಪಿರ ಮನೆಯ ಮುಂದೆ ದಾಂಧಲೆ ಎಬ್ಬಿಸಿದ್ದರು. ಈ ಬಗ್ಗೆ ಹಾಕಿದ ಎಫ್‌ಐಆರ್‌ನಲ್ಲಿ ಅ ಬಿಜೆಪಿ ಎಂಪಿಯ ಹೆಸರೂ ಇದೆ.

* ಅದಕ್ಕೆ ಮೊದಲು ಕಸಾಯಿಖಾನೆ ನಿಷೇಧ, ರೋಮಿಯೋ ನಿಷೇಧ ಪಡೆಯ ಹೆಸರಲ್ಲಿ ಬಹಳಷ್ಟು ದಾಂಧಲೆಗಳನ್ನು ನಡೆಸಲಾಯಿತು.

ನಿಜ, ಉತ್ತರಪ್ರದೇಶದ ಮುಖ್ಯಮಂತ್ರಿಗಳು ಇದು ಕೇವಲ ತನ್ನ ರಾಜ್ಯದ ಸ್ಥಿತಿಯಲ್ಲ ಎನ್ನಬಹುದು. ಏಕೆಂದರೆ ರಾಜಸ್ತಾನ, ಮಧ್ಯಪ್ರದೇಶ, ಹರ್ಯಾಣ, ದಿಲ್ಲಿ, ಜಮ್ಮು-ಕಾಶ್ಮೀರದಿಂದಲೂ ಇಂತಹ ಘಟನೆಗಳು ವರದಿಯಾಗುತ್ತಿವೆ. ಅವೆಲ್ಲವೂ ಬಿಜೆಪಿ ಆಳ್ವಿಕೆಯ ಪ್ರದೇಶಗಳಾಗಿರುವುದು ಕೇವಲ ಕಾಕತಾಳೀಯವಿರಬಹುದೇನೋ?

* ಎಪ್ರಿಲ್ 21ರಂದು ಮಧ್ಯಪ್ರದೇಶದ ಗುನಾದಲ್ಲಿ ಹೆಲ್ಮೆಟ್ ಧರಿಸದೆ ವಾಹನ ಚಲಾಯಿಸುತ್ತಿದ್ದ ಯುವತಿಯರಿಗೆ ದಂಡ ವಿಧಿಸಿದ್ದಕ್ಕೆ ಬಿಜೆಪಿ ಮುಖಂಡರ ಮಂದಿ ಪೋಲೀಸರನ್ನು ಹಿಗ್ಗಾಮುಗ್ಗಾ ಥಳಿಸಿದರು.

* ಎಪ್ರಿಲ್ 22ರಂದು ದಕ್ಷಿಣ ದಿಲ್ಲಿಯಲ್ಲಿ ಜಾನುವಾರುಗಳನ್ನು ಸಾಗಿಸುತ್ತಿದ್ದ ಮೂವರನ್ನು ಮನಬಂದಂತೆ ಥಳಿಸಲಾಯಿತು. ಥಳಿಸಿದವರು 'ಗೋರಕ್ಷಕ'ರಲ್ಲ, ಪ್ರಾಣಿದಯಾಸಂಘದವರು ಎಂದು ಪೋಲಿಸರು ಹೇಳುತ್ತಿದ್ದಾರೆ. ಈ ಸಂಘದ ಪೋಷಕರಾದ ಬಿಜೆಪಿ ಮಂತ್ರಿಗಳು ಈ ಸಂಘದವರಾರೂ ಹಲ್ಲೆ ಮಾಡಿಲ್ಲ ಎಂದಿರುವುದಾಗಿ ವರದಿಯಾಗಿದೆ.

* ರಾಜಸ್ತಾನದಲ್ಲಿ ಕಾಶ್ಮೀರದ ವಿದ್ಯಾರ್ಥಿಗಳ ಮೇಲೆ ವಿನಾಕಾರಣ ಹಲ್ಲೆ ಮಾಡಿದ ನಂತರ ಕೇಂದ್ರ ಗೃಹ ಮಂತ್ರಿಗಳು ಎಲ್ಲ ರಾಜ್ಯ ಸರಕಾರಗಳಿಗೆ ಕಾಶ್ಮೀರಿ ವಿದ್ಯಾರ್ಥಿಗಳಿಗೆ ರಕ್ಷಣೆ ಕೊಡಬೇಕು ಎಂದು ತಾಕೀತು ಮಾಡುತ್ತಿದ್ದಾಗಲೇ ಆದೇ ರಾಜ್ಯದ ಪಿಲಾನಿಯ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆ 'ಬಿಟ್ಸ್'(ಬಿರ್ಲಾ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್)ನಲ್ಲಿನ ಕಾಶ್ಮೀರಿ ಸಂಶೋಧನಾ ವಿದ್ಯಾರ್ಥಿಗೆ ಕಿರುಕುಳ ತಾಳಲಾರದೆ ತನ್ನೂರಿಗೆ ಹಿಂದಿರುಗಿದ ಸುದ್ದಿ ಬಂದಿದೆ.

* ಎಪ್ರಿಲ್ 20ರ ರಾತ್ರಿ ಜಮ್ಮು ಪ್ರದೇಶದ ರಿಯಾಸಿಯಲ್ಲಿ ತಮ್ಮ ಹಸು-ಕರುಗಳು, ಕುರಿಮಂದೆಯೊಂದಿಗೆ ಸಾಗುತ್ತಿದ್ದ ಒಂದು ಅಲೆಮಾರಿ ಕುಟುಂಬದ ಮೇಲೆ 'ಗೋರಕ್ಷಕ'ರ ಭೀಷಣ ಹಲ್ಲೆಯ ವರದಿ ಈ ಮೊದಲು ಬಂದಿತ್ತು.

* ಈ ಎಲ್ಲದಕ್ಕೆ ಮುಕುಟವಿಟ್ಟಂತೆ ಪೆಹ್ಲೂ ಖಾನ್ ಎಂಬ ರೈತನನ್ನು ಹೊಡೆದು ಸಾಯಿಸಿದ ರಾಜಸ್ತಾನದ ಅಲ್ವರ್‌ನ ಬಿಜೆಪಿ ಶಾಸಕ ಈ ಬಗ್ಗೆ ತನಗೇನೂ ಬೇಸರವಿಲ್ಲ ಎಂದಿದ್ದಾರಂತೆ. ಹಾಲು ಉತ್ಪಾದಕ ರೈತನಾಗಿದ್ದ ಪೆಹ್ಲೂ ಖಾನ್ ಪಶುಪಾಲನೆಗೆ ಒಯ್ಯುತ್ತಿದ್ದ ಎಂದು ಸ್ಪಷ್ಟವಾಗಿದ್ದರೂ ಈ ಶಾಸಕ ಮಹಾಶಯ ಗೋಹತ್ಯೆ ಮಾಡುವ ಪಾಪಿಗಳಿಗೆ ಇದೇ ಗತಿ ಎಂದಿರುವುದಾಗಿಯೂ ವರದಿಯಾಗಿದೆ. ಸುಳ್ಳುಗಳನ್ನು ಸಆವಿರ ಬಾರಿ ಹೇಳಿದರೆ ಅದು ಸತ್ಯವಾಗಿ ಬಿಡುತ್ತದೆ ಎಂಬ ಅವರ ಎಂದಿನ ಸೂತ್ರದ ಕಟ್ಟುನಿಟ್ಟಾದ ಪಾಲನೆ!

ತಮಿಳುನಾಡಿನಲ್ಲಿ ಆತ್ಮಹತ್ಯೆಗಿಳಿಯುತ್ತಿರುವ ರೈತರ ಸಂಕಟಗಳನ್ನು ನಿವಾರಿಸಲು ಆಗ್ರಹಿಸಿ ದಿಲ್ಲಿಯ ಜಂತರ್‌ಮಂತರ್‌ನಲ್ಲಿ 40ದಿನಗಳ ಕಾಲ ಅಲ್ಲಿನ ರೈತರ ಪ್ರತಿನಿಧಿಗಳು ಸತ್ಯಾಗ್ರಹ –ಸುದ್ದಿ



ವ್ಯಂಗ್ಯಚಿತ್ರ: ಶೇಖರ್ ಗುರೇರ

ಶರಣ್ ಪಂಪ್ ವೆಲ್ ಬಿಸಿನೆಸ್ ಸೀಕ್ರೇಟ್
ಭಯವನ್ನೇ ಬಂಡವಾಳ ಮಾಡಿಕೊಂಡ ಭಜರಂಗದಳ

ಇತ್ತೀಚೆಗೆ ಬಿಡುಗಡೆಗೊಂಡ ಧೀರೇಂದ್ರ. ಕೆ. ಝಾ ಅವರ Shadow Armies: Fringe Organizations and Foot Soldiers of Hindutva **ಎಂಬ ಕೃತಿಯಲ್ಲಿ ಶರಣ್ ಅವರ ಉದ್ಯಮ ಹಾಗೂ ಸಂಘಟನೆ ಕುರಿತು ಒಂದು ಅಧ್ಯಾಯವನ್ನು ಮೀಸಲಿಡಲಾಗಿದೆ. ಇದರ ಆಯ್ದ ಭಾಗವನ್ನು 'ಸ್ಕ್ರಾಲ್ ಡಾಟ್ ಇನ್' ಸುದ್ದಿ ತಾಣ ಪ್ರಕಟಿಸುತ್ತಿದ್ದಂತೆ ಚರ್ಚೆಯೊಂದು ಹುಟ್ಟಿಕೊಂಡಿದೆ. ಕರ್ನಾಟಕದ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಶರಣ್ ಪಂಪ್‌ವೆಲ್ ಹಾಗೂ ಅವರ ಭಜರಂಗ ಸಂಘಟನೆಯ ಕಾರ್ಯಚರಣೆಗಳ ಪರಿಚಯ ಇದ್ದರೂ, ಧೀರೇಂದ್ರ ಅವರ ಕೃತಿಯಲ್ಲಿ ಎಳೆಎಳೆಯಾಗಿ ಬಿಚ್ಚಿಡಲಾಗಿದೆ.**

ಈ ಹಿನ್ನೆಲೆಯಲ್ಲಿ 'ಸಮಾಚಾರ' ಶರಣ್ ಅವರನ್ನು ಸಂಪರ್ಕಿಸಿದಾಗ, "ನಾನು ಅವರಿಗೆ ಇದ್ದ ವಿಚಾರ ಹೇಳಿದ್ದೆ. ಒಂದು ಕಡೆ ಕೆಲಸ ಮತ್ತೊಂದು ಕಡೆ ಸಂಘಟನೆ. ಕೆಲಸ ಮಾಡದೇ ಸಂಘಟನೆ ಕಟ್ಟಲು ಸಾಧ್ಯವಿಲ್ಲ ಅಲ್ವಾ? ಅದನ್ನೇ ನಾನೂ ಮಾಡುತ್ತಿದ್ದೇನೆ. ಇದನ್ನು ಲೇಖಕರಿಗೆ ವಿವರಿಸಿದ್ದೆ. ಆದರೆ ಅವರು ತಪ್ಪು ಅಭಿಪ್ರಾಯ ಬರುವಂತೆ ಬರೆದಿದ್ದಾರೆ ಎಂದು ಗೊತ್ತಾಯಿತು," ಎಂದು ಸಮಜಾಯಿಷಿ ನೀಡಿದರು.

ಇಷ್ಟಕ್ಕೂ ಶರಣ್ ಮತ್ತು ಭಜರಂಗದಳದ ಕುರಿತು ಕೃತಿಯಲ್ಲಿ ಇರುವುದೇನು? ಅದರ ಭಾವಾನುವಾದ ಇಲ್ಲಿದೆ?

(ಕೃಪೆ: ಸಮಾಚಾರ.ಕಾಂ)



ಅದೊಂದು ಮಂಗಳೂರಿನ ಬಲಪಂಥೀಯ ಸಂಘಟನೆ. ಚರ್ಚ್ ದಾಳಿ, ಹಿಂದೂ–ಮುಸ್ಲಿಂ ಜೋಡಿಗಳ ಮೇಲೆ 'ನೈತಿಕ ಪೊಲೀಸ್ ಗಿರಿ' ಹೀಗೆ ಹೊಡಿಬಡಿಯ ಇತಿಹಾಸ ಅದರದ್ದು. ಸದಾ ಮುಸ್ಲಿಂ ಸಮುದಾಯದ ಮೇಲೆ ಕೆರಳಿ ಕೆಂಡಕಾರುವ ಈ ಸಂಘಟನೆಗೊಬ್ಬ ನಾಯಕ; ಆತನದ್ದು ಭದ್ರತಾ ಸೇವೆ ನೀಡುವ 'ಸೆಕ್ಯೂರಿಟಿ ಏಜೆನ್ಸಿ'ಯ ಉದ್ಯಮ. ಒಂದು ಬೆದರಿಸುವ ಚಟುವಟಿಕೆ, ಇನ್ನೊಂದು ಭದ್ರತೆ ನೀಡುವ ವ್ಯವಹಾರ; ಹೀಗಾದಾಗ ಸಂಘಟನೆ ಮತ್ತು ವ್ಯವಹಾರದ ನಡುವಿನ ಸಮೀಕರಣ ಏನಾಗಿರಬಹುದು ಎನ್ನುವುದೇ ಈ ಕಥೆ.

ಅಂದ ಹಾಗೆ ಈ ಸಂಘಟನೆಯ ಹೆಸರು ಭಜರಂಗ ದಳ; ವಿಶ್ವ ಹಿಂದೂ ಪರಿಷತ್‌ನ ಕೂಸು. ಈ ಸಂಘಟನೆಯ ಮಂಗಳೂರು ಭಾಗದ ಅನಭಿಷಿಕ್ತ ದೊರೆಯೇ ಶರಣ್ ಪಂಪ್‌ವೆಲ್; ದಕ್ಷಿಣ ಕರ್ನಾಟಕದ ಪ್ರಾಂತ ಭಜರಂಗ ದಳದ ಸಂಚಾಲಕ. ಆತನದ್ದೊಂದು ಭದ್ರತಾ ಸೇವೆ ನೀಡುವ ಸಂಸ್ಥೆ; ಹೆಸರು 'ಈಶ್ವರಿ ಮ್ಯಾನ್ ಪವರ್ ಸಲ್ಯೂಷನ್ಸ್'. ಸಂಘಟನೆಯ ವಿಚಾರಕ್ಕೆ ಬಂದರೆ ಮುಸ್ಲಿಂ ಸಮುದಾಯದ ಮೇಲೆ ಸದಾ ಕೆಂಡ ಕಾರುವ ಈತ, ಭದ್ರತಾ ಸೇವೆ ನೀಡುವುದು ಮಾತ್ರ ಅದೇ ಸಮುದಾಯದ ಉದ್ಯಮಿಗಳಿಗೆ. ಹಾಗಂಥ ಇದರಲ್ಲಿ ಅಚ್ಚರಿ ಪಡುವಂಥದ್ದು ಏನೂ ಇಲ್ಲ ಎನ್ನುತ್ತಿವೆ ಆತ ಬೆಳೆಸಿಕೊಂಡ ಬಂದ ಉದ್ಯಮದ ತಂತ್ರಗಾರಿಕೆ.

ಈಶ್ವರಿ ಮ್ಯಾನ್ ಪವರ್ ಸಲ್ಯೂಷನ್ಸ್:

"ತಾನು ಎಲ್ಲಾ ಕಾನೂನುಗಳನ್ನು ಪಾಲನೆ ಮಾಡಿಯೇ ಈ ಭದ್ರತಾ ಸೇವೆ ನೀಡುವ ಉದ್ಯಮ ಕಟ್ಟಿದ್ದೇನೆ ಎನ್ನುತ್ತಾರೆ," 40ರ ಹರೆಯದ ಶರಣ್ ಪಂಪ್‌ವೆಲ್. "ನಾವು ಅವರಿಗೆ ಭದ್ರತೆ ನೀಡುತ್ತೇವೆ ಎಂಬ ಕಾರಣಕ್ಕೆ ಉದ್ಯಮಿಗಳು ನಮ್ಮ ಜತೆ ಕೈಜೋಡಿಸುತ್ತಾರೆ ಎನ್ನುವುದು," ಶರಣ್ ಅಭಿಮತ. ಆದರೆ ಅಂತರಾಳದ ಸತ್ಯ ಹಾಗಿಲ್ಲ. ಇಲ್ಲಿನ ಸ್ಥಳೀಯ ವರ್ತಕರಲ್ಲಿ ಭಜರಂಗ ದಳದ ಚಟುವಟಿಕೆಗಳ ಬಗ್ಗೆ ಸಣ್ಣ ಭಯವಿದೆ. ಅದನ್ನೇ ಸದುಪಯೋಗಪಡಿಸಿಕೊಂಡು ಇದೇ ಭಜರಂಗ ದಳದ ಕಾರ್ಯಕರ್ತರೇ ತುಂಬಿಕೊಂಡಿರುವ 'ಈಶ್ವರಿ ಮ್ಯಾನ್ ಪವರ್' ಮೂಲಕ ಭದ್ರತಾ ಸೇವೆ ನೀಡುತ್ತಾರೆ ಶರಣ್ ಪಂಪ್ವೆಲ್.

ಭದ್ರತಾ ಸೇವೆಗೆ ಬೇಕಾದ 'ಬೇಡಿಕೆ'ಯನ್ನು ಭಜರಂಗ ದಳ ಸಂಘಟನೆ ಮೂಲಕ ಸೃಷ್ಟಿಸಲಾಗುತ್ತದೆ; ಅದಕ್ಕಾಗಿ ಬೆದರಿಕೆ, ದಾಳಿಯಂಥ ತಂತ್ರಗಳನ್ನು ಬಳಸಲಾಗುತ್ತದೆ. ಭದ್ರತಾ ಸೇವೆ ನೀಡುವ ಮೂಲಕ ಭಿತ್ತಿದ ಭಯವನ್ನು ಬೆಳೆಯಾಗಿ ಪರಿವರ್ತನೆ ಮಾಡಲಾಗುತ್ತದೆ. ಹೀಗೆ ಯಶಸ್ವಿ ಉದ್ಯಮಿಯಾಗಿ ರೂಪಿಗೊಂಡಿದ್ದಾರೆ ದಕ್ಷಿಣ ಕನ್ನಡ ಭಜರಂಗದಳದ ಫೈರ್ ಬ್ರಾಂಡ್ ಲೀಡರ್ ಶರಣ್ ಪಂಪ್‌ವೆಲ್.

ಡಬಲ್ ರೋಲ್:

ಇಲ್ಲಿನ ಮಾಲ್, ಅಂಗಡಿಗಳು, ಅಪಾರ್ಟ್ ಮೆಂಟ್‌ಗಳ ಮಾಲೀಕರಲ್ಲಿ ಅಭದ್ರತೆಯನ್ನು ಭಜರಂಗದಳದ ಮೂಲಕ ಸೃಷ್ಟಿಸಲಾಗುತ್ತದೆ. ನಂತರ ಅಲ್ಲಿನ ಭದ್ರತೆ ತಮ್ಮ ಭದ್ರತಾ ಸಿಬ್ಬಂದಿಯ ಸೇವೆ ನೀಡುವ ಆಫರ್ನ್ನು ಶರಣ್ ಮುಂದಿಡುತ್ತಾರೆ. ಹೀಗೆ ಮಾಲೀಕರ ಭದ್ರತೆಯನ್ನು ಕಿತ್ತು ಹಾಕಿ ತಮ್ಮ ವ್ಯವಹಾರವನ್ನು ಕುದುರಿಸಲಾಗುತ್ತದೆ. ಆದರೆ ವಿಚಿತ್ರ ಎಂದರೆ ನಿನ್ನೆ ಅಭದ್ರತೆ ಸೃಷ್ಟಿಸಲು ಬಳಕೆಯಾದವರೇ, ನಾಳೆ ಯೂನಿಫಾರಂ ತೊಟ್ಟು ಭದ್ರತೆ ನೀಡಲು ಬರುತ್ತಾರೆ; ಅವರೊದ್ದು ಒಂಥರಾ ಡಬಲ್ ಆ್ಯಯಕ್ಟಿಂಗ್.

"ಸೂಪರ್ ವೈಸರ್ ಮತ್ತು ಕಂಪೆನಿಯಲ್ಲಿ ಕೆಲಸ ಮಾಡುವ ಹೆಚ್ಚಿನ ಭದ್ರತಾ ಸಿಬ್ಬಂದಿಗಳು ಭಜರಂಗದಳದ ಕಾರ್ಯಕರ್ತರು," ಎನ್ನುತ್ತಾರೆ ಶರಣ್ ಪಂಪ್‌ವೆಲ್. "ನಗರದ ಭಜರಂಗದಳ ನಾಯಕನಾಗಿ ಕಾರ್ಯಕರ್ತರ ದಿನದ ಅಗತ್ಯಗಳನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲಿದೆ. ನನ್ನ ಬಳಿ ಕೆಲಸ ಕೇಳಿ ಬಂದ ಯಾರನ್ನೂ ನಾನು ಹಿಂದಕ್ಕೆ ಕಳುಹಿಸುವುದಿಲ್ಲ. ನಗರದಲ್ಲಿ ಭದ್ರತಾ ಸಿಬ್ಬಂದಿಗಳಿಗೆ ಸಾಕಷ್ಟು ಬೇಡಿಕೆ ಇದೆ. ಕೆಲವು ಮುಸ್ಲಿಂ ಭದ್ರತಾ ಸಿಬ್ಬಂದಿಗಳೂ ನಮ್ಮಲ್ಲಿದ್ದಾರೆ," ಎನ್ನುತ್ತಾರೆ ಅವರು.

ಈ ಶರಣ್ ಪಂಪ್‌ವೆಲ್ ಭಜರಂಗ ದಳಕ್ಕೆ ಕಾಲಿಟ್ಟು ಬಹುಬೇಗ ಪ್ರವರ್ಧಮಾನಕ್ಕೆ ಬಂದವರಲ್ಲಿ ಪ್ರಮುಖರು. 2005ರಲ್ಲಿ ಮಂಗಳೂರು ವಿಭಾಗದ ಭಜರಂಗ ದಳ ಸೇರಿದ ಅವರು ಇದೇ ವಿಭಾಗದ ಸಂಚಾಲಕರಾಗಿ 2011ರಲ್ಲಿ ಆಯ್ಕೆಯಾಗುತ್ತಾರೆ. ಮೂರೇ ವರ್ಷಗಳಲ್ಲಿ ಅಂದರೆ 2014ರಲ್ಲಿ ಭಜರಂಗ ದಳದ ದಕ್ಷಿಣ ಕರ್ನಾಟಕದ ಸಂಚಾಲಕ ಹುದ್ದೆ ಶರಣ್ ಪಾಲಿಗೆ ಒಲಿದು ಬರುತ್ತದೆ. ಇದರ ಮಧ್ಯೆ ಹಲವು ಚರ್ಚ್ ದಾಳಿಗಳು, ನೈತಿಕ ಪೊಲೀಸ್ ಗಿರಿ ಚಟುವಟಿಕೆಗಳು ನಡೆದಿವೆ ಎನ್ನಿ. ಕರ್ನಾಟಕದ ಭಜರಂಗದಳದಲ್ಲಿ ಉತ್ತರ ಮತ್ತು ದಕ್ಷಿಣ ಪ್ರಾಂತಗಳಿದ್ದು ಅದರಲ್ಲಿ ದಕ್ಷಿಣ ಪ್ರಾಂತ ಪ್ರಮುಖವಾದದ್ದು. ಅದರಲ್ಲೂ ಮಂಗಳೂರಿನಲ್ಲಿ ಭಜರಂಗ ದಳದ ಬೇರುಗಳು ಗಟ್ಟಿ ಮುಟ್ಟಾಗಿದೆ. ಇದರ ಹಿಂದೆ ಶರಣ್ ಪಂಪ್ ವೆಲ್ ಶ್ರಮ, ವಿಶಿಷ್ಟ 'ಬಿಸಿನೆಸ್' ಕೆಲಸ ಮಾಡಿದೆ ಎಂದರೆ ತಪ್ಪಾಗಲಾರದು.

ವಿಚಿತ್ರ ಬಿಸಿನೆಸ್ ಮಾಡೆಲ್!:

ಭಜರಂಗ ದಳ ಆರ್ಥಿಕವಾಗಿ ಸದೃಢವಾಗಿ ಬಳೆಯಲು ಈ ಚಟುವಟಿಕೆಗಳು ಅನಿವಾರ್ಯ ಎಂದು ಸಂಸ್ಥೆಯೂ ನಂಬಿಕೊಂಡಿದೆ. ಹೀಗಾಗಿ ಶರಣ್ ನಾಯಕತ್ವದಲ್ಲಿ ಸೆಕ್ಯುರಿಟಿ ಸರ್ವಿಸ್ ಕೂಡಾ ಮುಂದುವರಿದಿದೆ. "ನನ್ನನ್ನು ಮಂಗಳೂರು ವಲಯದ ಸಂಚಾಲಕನನ್ನಾಗಿ ನೇಮಿಸಿದಂದಿನಿಂದ ಈ ವ್ಯವಹಾರ ಆರಂಭಿಸಿದ್ದೇನೆ. ಸದ್ಯ ನನಗೆ ಸಿಟಿ ಸೆಂಟರ್, ಫೋರಂ ಫಿಝಾ ಹಾಗೂ ಬಿಗ್ ಬಜಾರ್ ಮಾಲ್ ಗಳ ಕಾಂಟ್ರಾಕ್ಟ್ ಗಳಿವೆ. ಇದಲ್ಲದೆ ನಗರದ ಹಲವು ಅಂಗಡಿ, ಅಪಾರ್ಟ್ಮೆಂಟ್‌ಗಳ ಕಾಂಟ್ರಾಕ್ಟ್ ಕೂಡಾ ಇದೆ," ಎನ್ನುತ್ತಾರೆ ಅವರು.

ಸಿಟಿ ಸೆಂಟರ್ ಮತ್ತು ಫೋರಂ ಫಿಝಾ ದೇಶದ ಟಾಪ್ 20 ಮಾಲ್ ಗಳಲ್ಲಿ ಸ್ಥಾನ ಪಡೆದಿವೆಎಂಬುದು ಗಮನಾರ್ಹ. ಇನ್ನು ಬಿಗ್ ಬಜಾರ್ ಮಾಲ್ ಕೂಡಾ ನಗರ ಪ್ರಮುಖ ಮಾಲ್. ಹೀಗೆ ಮಂಗಳೂರಿನ ಬಹು ಮುಖ್ಯ ಭದ್ರತಾ ಸೇವೆಯನ್ನೆಲ್ಲಾ ತನ್ನ ಕಪಿಮುಷ್ಠಿಯಲ್ಲಿಟ್ಟುಕೊಂಡಿದ್ದಾರೆ ಭಜರಂಗ ದಳದ ಸಂಚಾಲಕರು.

ವಿಶೇಷ ಅಂದರೆ, ಸಿಟಿ ಸೆಂಟರ್ ಮತ್ತು ಫೋರಂ ಫಿಜಾ ಮಾಲ್ ನಲ್ಲಿ ಹೆಚ್ಚಿನ ಅಂಗಡಿಗಳು ಮುಸ್ಲಿಮರಿಗೆ ಸೇರಿವೆ. ಭಜರಂಗ ದಳದಿಂದ ಪ್ರತಿ ಬಾರಿ ದಾಳಿಗೆ ಗುರಿಯಾಗುವ ಸಮುದಾಯವೂ ಇದೆ. ಹೀಗಿದ್ದೂ ಇವರೆಲ್ಲಾ ಇದೇ ಶರಣ್ ಪಂಪ್‌ವೆಲ್ ಸಂಸ್ಥೆಯಿಂದ ಭದ್ರತೆ ಪಡೆಯುತ್ತಾರೆ. ಇವೆಲ್ಲದರ ಮಧ್ಯೆ ಒಂದು ಅಂಶವನ್ನು ಗಮನಿಸಲೇಬೇಕು. ಮುಸ್ಲಿಂ ಸಮುದಾಯದವರನ್ನು ಶರಣ್ ಸಂಸ್ಥೆ ಗಿರಾಕಿಗಳಾಗಿ ಪಡೆಯುತ್ತಿದ್ದಂತೆ ನಗರದಲ್ಲಿ ಕೋಮು ಸೌಹಾರ್ದತೆ ಒಂದು ಹಂತಕ್ಕೆ ಉತ್ತಮವಾಗಿದೆ. ಆದರೆ ಇಲ್ಲೂ ಅಪಾಯಗಳಿವೆ ಎಂಬುದನ್ನು ಮರೆಯುವಂತಿಲ್ಲ; ತನ್ನ ಸಿಬ್ಬಂದಿಗಳಿಂದಾಗಿ ಅವರ ಪ್ರತಿ ಮಾಹಿತಿಯೂ ಶರಣ್ ಬೆರಳ ತುದಿಯಲ್ಲಿದೆ.

ಬಿಸಿನೆಸ್ ಸೀಕ್ರೆಟ್:

"ಮುಸ್ಲಿಂ ವರ್ತಕರು, ಮಾಲ್ ಗಳ ಮಾಲಿಕರಿಂದ ನಾವು ಸಾಕಷ್ಟು ವ್ಯವಹಾರ ಪಡೆಯುತ್ತೇವೆ. ಇದಕ್ಕೆ ಪ್ರಾಥಮಿಕ ಕಾರಣ ಅವರು ನಮ್ಮ ಮೇಲೆ ಇಟ್ಟ ನಂಬಿಕೆ," ಎನ್ನುವುದು ಶರಣ್ ವಾದ. ಆದರೆ ಉದ್ಯಮದ ನಿಜವಾದ ಗುಟ್ಟನ್ನು ಅವರು ಬಿಟ್ಟುಕೊಡುವುದೇ ಇಲ್ಲ. ಅದರೆ ಬಗ್ಗೆ ಜಾಣ ಮೌನ ವಹಿಸುತ್ತಾರೆ. ನಿಜವಾದ ಉದ್ಯಮದ ಗುಟ್ಟು ಏನೆಂದರೆ ಮುಸ್ಲಿಂ ಸಮುದಾಯದಲ್ಲಿರುವ ಭಯ.

"ಅವರು (ಭಜರಂಗ ದಳ) ಯಾವ ರೀತಿಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂಬುದು ಗೊತ್ತಿದೆ. ಹಾಗಾಗಿ ಇದು ನಮ್ಮ ಉದ್ಯಮವನ್ನು ಸಲೀಸಾಗಿ ಮುನ್ನಡೆಸಿಕೊಂಡು ಹೋಗಲು ಅವರಿಂದಲೇ ರಕ್ಷಣೆ ಪಡೆಯುವುದು ಅನಿವಾರ್ಯ," ಎನ್ನುತ್ತಾರೆ ಸಿಟಿ ಸೆಂಟರ್ ಮಾಲ್ನ ಮುಸ್ಲಿಂ ವರ್ತಕರೊಬ್ಬರು. ಈ ಮೂಲಕ ಈಶ್ವರಿ ಮ್ಯಾನ್ ಪವರ್ ಕಡೆಯಿಂದ ಭದ್ರತಾ ಸೇವೆ ಪಡೆದುಕೊಳ್ಳುತ್ತಿರುವ ಗುಟ್ಟನ್ನು ಅವರು ರಟ್ಟು ಮಾಡುತ್ತಾರೆ. "ಮಂಗಳೂರಿನಂಥ ನಗರದಲ್ಲಿ ಇಂಥವರಿಂದ ನೀವು ಭದ್ರತೆ ಪಡೆಯದಿದ್ದರೆ ದಾಳಿಯಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಶರಣ್ ಸಂಸ್ಥೆಯಿಂದ ಭದ್ರತಾ ಸೇವೆ ಪಡೆಯುವುದರಿಂದ ಅಂತಿಮವಾಗಿ ನಿಮಗೆ ನಷ್ಟವೇನೂ ಇಲ್ಲ. ನೀವು ಭದ್ರತಾ ಸಿಬ್ಬಂದಿಗಳನ್ನೂ ಪಡೆದುಕೊಳ್ಳುತ್ತಿರಿ. ಮಾತ್ರವಲ್ಲ ಯಾವುದೇ ಹಿಂದುತ್ವ ಸಂಘಟನೆಗಳ ದಾಳಿಯಾಗುವುದಿಲ್ಲ ಎಂಬ ಖಾತರಿಯೂ ಸಿಗುತ್ತದೆ," ಎನ್ನುತ್ತಾರೆ ಆ ವರ್ತಕರು. ಉದ್ಯಮ ನಾಶವಾಗಲು ಒಂದೇ ಒಂದು ದಾಳಿ ಸಾಕು. ಹೀಗಾಗಿ ಇದು ಅನಿವಾರ್ಯ ಎಂಬುದು ಅವರ ಸಮಜಾಯಿಷಿ.

ಸರಕಾರದ ನಿರ್ಲಕ್ಷ್ಯ:

ಹಾಗಂಥ ಮಂಗಳೂರಿನಲ್ಲಿ ಭಜರಂಗ ದಳ ಭದ್ರತಾ ಸೇವೆ ನೀಡುವ ದಂಧೆಯನ್ನು ಹುಟ್ಟು ಹಾಕಲು ಸಾಧ್ಯವಿರಲಿಲ್ಲ. ಆದರೆ ಯಾವಾಗ ನಗರದ ಸಾಮಾನ್ಯ ಜನರಿಗೆ ಮತ್ತು ಉದ್ಯಮಿಗಳಿಗೆ ಪೊಲೀಸರಿಗೆ ದೂರು ನೀಡುವುದು ವ್ಯರ್ಥ, ಈ ರೀತಿ ಸಮಸ್ಯೆ ಸೃಷ್ಟಿಸುವವರಿಗೆ ಸರಕಾರದಿಂದ ಕಡಿವಾಣ ಹಾಕಲು ಸಾಧ್ಯವಿಲ್ಲ ಎಂದು ಅನಿಸಿತೋ ಆಗ ಇಂಥಹ ಭದ್ರತಾ ಮಾದರಿಗಳಿಗೆ ಮೊರೆ ಹೋದರು. ಕಾನೂನು ಮತ್ತು ಸುವ್ಯವಸ್ಥೆ ಹತೋಟಿಯಲ್ಲಿ ಇರುವುದಿಲ್ಲವೋ ಆಗ ಈ ರೀತಿಯ ಎಂದೂ ನಡೆಯದ ಹೊಂದಾಣಿಕೆಗಳು ನಡೆಯುತ್ತವೆ. ಅಂತಿಮವಾಗಿ ಸಮಸ್ಯೆ ಕೊಡುವವರ ಜತೆಯೇ ಒಪ್ಪಂದ ಮಾಡಿಕೊಳ್ಳುತ್ತಾರೆ. ಅದು ಅವರ ಪಾಲಿನ ಅನಿವಾರ್ಯ ಕರ್ಮವೂ ಹೌದು.

ಹೀಗೆ ಸಮಾಜದ ಕೆಳ ವರ್ಗದಿಂದ ಬಂದ ನಿರುದ್ಯೋಗಿ ಯುವಕರನ್ನು ಕಟ್ಟಿಕೊಂಡು ತಳಮಟ್ಟದಿಂದ ಆರ್ಥಿಕ ಆಯಾಮದವರೆಗೆ ಮಂಗಳೂರಿನಲ್ಲಿ ಭಜರಂಗ ದಳದ ಸಾಮ್ರಾಜ್ಯ ವ್ಯಾಪಿಸಿಕೊಂಡಿದೆ. ಸ್ಪರ್ಧಾತ್ಮಕ ಯುಗದಲ್ಲಿ ದಿನ ನಿತ್ಯದ ಅಗತ್ಯಗಳನ್ನು ಹೊಂದಿಸಿಕೊಳ್ಳಲು ಒದ್ದಾಡುವವರಿಗೆ ಇದೇ ಭಜರಂಗದಳ ಭದ್ರತಾ ದಂಧೆಯ ಉದ್ಯೋಗ ಆಸರೆಯಾಗಿ ಕಾಣಿಸುತ್ತದೆ. ಇದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

1984ರಲ್ಲಿ ಅಯೋಧ್ಯೆ ಆಂದೋಲನಕ್ಕೆ ಹೆಚ್ಚೆಚ್ಚು ಹಿಂದೂಗಳನ್ನು ಎಳೆದು ತರಲು ವಿಎಚ್‌ಪಿಯ ಭಾಗವಾಗಿ ಈ ಭಜರಂಗ ದಳ ಹುಟ್ಟಿಕೊಂಡಿತ್ತು. ಸದ್ಯಕ್ಕೆ ಅಯೋಧ್ಯೆಯ ಆಂದೋಲನ ಮುಗಿದಿದೆ. ಇದೀಗ ಭದ್ರತಾ ದಂಧೆ ನಡೆಸುತ್ತಾ ಭಜರಂಗದಳ ಮಂಗಳೂರಿನಲ್ಲಿ ಬದುಕುಳಿದಿದೆ. ತನ್ನ ವಿಶಿಷ್ಟ ಆರ್ಥಿಕ ಮಾದರಿಯಿಂದಾಗಿ ಚರ್ಚ್ ದಾಳಿ, ನೈತಿಕ ಪೊಲೀಸ್ ಗಿರಿಗಳಂಥ ಘಟನೆಗಳ ನಂತರವೂ ಇಲ್ಲಿ ಭಜರಂಗದಳ ಸ್ವತಂತ್ರವಾಗಿ ಉಸಿರಾಡುತ್ತಿದೆ. ಹ್ಯಾಟ್ಸ್ ಆಫ್ ಟು ಕರ್ನಾಟಕ ಪೊಲೀಸ್!

ತಮಿಳುನಾಡು: ತಾಮಿರಬರಣಿ ನದಿ ಉಳಿಸಲು ಹೋರಾಟ

ತಮಿಳುನಾಡಿನ ತಾಮಿರಬರಣಿ ನದಿ ಉಳಿಸುವ ಹೋರಾಟ ಎಪ್ರಿಲ್ 24ರಂದು ಆರಂಭವಾಯಿತು. ಈ ನದಿಯನ್ನು ಉಳಿಸಲು ನಿರ್ದಿಷ್ಟ ಕ್ರಮಗಳನ್ನು ಪ್ರಕಟಿಸುವವರೆಗೆ ಹೋರಾಟ ಮುಂದುವರೆಸಲು ಸಿಪಿಐ(ಎಂ) ನೇತೃತ್ವದಲ್ಲಿ ನೂರಾರು ಜನರು ನದಿ ತಟದಲ್ಲಿ ಧರಣಿ ಆರಂಭಿಸದರು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತ ಮೇಕ್ ಇನ್ ಇಂಡಯಾ ಎಂದು ಹೇಳುತ್ತಲೇ ಕೇಂದ್ರ ಸರಕಾರ ಹಲವು ರಾಜ್ಯಗಳಲ್ಲಿ ನೀರಿಗೆ ಹಾಹಾಕಾರ ಇರುವಾಗ ನೀರೂ ಸೇರಿದಂತೆ ದೇಶದ ಸಂಪನ್ಮೂಲಗಳನ್ನು ಸೂರೆ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ಕೊಡುತ್ತಿದೆ ಎಂದರು.

ಇದು ತಿರುನಲ್ವೇಲಿ ಮತ್ತು ತುತಿಕೊರಿನ್ ಜಿಲ್ಲೆಗಳ ಜೀವನದಿ, ಜನಸಾಮಾನ್ಯರಿಗೆ ಮತ್ತು ರೈತರಿಗೆ ನೀರಿನ ಪ್ರಮುಖ ಮೂಲ. ರಾಜ್ಯ ಸರಕಾರ ಪೆಪ್ಸಿ ಮತ್ತು ಕೋಕಾಕೊಲಾ ಕಂಪನಿಗಳು ಕೇವಲ ಹೆಚ್ಚುವರಿ ನೀರನ್ನು ಬಳಸುತ್ತವೆ ಎಂದಿರುವುದರಿಂದಾಗಿ ಮದ್ರಾಸ್ ಹೈಕೋರ್ಟ್ ಅವರಿಗೆ ನೀರಿನ ಬಳಕೆಯ ಮೇಲಿದ್ದ ನಿಷೇಧವನ್ನು ತೆಗೆದಿದೆ. ಆದರೆ ಈಗ ಈ ಎರಡು ಜಿಲ್ಲೆಗಳು ಈಗ ತೀವ್ರ ನೀರಿನ ಕೊರತೆ ಎದುರಿಸುತ್ತಿದ್ದರೂ ಈ ಕಂಪನಿಗಳಿಗೆ ಇದರ ನೀರನ್ನು ಯಥೇಚ್ಛವಾಗಿ ಬಳಸಲು ಬಿಡಲಾಗವುದನ್ನು ವಿರೋಧಿಸಿ ಈ ಹೋರಾಟವನ್ನು ಹಮ್ಮಿಕೊಳ್ಳಲಾಗಿತ್ತು.

ಮರುದಿನ ಸಾಯಂಕಾಲದ ವೇಳೆ ಜಿಲ್ಲಾ ಕಲೆಕ್ಟರ್ ಬಂದು ಈ ಪ್ರಶ್ನೆಯ ಒಂದು ವೈಜ್ಞಾನಿಕ ಪರಿಶೀಲನೆಗೆ ಪರಿಣತರ ಸಮಿತಿಯನ್ನು ರಚಿಸಿ ಅದರ ಆಧಾರದಲ್ಲಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಲಿಖಿತ ಭರವಸೆ ನೀಡಿದರು. ಅವರ ಈ ಭರವಸೆಯ ಪ್ರಕಾರ ಸುತ್ತಿಲಿನಲ್ಲಿ ಯಾವುದೇ ಕಂಪನಿ ನೀರನ್ನು ಒಂದು ಸರಕಾಗಿ ಬಳಸುವಂತಿಲ್ಲ. ಈ ಭರವಸೆಯೊಂದಿಗೆ ಹೋರಾಟವನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ.



ಹಿಂದೂ ರಾಷ್ಟ್ರೀಯವಾದದ ಭಾವನೆಗಳನ್ನು ಬಡಿದೆಬ್ಬಿಸುವುದಕಾಗಿ ಕಾಶ್ಮೀರ ಪ್ರಶ್ನೆಯನ್ನು ಬಳಸುವ ದುಷ್ಟ ಕಾರ್ಯತಂತ್ರ-ತರಿಗಾಮಿ

ರಾಜಕೀಯ ಸಂವಾದ ನಡೆಸದೆ ಬಲಪ್ರಯೋಗ ಮತ್ತು ದಮನವನೇ ಅವಲಂಬಿಸಿರುವುದು ಕಾಶ್ಮೀರದ ಜನತೆ ಮತ್ತು ಭಾರತೀಯ ಪ್ರಭುತ್ವದ ನಡುವಿನ ಸಂಬಂಧಗಳನ್ನು ಚಿಂದಿ ವಾಡಿದೆ. ಬಿಜೆಪಿ ನೇತೃತ್ವದ ಸರಕಾರ ಈ ಕಾರ್ಯತಂತ್ರವನ್ನು ಹಿಂದುತ್ವ ಅಜೆಂಡಾವನ್ನು ಮುಂದೊತ್ತುವ ಸಿನಿಕ ರಾಜಕೀಯ ಹಿತಕ್ಕಾಗಿ ಮತ್ತು ದೇಶದ ಇತರೆಡೆಗಳಲ್ಲಿ ಕಾಶ್ಮೀರ ಪ್ರಶ್ನೆಯನ್ನು ಹಿಂದೂ ರಾಷ್ಟ್ರೀಯವಾದದ ಭಾವನೆಗಳನ್ನು ಬಡಿದೆಬ್ಬಿಸುವುದಕಾಗಿ ಅನುಸರಿಸುತ್ತಿದೆ ಎಂದು ಜಮ್ಮು ಮತ್ತು ಕಾಶ್ಮೀರದ ಹಿರಿಯ ಸಿಪಿಐ(ಎಂ) ಮುಖಂಡ ಮಹಮ್ಮದ್ ಯೂಸುಫ್ ತರಿಗಾಮಿಯವರು ಖೇದ ವ್ಯಕ್ತ ಪಡಿಸಿದ್ದಾರೆ.

ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಂ ಮಾಧವ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಕೈಗಾರಿಕಾ ಮಂತ್ರಿ ಚಂದ್ರಪ್ರಕಾಶ ಗಂಗ ಅವರ ಹೇಳಿಕೆಗಳು ಮುಂದೇನು ಬರಲಿದೆ ಎಂಬುದರ ಬಗ್ಗೆ ಬಹಳಷ್ಟು ಹೇಳುತ್ತವೆ ಎಂದು ಈ ಬಗ್ಗೆ ಪ್ರತಿಕ್ರಿಯಿಸುತ್ತ ಅವರು ಹೇಳಿದ್ದಾರೆ.

ಪ್ರೀತಿಯಲ್ಲಿ ಮತ್ತು ಯುದ್ಧದಲ್ಲಿ ಎಲ್ಲವೂ ಸೂಕ್ತ ಎನ್ನುವ ಸೂಕ್ತಿಯನ್ನು ಉದ್ಧರಿಸುತ್ತ ಕಾಶ್ಮೀರಿ ಯುವಕನೊಬ್ಬನನ್ನು ಭಾರತೀಯ ಸೇನೆ ಮಾನವ ಗುರಾಣಿಯಾಗಿ ಬಳಸಿದ್ದನ್ನು ಸಮರ್ಥಿಸಿಕೊಂಡರೆ ಮಂತ್ರಿ ಗಂಗ ಅವರು "ಕಲ್ಲೆಸೆಯುವವರು ಮತ್ತು ದೇಶದ್ರೋಹಿಗಳಿಗೆ ಗುಂಡಿಕ್ಕಬೇಕು" ಎಂದಿದ್ದಾರೆ.

ಮಾಧವ ಅವರು ಬಿಜೆಪಿಯ ಒಬ್ಬ ಉನ್ನತ ಮುಖಂಡರು ಅವರ ಇಂತಹ ಹೇಳಿಕೆ ವಿನಾಶಕಾರಿ ಪರಿಣಾಮ ಉಂಟು ಮಾಡಬಹುದು ಎಂದಿರುವ ತರಿಗಾಮಿ ಪಿಡಿಪಿ ಪಕ್ಷ ಈ ಬಗ್ಗೆ ಆತ್ಮಾವಲೋಕನ ಮಾಡಬೇಕು ಎಂದು ಹೇಳಿದ್ದಾರೆ. ಬಿಜೆಪಿಯೊಂದಿಗೆ ಸರಕಾರ ರಚಿಸಿರುವ ಈ ಪಕ್ಷ ತಮ್ಮ 'ಮೈತ್ರಿಕೂಟದ ಅಜೆಂಡಾ' ಒಂದು ಪವಿತ್ರ ದಸ್ತಾವೇಜು ಎಂದು ಹೇಳುತ್ತ ಬಂದಿದೆ. ಆದರೆ ಈಗ ಆ ದಸ್ತಾವೇಜಿನಲ್ಲಿ ಪವಿತ್ರವೆನ್ನುವಂತದ್ದು ಏನಾದರೂ ಉಳಿದಿದೆಯೇ? 2015 ರಲ್ಲಿ ಇದೊಂದು ಸಮಯಸಾಧಕ ಮೈತ್ರಿಕೂಟ ಎಂದು ಸಿಪಿಐ(ಎಂ) ಹೇಳಿತ್ತು. ಈಗ ಅದು ವಿಕೃತ ಕೂಟ ಎನ್ನಬೇಕಾಗುತ್ತದೆ ಎಂದು ತರಿಗಾಮಿಯವರು ಟಿಪ್ಪಣಿ ಮಾಡಿದ್ದಾರೆ. ಈಗಲಾದರೂ ಪಿಡಿಪಿ ಇನ್ನೂ ತಡ ಮಾಡದೆ ಆತ್ಮಾವಲೋಕನ ಮಾಡಿಕೊಂಡು ಈ ವಿನಾಶಕಾರಿ ಮೈತ್ರಿಕೂಟವನ್ನು ತ್ಯಜಿಸಬೇಕು ಎಂದು ಅವರು ಸಲಹೆ ಮಾಡಿದ್ದಾರೆ.

ಮಾಧವ ಮತ್ತು ಗಂಗ ಅವರ ಹೇಳಿಕೆಗಳು ಈಗಾಗಲೇ ಸೂಕ್ಷ್ಮ ಸ್ಥಿತಿಯಲ್ಲಿರುವ ಕಾಶ್ಮೀರದ ಸನ್ನಿವೇಶವನ್ನು ಮತ್ತಷ್ಟು ಉಲ್ಬಣಗೊಳಿಸುವ ಸಾಧ್ಯತೆಯಿದೆ ಎಂದು ಬಿಜೆಪಿಗೆ ನೆನಪಿಸಿರುವ ತರಗಾಮಿ ಕಾಶ್ಮೀರದಲ್ಲಿನ ಪ್ರತಿಯೊಂದು ಸಾವು ಇನ್ನಷ್ಟು ಪ್ರತಿಭಟನೆಗಳನ್ನು ಎಬ್ಬಿಸಿ ಸೇನಾ ಮತ್ತು ಸಿಆರ್‌ಪಿ ಪಡೆಗಳು ಕಲ್ಲು ಬಿಟ್ಟು ಬೇರೇನೂ ಶಸ್ತ್ರಗಳಿಲ್ಲದ ಹದಿ ಹರೆಯದ ಕಾಶ್ಮೀರಿಗಳ ಮೇಲೆ ಅಮಾನುಷ ಬಲಪ್ರಯೋಗ ಮಾಡಬೇಕಾದಂತಹ ಯಾರೂ ಬಯಸದ ಪರಿಸ್ಥಿತಿಯನ್ನು ಉಂಟುಮಾಡುತ್ತದೆ ಎಂದು ಬಿಜೆಪಿ ಕೇಂದ್ರ ಮುಖಂಡರು ಗಮನಿಸಬೇಕು ಎಂದಿದ್ದಾರೆ.

ಈ ನಡುವೆ ಕಾಶ್ಮೀರ ಕಣಿವೆಯಲ್ಲಿ ಇಂಟರ್ನೆಟ್ ಸಂಪರ್ಕವನ್ನು ಕಡಿದು ಹಾಕಿರುವುದು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತಿದೆ. ಜನಸಾಮಾನ್ಯರಿಗೆ, ಹಲವರ ಜೀವನಾಧಾರಗಳಿಗೆ ಮತ್ತು ವಿದ್ಯಾರ್ಥಿಗಳಿಗೂ ತೊಂದರೆಯುಂಟು ಮಾಡುವ ಈ ಕ್ರಮ ವಿರುದ್ಧ ಪರಿಣಾಮವನ್ನೇ ಉಂಟು ಮಾಡುತ್ತದೆ ಎಂದು ತರಿಗಾಮಿ ಹೇಳಿದ್ದಾರೆ.

ಸಾಮಾಜಿಕ ಪರಿವರ್ತನೆಯ ಹೋರಾಟದಲ್ಲಿ ಕಾರ್ಮಿಕ ವರ್ಗ...

ಪುಟ 7 ರಿಂದ

ಇತರ ರೀತಿಯ ಪ್ರತಿಭಟನೆಗಳು ಕಾಣಬಂದಿವೆ. 2017 ಫೆಬ್ರವರಿ 28ರ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ಮುಷ್ಕರ, ಎಫ್‌ಎಂಆರ್‌ಎಐ ಕರೆಯ ಮೇರೆಗೆ ಒಂದು ಲಕ್ಷ ಮೆಡಿಕಲ್ ಹಾಗೂ ಮಾರಾಟ ಪ್ರತಿನಿಧಿಗಳು ಫೆಬ್ರವರಿ 3ರಂದು ನಡೆಸಿದ ಮುಷ್ಕರ, 13 ಲಕ್ಷ ಕೇಂದ್ರ ಸರಕಾರಿ ನೌಕರರು ಮಾರ್ಚ್ 16ರಂದು ನಡೆಸಿದ ಸಂಪು ಇತ್ಯಾದಿ ಪ್ರಮುಖ ಕಾರ್ಯಾಚರಣೆಗಳು ಗಮನಾರ್ಹ.

ಸೇಲಂ, ದುರ್ಗಾಪುರ ಮತ್ತು ಭದ್ರಾವತಿಯ ಉಕ್ಕು ಕಾರ್ಖಾನೆಗಳ ಕಾರ್ಮಿಕರು ಖಾಸಗೀಕರಣದ ವಿರುದ್ಧ ಎಪ್ರಿಲ್ 11ರಂದು ಮುಷ್ಕರ ನಡೆಸಿದರು. ಅಂಗನವಾಡಿ, ಆಶಾ, ಮಧ್ಯಾಹ್ನದ ಬಿಸಿಯೂಟ ಕಾರ್ಮಿಕರು ಮತ್ತು ಸರ್ವ ಶಿಕ್ಷಣ ಅಭಿಯಾನದ ನೌಕರರು ಸಿಐಟಿಯು ಕರೆಯ ಮೇರೆಗೆ ಜನವರಿ 20ರಂದು ಒಂದು ದಿನದ ಮುಷ್ಕರ ನಡೆಸಿದರು. ಹರ್ಯಾಣದಲ್ಲಿ ರಸ್ತೆ ಸಾರಿಗೆ ನಿಗಮ ಕಾರ್ಮಿಕರ ಮುಷ್ಕರ ಕಾರ್ಯಾಚರಣೆ ಮತ್ತು ಮಾರುತಿ ಸುಜುಕಿ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾದ ಕಾರ್ಮಿಕರಿಗೆ ಬೆಂಬಲವಾಗಿ ಮಾರುತಿ ಘಟಕಗಳ ಕಾರ್ಮಿಕರು ನಡೆಸಿದ ಸೌಹಾರ್ದ ಕಾರ್ಯಾಚರಣೆಗಳು ಇತರ ಪ್ರಮುಖ ಹೋರಾಟಗಳಾಗಿವೆ.

ಕರ್ನಾಟಕದಲ್ಲಿ ಸುಮಾರು 20000 ಅಂಗನವಾಡಿ ಮಹಿಳಾ ಕಾರ್ಮಿಕರು ಬೆಂಗಳೂರಿನಲ್ಲಿ ಈ ವರ್ಷ ಮಾರ್ಚ್‌ನಲ್ಲಿ ನಾಲ್ಕು ದಿನ ಕಾಲ ಧರಣಿ ನಡೆಸಿ ರಸ್ತೆಯಲ್ಲೆ ಪ್ರತಿಭಟನೆ ನಡೆಸಿದ ತೀವ್ರ ಹೋರಾಟವೂ ಗಮನಾರ್ಹವಾದುದು. ಈ ಹೋರಾಟದ ಫಲವಾಗಿ ಕರ್ನಾಟಕ ರಾಜ್ಯ ಸರಕಾರ ಬಜೆಟ್‌ನಲ್ಲಿ ಪ್ರಕಟಿಸಿದ್ದಕ್ಕೆ ಹೆಚ್ಚುವರಿಯಾಗಿ ಅಂಗನವಾಡಿ ನೌಕರರಿಗೆ 1000 ರೂ. ಹಾಗೂ ಸಹಾಯಕಿಯರಿಗೆ 500 ರೂ. ಏರಿಕೆ ಮಾಡುವ ಘೋಷಣೆ ಮಾಡಿತು.

ದುಡಿಯುವ ವರ್ಗದ ಈ ಎಲ್ಲಾ ಹೋರಾಟಗಳು ಮುಖ್ಯವಾಗಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವುದಕ್ಕೆ ಹಾಗೂ ಅವರ ಜೀವನೋಪಾಯ ಮತ್ತು ಆದಾಯಗಳಿಗೆ ಪೆಟ್ಟು ಕೊಡುವ ಆರ್ಥಿಕ ಧೋರಣೆಗಳಿಗೆ ಪ್ರತಿರೋಧವನ್ನು ಒಡ್ಡುವಂಥವುಗಳು. ಅವುಗಳು ಟ್ರೇಡ್ ಯೂನಿಯನ್‌ಗಳು ನಡೆಸಿದ ಸಂಘಟಿತ ಹೋರಾಟಗಳು. ಆದರೆ ದೇಶದಲ್ಲಿ ತಲೆ ಎತ್ತುತ್ತಿರುವ ಬಲಪಂಥೀಯ ಆಕ್ರಮಣಕ್ಕೆ ಎದುರಾಗಿ ಕಾರ್ಮಿಕ ವರ್ಗದ ರಾಜಕೀಯ ಪ್ರತಿರೋಧ ಇನ್ನೂ ಬರಬೇಕಷ್ಟೇ. ಹಿಂದೂತ್ವ ಕೋಮುವಾದಿ ಆಕ್ರಮಣವು ಬಲಪಂಥೀಯ ರಾಜಕಾರಣದ ಅವಿಭಾಜ್ಯ ಅಂಗವಾಗಿದೆ. ಉತ್ತರ ಪ್ರದೇಶದ ಇತ್ತೀಚಿನ ವಿಧಾನಸಭಾ ಚುನಾವಣೆ ಕೈಗಾರಿಕಾ ಕೇಂದ್ರಗಳ ಕಾರ್ಮಿಕ ವರ್ಗದ ಗಣನೀಯ ವಿಭಾಗಗಳು ಬಿಜೆಪಿಗೆ ಮತ ನೀಡಿರುವುದನ್ನು ಮತ್ತೊಮ್ಮೆ ತೋರಿಸಿಕೊಟ್ಟಿದೆ.

ಕೇವಲ ಆರ್ಥಿಕ ಹೋರಾಟಗಳಿಂದಲೇ ಕಾರ್ಮಿಕ ವರ್ಗದ ನಡುವೆ ರಾಜಕೀಯ ಪ್ರಜ್ಞೆ ಸೃಷ್ಟಿಯಾಗುವುದಿಲ್ಲ ಎಂಬ ಲೆನಿನ್‌ವಾದಿ ಸೂಕ್ತಿಯನ್ನು ಮತ್ತೆ ನೆನಪಿಸುವುದು ಅಗತ್ಯವಾಗಿದೆ. ಕೇವಲ ಆರ್ಥಿಕ ಹೋರಾಟವನ್ನು ನಂಬುವುದೆಂದರೆ ಅದು ಆರ್ಥಿಕವಾದವನ್ನು ಅನುಸರಿಸುವುದು ಎಂದರ್ಥ. ಹಾಗೂ ಅದು ಯಥಾಸ್ಥಿತಿಯ ಬಗ್ಗೆ ಸುಧಾರಣಾವಾದಿ ಭ್ರಮೆಗಳನ್ನು ಹುಟ್ಟಿಸುತ್ತದೆ. ಟ್ರೇಡ್ ಯೂನಿಯನ್ ಬೇಡಿಕೆಗಳೊಂದಿಗೆ ಕಾರ್ಮಿಕರ ಸಮರಧೀರ ಹೋರಾಟಗಳನ್ನು ರೂಪಿಸುವುದರ ಜೊತೆ ಜೊತೆ-ಗೇ ಕಾರ್ಮಿಕ ವರ್ಗದ ನಡುವೆ ಹಿಂದೂತ್ವ ಕೋಮುವಾದದ ವಿರುದ್ಧ ನಿರಂತರ ರಾಜಕೀಯ ಪ್ರಚಾರ ನಡೆಸುವುದಕ್ಕೆ ಆದ್ಯತೆ ಕೊಡಬೇಕಾಗಿದೆ. ಇದು ತುರ್ತು ಅವಶ್ಯಕತೆಯಾಗಿದೆ. ಟ್ರೇಡ್ ಯೂನಿಯನ್‌ಗಳು ಮಾತ್ರವೇ ಏಕಾಂಗಿಯಾಗಿ ಇದನ್ನು ಮಾಡಲು ಸಾಧ್ಯವಿಲ್ಲ. ಕಾರ್ಮಿಕ ವರ್ಗದ ನಡುವೆ ಕಮ್ಯೂನಿಸ್ಟ್ ಪಕ್ಷ ಒಂದು ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟವನ್ನು ನಡೆಸಬೇಕಾಗುತ್ತದೆ-ಕಾರ್ಮಿಕರ ಕೆಲಸದ ಸ್ಥಳಗಳಲ್ಲಿ, ಅವರ ವಸತಿ ಪ್ರದೇಶಗಳಲ್ಲಿ ಮತ್ತು ಅವರ ಕುಟುಂಬಗಳಲ್ಲಿ.

ದೇಶದಾದ್ಯಂತ, ಗೋರಕ್ಷಣೆಯ ಹೆಸರಿನಲ್ಲಿ ಮುಸ್ಲಿಮರು ಮತ್ತು ದಲಿತರ ವಿರುದ್ಧ ಹಿಂಸಾಚಾರವನ್ನು ಹರಿಬಿಡಲಾಗಿದೆ. ಹಿಂದೂತ್ವ ಪಡೆಗಳು ವಾಕ್ ಸ್ವಾತಂತ್ರ್ಯ ಮತ್ತು ಭಿನ್ನಮತವನ್ನು ದಮನಿಸಲು ಬೀದಿಗಿಳಿದಿವೆ. ಲೆನಿನ್ ತಮ್ಮ ಪ್ರಖ್ಯಾತ 'ಮಾಡಬೇಕಾದುದೇನು?' ಎಂಬ ಕೃತಿಯಲ್ಲಿ ಹೇಳಿರುವಂತೆ, ಎಲ್ಲಾ ಬಗೆಯ ದಬ್ಬಾಳಿಕೆ ಮತ್ತು ಸರ್ವಾಧಿಕಾರಕ್ಕೆ ಪ್ರತಿಕ್ರಿಯಿಸಲು ದುಡಿಯುವ ವರ್ಗವನ್ನು ತರಬೇತುಗೊಳಿಸಬೇಕು. ದುಡಿಯುವ ವರ್ಗದಲ್ಲಿ ಸಮಾಜವಾದಿ ಪ್ರಜ್ಞೆಯನ್ನು ಬೆಳೆಸಬೇಕೆಂದರೆ ಮತ್ತು ಸಾಮಾಜಿಕ ಪರಿವರ್ತನೆಯ ಹೋರಾಟಕ್ಕೆ ನಾಯಕತ್ವ ವಹಿಸಲು ಅದನ್ನು ಸಮರ್ಥಗೊಳಿಸಬೇಕೆಂದರೆ ಇದು ತುಂಬಾ ಅಗತ್ಯ. ಇಂದು ಭಾರತದಲ್ಲಿ, ಹಾಗೆ ಮಾಡುವುದೆಂದರೆ ಕಾರ್ಮಿಕ ವರ್ಗವು ಹಿಂದೂತ್ವ ಕೋಮುವಾದದ ವಿರುದ್ಧದ ಹೋರಾಟದ ನಾಯಕತ್ವ ವಹಿಸಬೇಕೆಂದು ಅರ್ಥವಾಗುತ್ತದೆ.

ನವ-ಉದಾರವಾದಿ ಬಂಡವಾಳಶಾಹಿ ಮತ್ತು ಕೋಮುವಾದದ ವಿರುದ್ಧ ಹೋರಾಟದ ಅವಳಿ ಕಾರ್ಯಭಾರಗಳನ್ನು ನಿಭಾಯಿಸಲು ಕಾರ್ಮಿಕ ವರ್ಗ ಸಮರ್ಥವಾಗುವಂತೆ ಸಜ್ಜುಗೊಳಿಸಲು ಕಮ್ಯೂನಿಸ್ಟರು ಕಾರ್ಮಿಕ ವರ್ಗದಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಬೇಕಾಗಿದೆ.

ಅನು: ವಿಶ್ವ

ತಲಾ ಆಹಾರಧಾನ್ಯ ಬಳಕೆ ಕಡಿಮೆಯಾಗುತ್ತಿದೆ, ಏಕೆ?

ಪುಟ 7 ರಿಂದ

ಹೇಳಬೇಕೆಂದರೆ ಆಹಾರ ಧಾನ್ಯಗಳ ದರ ಏರಿಕೆ ರೈತರು ಮಾಡಿದ ವೆಚ್ಚವನ್ನೂ ಸರಿದೂಗಿಸುವಷ್ಟಿಲ್ಲ. ಇದು ಕೃಷಿ ಏಕೆ ಲಾಭದಾಯಕವಾಗಿಲ್ಲ, ರೈತರು ಏಕೆ ಹತಾಶರಾಗಿದ್ದಾರೆ ಮತ್ತು ದೇಶದಲ್ಲಿ ಆಹಾರ ಧಾನ್ಯಗಳ ತಲಾ ಉತ್ಪಾದನೆ ಏಕೆ ಸ್ಥಗಿತಗೊಂಡಿದೆ, ಇಲ್ಲವೇ ಕುಸಿತ ಕಂಡಿದೆಯೇಕೆ ಎಂಬುದಕ್ಕೆ ವಿವರಣೆ ಕೊಡುತ್ತದೆ.

ಇದಲ್ಲದೆ ಉತ್ಪಾದನೆಯ ಖರ್ಚುಗಳು ಹೆಚ್ಚಿದ್ದರಿಂದಾಗಿ ಆಹಾರಧಾನ್ಯಗಳು ಬೆಲೆಗಳು ಏರಿದಾಗಲೂ ಜನಗಳ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಿದ್ದರೆ ಆಗ ತಲಾ ಆಹಾರಧಾನ್ಯಗಳ ಬಳಕೆ ಕಡಿಮೆಯಾಗುತ್ತಿರಲಿಲ್ಲ.

ವಿತ್ತೀಯ ಹೊಂದಾಣಿಕೆಯ ಹೆಸರಿನಲ್ಲಿ ಕೃಷಿ ಲಾಗುವಾಡುಗಳಿಗೆ ಸಬ್ಸಿಡಿಗಳನ್ನು ಹಿಂತೆಗೆದುಕೊಳ್ಳುತ್ತಾರೆ ಮತ್ತು ಗ್ರಾಮೀಣ ಅಭಿವೃದ್ಧಿ ಮುಂತಾದವುಗಳಲ್ಲಿ ಸಾರ್ವಜನಿಕ ವೆಚ್ಚವನ್ನು ಕಡಿತಗೊಳಿಸುತ್ತಾರೆ. ಅತ್ತ ನವ-ಉದಾರವಾದಿ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳಿಗೆ ತೆರಿಗೆ ವಿನಾಯಿತಿ ಮತ್ತು ಅವರ ಹಿತದೃಷ್ಟಿಯಿಂದ ಮಾಡುವ ವೆಚ್ಚಗಳ ಮೂಲಕ(ಮೇಕ್ ಇನ್ ಇಂಡಿಯಾದಂತಹ ಬಂಡವಾಳಶಾಹಿಗಳಿಗೆ ಲಾಭ ತಂದುಕೊಡುವ ಯೋಜನೆಗಳ ಮೂಲಕ) ಬೊಕ್ಕಸಕ್ಕೆ ಬರಬೇಕಾದ ಹಣವನ್ನು ವರ್ಗಾಯಿಸಲಾಗುತ್ತದೆ. ಮತ್ತು ಜಾಗತಿಕ ಹಣಕಾಸು ಬಂಡವಾಳದ "ವಿಶ್ವಾಸ"ವನ್ನು ಉಳಿಸಿಕೊಳ್ಳಲು ವಿತ್ತೀಯ ಕೊರತೆಯನ್ನು ಸೀಮಿತಗೊಳಿಸಬೇಕಾಗುತ್ತದೆ. ಇವೆಲ್ಲದರಿಂದಾಗಿ ಕೊನೆಗೆ ಕೊಡಲಿಯೇಟು ಬೀಳುವುದು ಜನಸಾಮಾನ್ಯರ ಖರೀಧಿ ಶಕ್ತಿಯನ್ನು ಹೆಚ್ಚಿಸಬಹುದಾಗಿದ್ದ ಎಲ್ಲ ಖರ್ಚುಗಳ ಮೇಲೆಯೇ. ಇದರ ಪ್ರತಿಫಲನವೇ ಭಾರತದ ಆಹಾರ ಆರ್ಥಿಕತೆಯಲ್ಲಿ ಕಾಣಬರುತ್ತಿದೆ, ದುಡಿವ ಜನರ ಆಹಾರ ಬಳಕೆ ಸಾಮರ್ಥ್ಯ ಕುಸಿಯಲು ಇದೇ ಕಾರಣ.

ಸಂಗ್ರಹಾನುವಾದ: ಮುರಳಿ

ಫ್ರೆಂಚ್ ಚುನಾವಣೆ : ಅತ್ತ ದರಿ ಇತ್ತ ಪುಲಿ

ಜಗದ ಸುತ್ತ

ಶರತ್ ಚಂದ್ರ

ಫ್ರೆಂಚ್ ಅಧ್ಯಕ್ಷೀಯ ಚುನಾವಣೆಯ ಮೊದಲ ಸುತ್ತು ನಡೆದು ಫಲಿತಾಂಶ ಹೊರ ಬಿದ್ದಿದೆ. ಕೆಲವರು ಫ್ರೆಂಚ್ ಚುನಾವಣೆಯಲ್ಲಿ 'ಕ್ರಾಂತಿ' ಆಗಿದೆ ಎಂದರೆ, ಇನ್ನು ಕೆಲವರು ಫ್ರಾನ್ಸ್ ನಲ್ಲೂ ಎಲ್ಲಾ ಮಾಧ್ಯಮ ಸಮೀಕ್ಷೆಗಳನ್ನು ಹುಸಿಗೊಳಿಸಿ, ಅಮೆರಿಕದಂತೆ ಉಗ್ರ-ಬಲಪಂಥೀಯ ಮರೀನ್ ಲೆ ಪೆನ್ ಅಧಿಕಾರಕ್ಕೆ ಬರಲಿದ್ದಾರೆ ಎಂದು ಭವಿಷ್ಯ ನುಡಿಯುತ್ತಿದ್ದಾರೆ.

ಅಂತದ್ದೇನೂ ಭಾರಿ ಅಥವಾ ಮೂಲಭೂತ ಬದಲಾವಣೆಗಳು ಆಗಿಲ್ಲ, ಸಾಮಾನ್ಯವಾಗಿ ಎರಡನೇ ಸುತ್ತಿಗೆ ಬರುವ ಅಥವಾ ಮೊದಲ ಎರಡು ಸ್ಥಾನಗಳಲ್ಲಿರುವ ನಡು-ಎಡೆಪಂಥಿಯ ಸೋಶಲಿಸ್ಟ್ ಮತ್ತು ನಡು-ಬಲಪಂಥೀಯ ರಿಪಬ್ಲಿಕನ್ ಪಕ್ಷ ಅದರಿಂದ ವಂಚಿತವಾಗಿವೆ ಎಂಬುದು ನಿಜ. ಸೋಶಲಿಸ್ಟ್ ಪಕ್ಷದ ಅಭ್ಯರ್ಥಿ ಶೇ. 6.4 ಮತ ಗಳಿಸಿ ದೂರದ 5ನೇ ಸ್ಥಾನಕ್ಕೆ ತಳ್ಳಲ್ಪಟ್ಟು ಹೀನಾಯವಾಗಿ ಸೋತಿದ್ದಾರೆ. 2002ರ ಚುನಾವಣೆ ಬಿಟ್ಟರೆ ಯಾವತ್ತೂ ಸೋಶಲಿಸ್ಟ್ ಪಕ್ಷ ಎರಡನೇ ಸುತ್ತಿಗೆ ಬರದೇ ಹೋದದ್ದಿಲ್ಲ. 2002 ರಲ್ಲೂ ಸೋಶಲಿಸ್ಟ್ ಪಕ್ಷದ ಅಭ್ಯರ್ಥಿ ಮೊದಲ ಸುತ್ತಿನಲ್ಲೇ ಸೋತಿ-ದ್ದರೂ ಗೌರವಯುತ ಶೇ. 17 ಮತ ಗಳಿಸಿದ್ದರು. ರಿಪಬ್ಲಿಕನ್ ಪಕ್ಷ ಶೇ. 20 ಮತಗಳಿಸಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಇದೇ ಧಾಟಿ ಜೂನಿನಲ್ಲಿ ಬರುವ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಕಂಡು ಬಂದ-ರೆ ಫ್ರಾನ್ಸಿನ ಎರಡು-ಪಕ್ಷ ಪದ್ಧತಿಗೆ ಅಪಾಯವಿದೆ ಎಂಬುದೂ ನಿಜ. ಆದರೆ ಅವು ಮೂಲಭೂತ ಬದಲಾವಣೆಗಳಿಗೆ (ಸಕಾರಾತ್ಮಕವಾಗಿ ಅಥವಾ ನಕಾರಾತ್ಮಕವಾಗಿ) ಹಾದಿ ಮಾಡಬಹುದೇ?

ಸೋಶಲಿಸ್ಟ್ ಪಕ್ಷ ಸೋತಿದ್ದಕ್ಕೆ ಕಾರಣ ಸ್ಪಷ್ಟ. ಅಧ್ಯಕ್ಷ ಹೊಲಾಂ ಅವರು ನವ-ಉದಾರವಾದಿ ನೀತಿಗಳ ಕಠಿಣ ಅನುಷ್ಟಾನದ ಭಾಗವಾಗಿ ದುಡಿಯುವ ವರ್ಗದ ಅಧಿಕಾರ, ಸವಲತ್ತು ಮತ್ತು ಜೀವನದ ಮೇಲೆ ಬರ್ಬರ ದಾಳಿ ನಡೆಸಿದರು. ಭಯೋತ್ಪಾದನೆಯ ನೆಪದಲ್ಲಿ ಭದ್ರತೆಯ ನೆಪದಲ್ಲಿ ಪೋಲಿಸ್ ದಮನ ಹರಿಯಬಿಟ್ಟರು. ಅವರ ಅಧ್ಯಕ್ಷೀಯ ಬೆಂಬಲ ಅತ್ಯಂತ ಕೆಳಮಟ್ಟಕ್ಕೆ ಕುಸಿದಿತ್ತು. ಹಾಗೆ ನೋಡಿದರೆ ಸೋಶಲಿಸ್ಟ್ ಅಧ್ಯಕ್ಷೀಯ ಅಭ್ಯರ್ಥಿ ಹೆಮನ್ ಸೋಶಲಿಸ್ಟ್ ಪಕ್ಷದೊಳಗೆ ನವ-ಉದಾರವಾದಿ ನೀತಿಗಳ ವಿರೋಧಿಯಾಗಿದ್ದರು.



ಸೋತ 'ಆಳುವ ಪಕ್ಷ' : ಫಿಲನ್ ಮತ್ತು ಹೆಮನ್



ಎರಡನೇ ಸುತ್ತಿಗೆ: ಮರೀನ್ ಲೆ ಪೆನ್ ಮತ್ತು ಮೆಕ್ರನ್

ಆದರೂ ಅಧ್ಯಕ್ಷ ಹೊಲಾಂ ಅವರ ಜನ-ವಿರೋಧಿ ಧೋರಣೆ ಅವರಿಗೆ ಮಾರಕವಾಯಿತು.

ಇನ್ನು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಫಿಲನ್ ಮಾಜಿ ಅಧ್ಯಕ್ಷ ಸಾರ್ಕೋಜಿ ಅವರ ಮತ್ತು ತಮ್ಮದೇ ಭ್ರಷ್ಟಾಚಾರ ಹಗರಣಗಳಿಂದ ಕುಪ್ರಸಿದ್ಧರಾಗಿದ್ದರು. ಅವರು ಶೇ. 20 ಮತ ಪಡೆದು 3 ನೇ ಸ್ಥಾನದಲ್ಲಿದ್ದರು. ಹೀಗೆ ಫ್ರಾನ್ಸಿನ ಸರತಿ ಆಳುವ ಪಕ್ಷಗಳನ್ನು ತಿರಸ್ಕರಿಸಲಾಗಿದೆ ಎಂಬುದರಿಂದ ಫ್ರೆಂಚ್ ಮತದಾರರು ಆಕ್ರೋಶಗೊಂಡಿದ್ದಾರೆ ಎಂಬುದು ತಿಳಿಯುತ್ತದೆ.

ಮೊದಲ ಸ್ಥಾನದಲ್ಲಿ ಬಂದ ಮೆಕ್ರಾನ್ ಅವರು ಶೇ. 24 ಮತ ಗಳಿಸಿದ್ದಾರೆ. ಅವರು "ಎನ್ ಮಾರ್ಚ್" ಎಂಬ ಹೊಸ ಪಕ್ಷ ಸ್ಥಾಪಿಸಿದ್ದರು. ಅವರನ್ನು "ವ್ಯವಸ್ಥೆಯಿಂದ ಆಚೆಗಿನವರು", "ವ್ಯವಸ್ಥೆಯ ವಿರೋಧಿ", ಎಂದೆಲ್ಲಾ ಕರೆಯಲಾಗಿದೆ. ಇದಕ್ಕಿಂತ ಸತ್ಯಕ್ಕೆ ದೂರವಾದದ್ದು ಇನ್ನೊಂದು ಇರಲಿಕ್ಕಿಲ್ಲ. ಅವರು ಮೊದಲು ಹಿಂದಿನ ಅಧ್ಯಕ್ಷ ಹೊಲಾಂ ಅವರ ಆರ್ಥಿಕ ಸಲಹೆಗಾರರಾಗಿದ್ದು, ಅವರ ಹಣಕಾಸು ಮಂತ್ರಿಯೂ ಆಗಿದ್ದರು. ಅಧ್ಯಕ್ಷ ಹೊಲಾಂ ಅವರ ಜನ-ವಿರೋಧಿ ಆರ್ಥಿಕ ನೀತಿಗಳ ರೂವಾರಿ ಅವರೇ. ಆದರೆ ಚುನಾವಣೆ ಮೊದಲು ರಾಜಿನಾಮೆ ಕೊಟ್ಟು ತಮ್ಮದೇ ಪಕ್ಷ ಕಟ್ಟಿ ತಾವು "ವ್ಯವಸ್ಥೆಯ ವಿರೋಧಿ" ಎಂದು ಪೋಸು ಕೊಟ್ಟರು. ಅವರಿಗೆ ಹಲವು ಮಾಜಿ ಸೋಶಲಿಸ್ಟ್ ನಾಯಕರು ಬೆಂಬಲ ಘೋಷಿಸಿದ್ದರು. ಅವರ ವಿದ್ಯಾಭ್ಯಾಸ, ಸಂಪರ್ಕ ಮತ್ತು ಉದ್ಯೋಗ ಇವೆಲ್ಲಾ ದೃಷ್ಟಿಯಿಂದಲೂ ಅವರು ವ್ಯವಸ್ಥೆಯ ಭಾಗವಾಗಿ ಇರುವವರೇ. ಅವರು ಬ್ಯಾಂಕರ್ ಆಗಿದ್ದು ಹೂಡಿಕೆ ಕಂಪನಿಗಳಲ್ಲಿ ಕೆಲಸ ಮಾಡಿ ಸಾಕಷ್ಟು ಶ್ರೀಮಂತರಾಗಿದ್ದರು. ಅವರು ಯುರೋ ಕೂಟದ, ನಾಟೋದ ಕಟ್ಟಾ ಬೆಂಬಲಿಗರಾಗಿದ್ದರು. ಈಗಾಗಲೇ ಹೇಳಿದ ಹಾಗೆ ಅಧ್ಯಕ್ಷ ಹೊಲಾಂ ಅವರ ಕಾರ್ಮಿಕ-ವಿರೋಧಿ ಜನ-ವಿರೋಧಿ ಆರ್ಥಿಕ ನೀತಿಗಳ ರೂವಾರಿ ಆಗಿದ್ದರು. ಫ್ರೆಂಚ್ ಮತ್ತು ಯುರೋಪಿನ ಆಳುವ ಪ್ರತಿಷ್ಠಿತರ ಜತೆ ಆಳವಾದ ಸಂಬಂಧ ಹೊಂದಿದ್ದು ಅವರ ಭಾಗವಾಗಿದ್ದರು. ಅವರು ಮತ್ತು ಅವರ ಹೊಸ ಪಕ್ಷ ಆರ್ಥಿಕ ಸಾಮಾಜಿಕ ರಾಜಕೀಯ ಪ್ರಶ್ನೆಗಳ ಬಗ್ಗೆ ಯಾವುದೇ ನಿಲುವು ತೆಗೆದುಕೊಳ್ಳದೆ "ಎಲ್ಲರಿಗೂ ಒಳ್ಳೆಯವರಾಗುವ" ಪ್ರಯತ್ನ ಮಾಡಿ ಸಫಲರಾದರು ಅಷ್ಟೇ. ಅವರ ಅಧ್ಯಕ್ಷೀಯ ಚುನಾವಣಾ ಪ್ರಚಾರ-ಕ್ಕೆ ಫ್ರೆಂಚ್ ಮತ್ತು ಯುರೋಪಿಯನ್ ಪ್ರತಿಷ್ಠಿತರು ಹಣ ಹರಿಸಿದ್ದಾರೆ ಎನ್ನಲಾಗಿದೆ. ಅವರ ವಿಜಯ "ವ್ಯವಸ್ಥೆ"ಯ ವಿಜಯವೇ. ಮೊದಲ ಸುತ್ತಿನ ಚುನಾವಣೆಯ ನಂತರ (ಎಡ ಪಕ್ಷಗಳನ್ನು ಬಿಟ್ಟು) ಹೆಚ್ಚಿನ "ವ್ಯವಸ್ಥೆ"ಯನ್ನು ಎತ್ತಿ ಹಿಡಿಯುವ ಪಕ್ಷಗಳು ಅವರಿಗೆ ಈಗಾಗಲೇ ಬೆಂಬಲ ಘೋಷಿಸಿವೆ.

ಎರಡನೇ ಸ್ಥಾನ ಗಳಿಸಿದ ಉಗ್ರ ಬಲಪಂಥೀಯ ಅರೆ-ಫ್ಯಾಸಿಸ್ಟ್ ಪಕ್ಷ ನೇಶನಲ್ ಫ್ರಂಟ್ ನ ಅಭ್ಯರ್ಥಿ ಮರೀನ್ ಲೆ ಪೆನ್ ಶೇ. 21.3 ಮತ ಗಳಿಸಿದ್ದಾರೆ. ಇದು ಅವರು 2012ರಲ್ಲಿ ಗಳಿಸಿದ ಶೇ. 17.9 ಕ್ಕಿಂತ ಹೆಚ್ಚಿನ ಮುನ್ನಡೆ. 2002ರಲ್ಲಿ ಮೊದಲ ಬಾರಿಗೆ ಮರೀನ್ ಲೆ ಪೆನ್ ತಂದೆ ಲೆ ಪೆನ್ ಸ್ಪರ್ಧಿಸಿದಾಗಕ್ಕಿಂತ ಶೇ.7 ಮುನ್ನಡೆ. ಆದರೂ ಯುರೋ ಕೂಟದಿಂದ ಹೊರ ಬರಬೇಕೆಂದು, ಭಯೋತ್ಪಾದಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು, ಎಲ್ಲಾ ಸಮಸ್ಯೆಗಳಿಗೆ ಕಾರಣವಾಗಿರುವ ವಿದೇಶಿ ವಲಸೆಗಾರರನ್ನು ಹೊರಗಟ್ಟಬೇಕೆಂದು ಒತ್ತಾಯಿಸುವ ನೇಶನಲ್ ಫ್ರಂಟ್, ಇಂದಿನ ಯುರೋಪಿನ ಪರಿಸ್ಥಿತಿಯಲ್ಲಿ ಶೇ. 28 ಮತಗಳೊಂದಿಗೆ ಮೊದಲ ಸ್ಥಾನ ಗಳಿಸುತ್ತದೆ ಎನ್ನಲಾಗಿತ್ತು. ಯುರೋ ಕೂಟ, ಭಯೋತ್ಪಾದನೆ, ವಲಸೆಗಾರರ ವಿರುದ್ಧ ಯುರೋಪಿನಲ್ಲೂ ಫ್ರಾನ್ಸಿನಲ್ಲೂ ಇರುವ ತೀವ್ರ ಭಾವನೆಗಳಿಂದ ಇದು ಸಾಧ್ಯ ಎಂದು ಸಮೀಕ್ಷೆಗಳು ಹೇಳಿದ್ದವು. ಅದು ಆಗಿಲ್ಲ. ಹಲವು ಸಮೀಕ್ಷೆಗಳು ಉಗ್ರ ಬಲಪಂಥೀಯ ಅರೆ-ಫ್ಯಾಸಿಸ್ಟ್ ಪಕ್ಷ ನೇಶನಲ್ ಫ್ರಂಟ್‌ಗೆ ನಾವು ಎಂದೂ ಮತ ಕೊಡುವುದಿಲ್ಲ ಎಂದು ಶೇ. 62 ರಷ್ಟು ಜನ ಹೇಳಿದ್ದಾರೆ ಎಂದು ಹೇಳಿವೆ.



ಗಮನಾರ್ಹ ಎಡ ಮುನ್ನಡೆ : ಮೆಲೆಂಕೊನ್

ಎಡ ಅಭ್ಯರ್ಥಿಯೊಬ್ಬರು ಅತಿ ಹೆಚ್ಚು ಮತ ಗಳಿಸಿದ ಚನಾವಣೆಯೂ ಇದಾಗಿತ್ತು. ಹತ್ತಿರದ ನಾಲ್ಕನೇ ಸ್ಥಾನದಲ್ಲಿ ಬಂದ ಎಡ ಅಭ್ಯರ್ಥಿ ಮೆಲೆಂಚೊನ್ ಶೇ. 19.6 ಮತ ಗಳಿಸಿದ್ದಾರೆ. 2012ರ ಚುನಾವಣೆಯಲ್ಲಿ ಗಳಿಸಿದ ಶೇ. 11.1ಕ್ಕ ಹೋಲಿಸಿದರೆ ಇದು ದೊಡ್ಡ ಮುನ್ನಡೆಯೇ ಎನ್ನಲಾಗಿದೆ. ಸೋಶಲಿಸ್ಟ್ ಪಕ್ಷದಿಂದ ಹಿಂದೆನೇ ಹೋರಬಂದು ಎಡಪಕ್ಷ ರಚಿಸಿದ ಇವರಿಗೆ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಎಲ್ಲಾ ಎಡ ಪಕ್ಷಗಳು ಬೆಂಬಲಿಸಿದ್ದವು. ನಾಟೋದಿಂದ ಹೊರ ಬರುವ, ಮಿತವ್ಯಯ ಮತ್ತಿತರ ಕಾರ್ಮಿಕ-ವಿರೋಧಿ ನೀತಿಗಳನ್ನು ಬದಲಿಸುವ, ಮುಕ್ತ ವ್ಯಾಪಾರ ಒಪ್ಪಂದ ಗಳನ್ನು ಕೊನೆಗೊಳಿಸುವ ಕಾರ್ಯಕ್ರಮದ ಸುತ್ತ ಆಕ್ರಾಮಕ ಪ್ರಚಾರವನ್ನು ಅವರು ಮಾಡಿದ್ದರು. ಕೊನೆಯ ಕೆಲವು ವಾರಗಳಲ್ಲಿ ಅವರ ಬೆಂಬಲ ಏರಿತ್ತು. ಸೋಶಲಿಸ್ಟ್ ಮತ್ತು ನೇಶನಲ್ ಫ್ರಂಟ್ ನ ಮತಗಳ ಒಂದು ಭಾಗವನ್ನು ಅವರು ಗೆದ್ದು-ಕೊಂಡಂತೆ ಕಾಣುತ್ತದೆ. ಕೊನೆಯ ವಾರದಲ್ಲಿ ಅವರ ಪ್ರಚಾರದ ರಭಸ ಕಂಡು ಅವರು ಎರಡನೇ ಸ್ಥಾನಕ್ಕೆ ಬರಬಹುದೆಂದು ಶೇರು ಮಾರುಕಟ್ಟೆಗಳು ನಡುಗಿದ್ದವಂತೆ. ಉಗ್ರ ಬಲಪಂಥೀಯ ಪಕ್ಷ ನೇಶನಲ್ ಫ್ರಂಟ್ ನ ಕಾರ್ಮಿಕ ವರ್ಗದ ಒಂದು ವಿಭಾಗದ ಬೆಂಬಲಿಗರನ್ನು ಮೆಲೆಂಚೊನ್ ಗೆದ್ದು-ಕೊಂಡಿದ್ದರಿಂದ, ನೇಶನಲ್ ಫ್ರಂಟ್ ನ ಮತಗಳಿಕೆ ಕಡಿಮೆಯಾಗಿದೆ ಎಂದು ಹೇಳಲಾಗಿದೆ. ಮುಂಬರುವ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಎಡ ಕೂಟ ಇನ್ನಷ್ಟು ಹೆಚ್ಚಿನ ಬೆಂಬಲ ಗಳಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

2002ರಲ್ಲಿ ಆದಂತೆ ಎರಡನೇ ಸುತ್ತಿನಲ್ಲಿ ಉಗ್ರ ಬಲಪಂಥೀಯ ಪಕ್ಷ ನೇಶನಲ್ ಫ್ರಂಟ್ ನ್ನು ಸೋಲಿಸಲು ಎಲ್ಲಾ ಪಕ್ಷಗಳು ಒಟ್ಟಾಗುತ್ತವೆ. ಆದ್ದರಿಂದ ಮೊದಲ ಸ್ಥಾನದಲ್ಲಿ ಬಂದ ಮೆಕ್ರಾನ್ ಗೆಲ್ಲುವುದು ಖಚಿತ ಎಂಬುದು ಒಂದು ಅಭಿಪ್ರಾಯ. ಮೆಕ್ರಾನ್, ಅವರ ಪಕ್ಷ ಮತ್ತು ಬೆಂಬಲಿಗರು ಅವರು ಈಗಾಗಲೇ ಅಧ್ಯಕ್ಷ ಆಗಿಬಿಟ್ಟಿದ್ದಾರೆ ಎಂಬಂತೆ ವಿಜಯೋತ್ಸವ ಆಚರಿಸಿದ್ದಾರೆ. ಇಂತಹ ನಿರ್ಲಕ್ಷ ನಿಶ್ಚಿಂತೆ ಅಪಾಯಕಾರಿ ಎಂದು ಸೋಶಲಿಸ್ಟ್ ಪಕ್ಷ ಸೇರಿದಂತೆ ಹಲವು ಪಕ್ಷಗಳ ನಾಯಕರು ಎಚ್ಚರಿಸಿದ್ದಾರೆ. ಈಗ ಜಗತ್ತು, ಯುರೋಪ್ ಮತ್ತು ಫ್ರಾನ್ಸಿನಲ್ಲಿ ಇರುವ ಉಗ್ರ ಬಲಪಂಥೀಯ ಅಲೆಯ ಹಿನ್ನೆಲೆಯಲ್ಲಿ ನೇಶನಲ್ ಫ್ರಂಟ್ ನ ಮರೀನ್ ಲೆ ಪೆನ್ ಗೆಲ್ಲಲಾರರು ಎಂದು ಹೇಳುವಂತಿಲ್ಲ. ಇದು ಬಹಳ ಮಟ್ಟಿಗೆ ಎಡಪಕ್ಷಗಳ ಎರಡನೇ ಸುತ್ತಿನ ನೀತಿ ಮೇಲೆ ಅವಲಂಬಿಸಿದೆ. ಕೆಲವು ಎಡಪಕ್ಷಗಳು ಮೆಕ್ರಾನ್ ಗೆ ಬೆಂಬಲ ಸೂಚಿಸಲು ನಿರಾಕರಿಸಿವೆ. ಇವೆರಡು ಪಕ್ಷಗಳ ನಡುವೆ ಆಯ್ಕೆಗೆ ಅರ್ಥವಿಲ್ಲ ಎಂದು ಅವು ಹೇಳಿವೆ. ಉಗ್ರ ಬಲಪಂಥೀಯ ಪಕ್ಷದ ಉತ್ಕರ್ಷಕ್ಕೆ ಕಾರಣ ಎಲ್ಲಾ ಆಳುವ ಪಕ್ಷಗಳು ಅನುಸರಿಸುತ್ತಾ ಬಂದ ನವ-ಉದಾರವಾದಿ ನೀತಿಗಳು ಎಂಬುದು ಅವರ ಹೇಳಿಕೆ.

ಎರಡನೇ ಸುತ್ತಿನಲ್ಲಿ ಫ್ರೆಂಚ್ ಮತದಾರರ ಸ್ಥಿತಿ "ಅತ್ತ ದರಿ ಇತ್ತ ಪುಲಿ" ಎಂಬಂತಿದೆ. ಎರಡನೇ ಸುತ್ತಿನಲ್ಲಿ ಫ್ರೆಂಚ್ ಮತದಾರರ ತೀರ್ಪು ಫ್ರಾನ್ಸ್, ಯುರೋಪ್ ಮಾತ್ರವಲ್ಲ ಇಡೀ ಜಗತ್ತಿನ ಮೇಲೆ ಪರಿಣಾಮ ಬೀರಲಿದೆ.

ಈ ವಾರ ಚರಿತ್ರೆಯಲ್ಲಿ

5 ಮೇ 1818

ಕಾರ್ಲ್ ಮಾರ್ಕ್ಸ್ ಜನ್ಮ ದಿನ

ತತ್ವಜ್ಞಾನಿಗಳು ಜಗತ್ತನ್ನು ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ. ಆದರೆ ಬೇಕಾದ್ದು ಈ ಜಗತ್ತನ್ನು ಬದಲಿಸುವುದು ಎಂದು ಹೇಳಿದ್ದ, 19ನೇ ಶತಮಾನದ ತತ್ವಜ್ಞಾನಿ. ಆದರೆ ಈಗಲೂ ಸಮಾನತೆಯ ಸಮಾಜ ನಿರ್ಮಾಣದ ಕನಸು ಹೊತ್ತ ಎಲ್ಲರೂ ನೆನಪಿಸಿಕೊಳ್ಳುತ್ತಿರುವ ತತ್ವಜ್ಞಾನಿ. ಈ ವರ್ಷದಿಂದ ಅವರ ಜನ್ಮ ದ್ವಿಶತಮಾನೋತ್ಸವದ ಆಚರಣೆ ಆರಂಭವಾಗುತ್ತಿದೆ. ಅಲ್ಲದೆ ಜಗತ್ತಿನ ಬದಲಾವಣೆಯ ದಾರಿಯನ್ನು ಕಾರ್ಮಿಕ ವರ್ಗದ ಎದುರು ಆಮೂಲಾಗ್ರವಾಗಿ ಬಿಡಿಸಿಟ್ಟ ಅವರ ಐತಿಹಾಸಿಕ ಕೃತಿ ಬಂಡವಾಳ' (ದಾಸ್‌ಕ್ಯಾಪಿಟಲ್')ನ ಮೊದಲ ಸಂಪುಟ ಪ್ರಕಟಣೆಯ 150 ನೇ ವರ್ಷಾಚರಣೆಯೂ ಆರಂಭವಾಗುತ್ತಿದೆ. ಈ ಕೃತಿಯನ್ನು ಈಗ ಕಾರ್ಮಿಕ ವರ್ಗಕ್ಕಿಂತ ಹೆಚ್ಚಾಗಿ ಸ್ವತಃ ಬಂಡವಾಳಶಾಹಿಗಳೇ ತಮ್ಮ ಬಿಕ್ಕಟ್ಟನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

"ಸಮಾಜವಾದಿ ಕ್ರಾಂತಿ–ಸಾಮಾಜಿಕ ನ್ಯಾಯ" ವಿಚಾರ ಸಂಕಿರಣ

ವರದಿ : ಎನ್. ನಾಗರಾಜ



'ರಾಜಕೀಯ ಹಕ್ಕುಗಳು' ಮಾತ್ರ ಪ್ರಜಾಪ್ರಭುತ್ವದ ಪರಿಕಲ್ಪನೆಯಲ್ಲ; ಇದರೊಂದಿಗೆ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳು ದೊರೆತಾಗ ಮಾತ್ರ ಪ್ರಜಾಪ್ರಭುತ್ವ ಪರಿಪೂರ್ಣ ವಾಗಬಲ್ಲದು

– ನ್ಯಾಯಮೂರ್ತಿ ನಾಗಮೋಹನ್‌ದಾಸ್

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ, ಸೆನೆಟ್ ಸಭಾಂಗಣದಲ್ಲಿ ದಿ: 23.04.2017 ರಂದು, ದಲಿತ ಹಕ್ಕುಗಳ ಸಮಿತಿ, ಸಮುದಾಯ ಹಾಗೂ ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಆಚರಣಾ ಸಮಿತಿಗಳು ಜಂಟಿಯಾಗಿ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದ ಸಂಯೋಜನೆಯೊಂದಿಗೆ ಆಯೋಜಿಸಲಾಗಿದ್ದ ಸಮಾಜವಾದಿ ಕ್ರಾಂತಿ ಮತ್ತು ಸಾಮಾಜಿಕ ನ್ಯಾಯ ವಿಚಾರ ಸಂಕಿರಣವನ್ನು ಉದ್ಘಾಟಿಸುತ್ತಾ ನ್ಯಾಯಮೂರ್ತಿ ಹೆಚ್.ಎಸ್. ನಾಗಮೋಹನ್ ದಾಸ್ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.

ಇತಿಹಾಸದ ವಿದ್ಯಾರ್ಥಿಯಾದ ನಾನು ಡಾ: ಬಿ.ಆರ್. ಅಂಬೇಡ್ಕರ್ ರವರು ಹೇಳಿದ ಮಾತುಗಳಾದ "ಇತಿಹಾಸವನ್ನು ಮರೆತವರು ಇತಿಹಾಸವನ್ನೂ ಸೃಷ್ಟಿಸಲಾರರು" ಎಂಬ ಸರ್ವಕಾಲಿಕ ಸತ್ಯವನ್ನು ನನ್ನಲ್ಲಿ ತುಂಬಿಸಿಕೊಂಡು ಜಗತ್ತಿನಲ್ಲಿ ನಡೆದ ಹಲವಾರು ಕ್ರಾಂತಿಗಳ ಬಗ್ಗೆ ಅಭ್ಯಾಸ ಮಾಡಿದ್ದೇನೆ. 13 ನೇ ಶತಮಾನದಲ್ಲಿನ ಇಂಗ್ಲೆಂಡಿನ ದೊ–ರೆ ರಿಂಗ್ ಜಾನ್ ಜಹಗೀರುದಾರರಿಗೆ ನಡೆದ ಸಂಘರ್ಷದಿಂದಾಗಿ ಜಗತ್ತಿನ ಮೊದಲ ಸಂವಿಧಾನ 'ಮ್ಯಾಗ್ನಕಾರ್ಟ' ರಚನೆಯಿಂದ ಮೊದಲುಗೊಂಡು, ನಂತರ ನಡೆದ ಅಮೆರಿಕಾ ದೇಶದ ಮಹಾನ್ ಕ್ರಾಂತಿ, ಆನಂತರ ನಡೆದ ಪ್ರೆಂಚ್ ಮಹಾಕ್ರಾಂತಿಯ ಘೋಷಣೆಗಳ ಬಗ್ಗೆ ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರಾಸ್ತಾಪಿಸಿದರು. ನಂತರ ಸಮಾಜವಾದಿ ಕ್ರಾಂತಿಯ ಕುರಿತು ವಿಶ್ಲೇಷಿಸಿದರು.

'ಮ್ಯಾಗ್ನಕಾರ್ಟ ರಚನೆಯಿಂದಾಗಿ, 'ದೊರೆಗಳ ಅಧಿಕಾರಕ್ಕೆ ಕಡಿವಾಣ ಹಾಕಿ, ನ್ಯಾಯಾಂಗವನ್ನು ಬಲಪಡಿಸಲಾಯಿತು. 1776 ರಲ್ಲಿ ನಡೆದ ಅಮೆರಿಕಾ ದೇಶದ ಮಹಾನ್ ಕ್ರಾಂತಿಯಿಂದಾಗಿ, ಅಮೇರಿಕಾದಲ್ಲಿ ವಸಾಹತು ಶಾಹಿ ರದ್ದಾಯಿತು. ಪ್ರಜಾಪ್ರಭುತ್ವ ರಚನೆಯಾಗಿ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಪ್ರತ್ಯೇಕ ಮತ್ತು ಸ್ವತಂತ್ರ ಅಂಗಗಳನ್ನು ರಚಿಸಲಾಯಿತು. ಕೆಲವರಿಗೆ ರಾಜಕೀಯ ಹಕ್ಕುಗಳಾದ ವಾಕ್ ಸ್ವಾತಂತ್ರ್ಯ ಧಾರ್ಮಿಕ ಸ್ವಾತಂತ್ರ್ಯ, ಸಂಚರಿಸುವ ಸ್ವಾತಂತ್ರ್ಯ ನೀಡಲಾಯಿತು. ಆದರೆ, ಗುಲಾಮ ಪದ್ಧತಿ, ವರ್ಣ ಭೇಧ, ವರ್ಗ ಬೇಧ ಲಿಂಗ ಬೇಧ ಮುಂದುವರಿಯಿತು.

ಆ ನಂತರ 1789 ರಲ್ಲಿ ನಡೆದ ಪ್ರೆಂಚ್ ಮಹಾಕ್ರಾಂತಿಯಿಂದಾಗಿ ಸ್ವಾತಂತ್ರ್ಯ, ಸಮಾನತೆ, ಮತ್ತು ಸಹೋದರತ್ವ, ಮೂಲ ತತ್ವವಾಗಿ, ಪಾಳೆಗಾರಿ ಪದ್ಧತಿ ರದ್ದಾಯಿತು. ಚುನಾಯಿತ ಸರ್ಕಾರಗಳು ಅಸ್ತಿತ್ವಕ್ಕೆ ಬಂದವು – ಹೀಗೆ ಜಗತ್ತಿನಾದ್ಯಂತ ನಡೆದ ಮಹಾನ್ ಕ್ರಾಂತಿಗಳ ಬಗ್ಗೆ ತಿಳಿಸಿಕೊಡುತ್ತಾ, 'ಸಮಾಜವಾದಿ ಕ್ರಾಂತಿ ಮತ್ತು ಸಾಮಾಜಿಕ ನ್ಯಾಯ' ಕುರಿತ ವಿಚಾರ ಸಂಕಿರಣಕ್ಕೆ ಸೂಕ್ತ ಅಡಿಪಾಯ ಒದಗಿಸಿದರು – ಹೆಚ್.ಎನ್. ನಾಗಮೋಹನ್ ದಾಸ್ ರವರು.

1917 ರಲ್ಲಿ ನಡೆದ ರಷ್ಯನ್ ಕ್ರಾಂತಿಯು "ಸಾಮಾರ್ಥ್ಯಕ್ಕೆ ತಕ್ಕಂತೆ ದುಡಿಯಬೇಕು, ದುಡಿಮೆಗೆ ತಕ್ಕಂತೆ ಪಡೆಯಬೇಕು" ಎಂಬ ಹೊಸ ಚಿಂತನೆಯನ್ನೂ ಹುಟ್ಟು ಹಾಕಿತು? ಮೊದಲನೆ ಬಾರಿಗೆ ಜಗತ್ತಿನಲ್ಲಿ ಕಾರ್ಮಿಕರ ಮುಖಂಡತ್ವದ ಸಮಾಜವಾದಿ ಆಡಳಿತ ಅಧಿಕಾರಕ್ಕೆ ಬಂದು 'ಸಮಾಜವಾದಿ ಸಂವಿಧಾನ' ಸಂಚಲನ ಕ್ರಿಯೆಯಾಗಿ ಹೊಸ ರೂಪವನ್ನು ಒದಗಿಸಿತು.

ಪ್ರಭುತ್ವವೆಂದರೆ ಕೇವಲ ದೇಶದ ಗಡಿಯನ್ನು ರಕ್ಷಿಸುವುದು ಅಗತ್ಯವಿಲ್ಲದಿದ್ದರೂ, ಯುದ್ಧ/ದಂಗೆಗಳ ಮೂಲಕ ಸದೆ ಬಡೆದು ಗಡಿಗಳನ್ನು ವಿಸ್ತರಿಸುವುದು ಎಂಬ ಅರ್ಥವನ್ನು ಬದಲಾಯಿಸಿ, ಮರು ವ್ಯಾಖ್ಯಾನವನ್ನೂ ಈ ಸಮಾಜವಾದಿ ಸಂವಿಧಾನ ಮಾಡಿತು. ಅದೇನೆಂದರೆ, ಜನ ಸಾಮಾನ್ಯರಿಗೆ ಮೂಲಭೂತ ಹಕ್ಕುಗಳನ್ನು ಒದಗಿಸಿತು. ಅವುಗಳೆಂದರೆ, ಆಹಾರ, ಆರೋಗ್ಯ, ಶಿಕ್ಷಣ, ವಸತಿ ಹಾಗೂ ಉದ್ಯೋಗಗಳನ್ನು ಪೂರೈಸುವುದು ಸರ್ಕಾರದ ಆದ್ಯ ಕರ್ತವ್ಯ ಎಂಬ ಜನರ ಕಲ್ಯಾಣ ರಾಜ್ಯದ ಪರಿಕಲ್ಪನೆಗಳನ್ನು ಜಾರಿಗೆ ತಂದಿತು.

ಆದರೆ ಇದೀಗ ಇವೆಲ್ಲ ನಮ್ಮ ದೇಶದಲ್ಲಿ ಮೂಲ ಭೂತ ಹಕ್ಕುಗಳಾಗಿ ಸಂವಿಧಾನದಲ್ಲಿ ರಾಜಕೀಯ ಹಕ್ಕುಗಳಾದ ಮತದಾನ, ವಾಕ್ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಸಂಚರಿಸುವ ಸ್ವಾತಂತ್ರ್ಯ ಇವುಗಳು ಮಾತ್ರ ಜಾರಿಯಲ್ಲಿದೆ – ಏಕೆಂದರೆ ಸರ್ಕಾರದಿಂದ ಈ ಸ್ವಾತಂತ್ರ್ಯಗಳಿಗೆ ಯಾವುದೇ ರೀತಿಯ ಹಣಕಾಸಿನ ಖರ್ಚು ಇರುವುದಿಲ್ಲ ಎಂದು ಅಣಕಿಸಿದರು.. ಆಹಾರ, ಶಿಕ್ಷಣ, ಆರೋಗ್ಯ. – ಮೂಲ ಭೂತ ಹಕ್ಕಾಗಳಾಗಲಿಲ್ಲ. ಬರಿಯ ನಿರ್ದೇಶಕ ತತ್ವಗಳಾದವು. ಬಹುಸಂಖ್ಯಾತ ಜನರಿಗೆ ಇವು ಇನ್ನು ಧಕ್ಕುತ್ತಿಲ್ಲ ವೆಂದರು. 'ಕುವೆಂಪು ರವರು ಹೇಳಿದ 'ಸರ್ವರಿಗೂ ಸಮಪಾಲು – ಸಮ ಬಾಳು' ಎಂಬ ನಾಣ್ನುಡಿಯ ಕನಸು ನನಸಾಗಲು ಪ್ರಯತ್ನ ಸಾಗಬೇಕಾಗಿದೆ.

ಜಗತ್ತು ಹಿಂದೆಂದಿಗಿಂತ ಇದೀಗ ಶ್ರೀಮಂತವಾಗಿದೆ. ಸಂಪತ್ತು ಹೆಚ್ಚು ಶ್ರೀಮಂತರ ಕೈ ವಶವಾಗಿದೆ. ಆದರೆ 'ಟ್ರಿಕಲ್ ಡೌನ್ ತೇರಿ' ಸುಳ್ಳಾಗಿದೆ. ಶೇ. 58 ರಷ್ಟು ಸಂಪತ್ತು ಕೇವಲ ಶೇ. 1 ರಷ್ಟು ಜನರ ಕೈಯಲ್ಲಿದೆ. ಶೇ. 22 ರಷ್ಟು ಸಂಪತ್ತು ಶೇ. 9 ರಷ್ಟು ಜನರ ಬಳಿ ಇದೆ. ಉಳಿದ 20 ರಷ್ಟು ಶೇ. 90 ರಷ್ಟು ಜನರಲ್ಲಿ ಹಂಚಿಕೆಯಾಗಿದೆ. ಹಸಿವು, ಬಡತನ, ನಿರುದ್ಯೋಗ ? ಕೌರ್ಯ ವ್ಯಾಪಕವಾಗಿ ಬೆಳೆದಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಂವಿಧಾನ ರಚನೆಯಾದ 67 ವರ್ಷಗಳಿಂದ ವಿಫಲರಾಗಿದ್ದೇವೆ ಎಂದರು.

ಸಂವಿಧಾನದ ಅಡಿಪಾಯವೆಂದರೆ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಸಮಾನತೆ, ಸೋದರತ್ವ, ಜಾತ್ಯಾತೀತ ಸ್ವರೂಪ ಆದರೆ ಇವುಗಳನ್ನು ಹುಡುಕಬೇಕಾದ ಪರಿಸ್ಥಿತಿ ಉದ್ಭವವಾಗಿದೆ. ಪ್ರಜಾಪ್ರಭುತ್ವವೆಂದರೆ ಕೇವಲ ಚುನವನನೆ ಎಂಬ ಪರಿಕಲ್ಪನೆ ಗಾಡವಾಗಿ ಮನೆ ಮಾಡಿದೆ. ಜಾತ್ಯಾತೀತತೆ –ಎಂದರೆ ಮೊದಲು ಎಲ್ಲ ಧರ್ಮಗಳನ್ನೂ ಸಮನಾಗಿ ನೋಡಬೇಕು ಎಂಬ ಭಾವನೆ ಇತ್ತು. ಆದರೆ, ಜಾತ್ಯಾತೀತತೆಯ ನಿಜವಾದ ಅರ್ಥ 'ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಬೇಕು' ಎಂಬುದಾಗಿದೆ. ಆದರೆ ಪ್ರಸ್ತುತ 'ಧರ್ಮವೇ ಅಧಿಕಾರ ನಡೆಸುತ್ತಿದೆ' ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದು ಸಂವಿಧಾನಕ್ಕೆ ಹಾಗೂ ಅದರ ಮೂಲ ತತ್ವವಾದ ಸಾಮಾಜಿಕ ನ್ಯಾಯ–ಕ್ಕೆ ಬರಬಹುದಾದ ಅಪಾಯದ ಸೂಚನೆಯಾಗಿದೆ ಎಂದರು. ಜಗತ್ತಿನ ಎಲ್ಲಾ ಧರ್ಮಗಳು ಹುಟ್ಟಿದ್ದು – ಜನರ ಸಮಸ್ಯೆಗಳ ಪರಿಹಾರಕ್ಕಾಗಿ, ಹಾಗಾಗಿ ಧರ್ಮವನ್ನು ವಿರೋಧಿಸಲಾಗದು, ಜನರ ಭಾವನೆಗಳು, ಅವರ ನಂಬಿಕೆಗಳು ಧರ್ಮದಲ್ಲಿ ಬೆರೆತಿವೆ. ಯಾವುದೇ ಒಂದೇ ಧರ್ಮವನ್ನು, ಮತ್ತೊಬ್ಬರ ಮೇಲೆ ಬಲವಂತದಿಂದ ಯಾವುದೇ ಕಾರಣಕ್ಕೂ ಹೇರುವುದು ಸರಿಯಲ್ಲ. ಹೇರಿದ್ದೆ ಆದರೆ ಅದು ಧಾರ್ಮಿಕ ಮೂಲಭೂತವಾಗುತ್ತದೆ ಎಂದು ವ್ಯಾಖ್ಯಾನಿಸಿದರು.

ಇನನು ಮೀಸಲಾತಿ, ಬಡ್ತಿ ಮೀಸಲಾತಿ ಕುರಿತಂತೆ, ಮಾತನಾಡುತ್ತಾ, ಎಲ್ಲಿಯವರೆಗೂ ಜಾತಿ ತಾರತಮ್ಯ? ಅಸಮಾನತೆ, ಅಸ್ಪೃಶ್ಯತಾ ಆಚರಣೆಗಳು ಇರುತ್ತವೆಯೋ, ಅಲ್ಲಿಯವರೆಗೂ ಮೀಸಲಾತಿಯ ಅಗತ್ಯವಿರಲೇಬೇಕು. ಸಂವಿಧಾನದ ಅನುಚ್ಛೇದ 16 ರಲ್ಲಿ ಉದ್ಯೋಗದ ಬಡ್ತಿಯ ವಿಚಾರದಲ್ಲಿ ಮೀಸಲಾತಿ ನೀಡಲು ಅವಕಾಶವಿದೆ ಎಂದರು.

ಸಂವಿಧಾನದ ಮೂಲತತ್ವಗಳಿಗೆ ತಿದ್ದುಪಡಿ ತರಬಾರದು ಎಂದು ಪ್ರತಿಪಾದಿಸಿದರು. ನಮಗೆ ಬಹುಮತವಿದೆ ಎಂಬ ಅಧಿಕಾರದಾಹ ಧೋರಣೆ ಸರಿಯಲ್ಲ. ಒಂದು ಕಡೆ ಗುಜರಾತ್. ಹರಿಯಾಣ, ರಾಜಸ್ತಾನಗಳಲ್ಲಿ ಮೀಸಲಾತಿಯ ಚಳುವಳಿಗಳು ನಡೆಯುತ್ತಿವೆ. ಇನ್ನೊಂದು ಕಡೆ ಸರ್ವೋಚ್ಛ ನ್ಯಾಯಾಲಯ ಬಡ್ತಿ ಮೀಸಲಾತಿ ರದ್ದು ಮಾಡುತ್ತಿದೆ. ಮತ್ತೊಂದು ಕಡೆ, ಕೋಮುವಾದಿಗಳು, ಜಾತಿವಾದಿಗಳು ಜನರ ಭಾವನೆಗಳೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ಆಹಾರ ಪದ್ಧತಿ, ಉಡುಗೆ ನಿಯಂತ್ರಣ ಮಾಡುತ್ತಿದ್ದಾರೆ. ರಾಷ್ಟ್ರದ ಐಕ್ಯತೆ, ಸಮಗ್ರತೆ, ಸಮಾಜಿಕ ನ್ಯಾಯದ ಕುರಿತಂತೆ ? ಎಚ್ಚರಿಕೆ ಅಗತ್ಯವಿದೆ ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ಗಂಭೀರವಾಗಿ ಸೂಚನೆ ನೀಡಿದರು.

ಮತ್ತೊಬ್ಬ ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವಯ್ಯ ನವರು ಮುಖ್ಯ ಭಾಷಣಕಾರರಾಗಿ ವಿಚಾರ ಸಂಕಿರಣದಲ್ಲಿ ಮಾತನಾಡಿದರು, ಡಾ। ಬಿ.ಆರ್. ಅಂಬೇಡ್ಕರ್ ರವರ 126 ನೇ ಜನ್ಮ ದಿನಾಚರಣೆಯ ಪ್ರಯುಕ್ತ ನಡೆಯುತ್ತಿರುವ ಈ ಕಾರ್ಯಕ್ರಮಕ್ಕೆ ತಮ್ಮನ್ನು ಆಹ್ವಾನಿಸಿದಕ್ಕಾಗಿ ಕೃತಜ್ಞತೆ ಹೇಳುತ್ತಾ, ಡಾ। ಅಂಬೇಡ್ಕರ್ ರವರು ಒಬ್ಬ 'ಆತ್ಮಬಲ'ದ ಗುಣವುಳ್ಳವರು, ಮಹಾನ್ ಪ್ರಭುದ್ದರು, ಜಗತ್ತಿನಾದ್ಯಂತ ಪ್ರಭಾವ ಬೀರಿದವರು, ಎಂದರು. 'ಪುಣಾ' ಒಪ್ಪಂದದ ಬಗ್ಗೆ ತಿಳಿಸಿದ ನ್ಯಾಯಮೂರ್ತಿಗಳು, ಗಾಂಧಿಜಿಗೂ – ಅಂಬೇಡ್ಕರ್ ರವರಿಗೂ ಇದ್ದ ಕೆಲವು ಬಿನ್ನತೆಯನ್ನೂ ವಿವರಿಸಿದರು. .ದುಂಡುಮೇಜಿನ (1933) ಸಭೆಗೆ ಹೋಗುವಾಗ 4 ಅಂಶಗಳ ಶರತ್ತುಗಳನ್ನು ಅಂಬೇಡ್ಕರ್ ಮುಂದಿಟ್ಟರು. ಅಸ್ಪೃಶ್ಯತಾ ಆಚರಣೆಗಳು – ಜಾತಿ ತಾರತಮ್ಯಗಳನ್ನು ಅಪರಾಧಗಳಾಗಿ ಪರಿಗಣಿಸಬೇಕು. ನಿಮ್ನವರ್ಗಕ್ಕೆ ರಕ್ಷಣೆ ಒದಗಿಸಬೇಕು; 10 ವರ್ಷಗಳ ಕಾಲ ಮೀಸಲಾತಿ ಒದಗಿಸಬೇಕು; ಕ್ಯಾಬಿನೆಟ್ ನಲ್ಲಿ ಪರಿಶಿಷ್ಟ ಜಾತಿಗೆ ಪ್ರಾತಿನಿಧ್ಯ ಇರಬೇಕು – ಆದರೆ ಅಂಬೇಡ್ಕರ್ ರವರ ಈ 4 ಶರತ್ತುಗಳು ಗಾಂಧೀಜಿಗೆ ಸರಿ ಕಾಣಲಿಲ್ಲ; ಆದ್ದರಿಂದ ಇಬ್ಬರ ಮಧ್ಯೆ ಭಿನ್ನತೆ ಉಂಟಾಯಿತು.

ಗಾಂಧೀಜಿಯ ದೃಷ್ಟಿಯಲ್ಲಿ ಅಂದು ಸ್ವಾತಂತ್ರ್ಯ ಮುಖ್ಯವಾಯಿತು. ಈ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಗೆ ಜಾತಿಯ ಪ್ರಶ್ನೆ ಒಡಕು ಉಂಟುಮಾಡುವ ಸಂಭವವಿರುತ್ತದೆ. ನಮಗೆ ಸ್ವಾತಂತ್ರ್ಯ ಬಂದ ನಂತರ ಈ ಅಂಶಗಳನ್ನು ಕೈಗೆತ್ತುಕೊಳ್ಳೋಣ ವೆಂಬ ಅಭಿಪ್ರಾಯಕ್ಕೆ ಗಾಂಧೀಜಿ ಬಂದಿದ್ದರು.

ಒಳ ಮೀಸಲಾತಿ ಕುರಿತಂತೆ ಅವರದ್ದೆ ಆದ ಸದಾಶಿವಯ್ಯ ವರದಿ ಕುರಿತಂತೆ ಹೆಚ್ಚಿಗೆ ವಿವಾದಕ್ಕೆ ಎಡೆಮಾಡಿಕೊಡದೆ, '6 ವರ್ಷಗಳ ಹಿಂದೆ ಸರ್ಕಾರಕ್ಕೆ ಸಲ್ಲಿಸಿದ್ದೇನೆ. ಯಾರದ್ದೋ ಟೇಬಲ್ ಮೇಲೆ ಇದೆ. ಸರ್ಕಾರಕ್ಕೆ ಜಾರಿಮಾಡುವ ಇಚ್ಛೆಯ ಆಧಾರದ ಮೇಲೆ ಅದರ ಅನುಷ್ಠಾನ ನಿಂತಿದೆ ' ಎಂದರು.

ಇಂದು ಸಂವಿಧಾನದ ಆಶಯಗಳು; ಸಾಮಾಜಿಕ ನ್ಯಾಯ ಸರ್ಕಾರದ ನೀತಿಗಳ ಜಾರಿಯ ಮೇಲೆ ಇವೆ. ಅಧಿಕಾರ, ಅಂತಸ್ತು ಶ್ರೀಮಂತಿಕೆಯ ಕೆಲವರ ಕೈಯಲ್ಲಿ ಧ್ರುವಿಕರಣವಾಗಿದೆ. ಸಂವಿಧಾನಾತ್ಮಕವಾಗಿ ತೊಡಗಿಸಿಕೊಂಡಾಗ ಮಾತ್ರ, ಪ್ರಗತಿ ಸಾಧ್ಯವೆಂದರು.

ಹಾವೇರಿ ವಿ.ವಿ. ಸ್ನಾತ್ತಕೋತ್ತರ ಪ್ರಾದ್ಯಾಪಕಿ ಡಾ: ಅನಸೂಯ ಕಾಂಬ್ಳೆ ಡಾ। ಬಿ.ಆರ್ ಅಂಬೇಡ್ಕರ್ ರವರು ಕಂಡ ಕನಸಿನ ಭಾರತ ಇಂದು ಯಾವ ದಿಕ್ಕಿನಲ್ಲಿ ಸಾಗುತ್ತಿದೆ. ಎಂದು ಎಳೆ ಎಳೆಯಾಗಿ ಬಿಚ್ಚಿಟ್ಟ ಡಾ। ಕಾಂಬ್ಳೆ ಸಂವಿಧಾನದ ಆಶಯಗಳು ಅನುಷ್ಠಾನಗೊಳ್ಳುತ್ತಿಲ್ಲ ಎಂಬ ಆತಂಕ ವ್ಯಕ್ತಪಡಿಸಿದರು. 'ಸಾಂಸ್ಕೃತಿಕ ರಾಜಕೀಯದ ಹೆಸರಿನಲ್ಲಿ ಆಡಳಿತ ಅರಾಜಕತೆಯತ್ತ ಸಾಗುತ್ತಿದೆ. ಅಂಬೇಡ್ಕರ್ ರವರಿಗೆ ಇದರ ಅರಿವಿತ್ತು ಅದಕ್ಕಾಗಿ ಅವರು ಭೌದ್ಧ ಧರ್ಮ ಸ್ವೀಕರಿಸಿದರು. ಬುದ್ಧ ಧಾರ್ಮಿಕ ಕ್ರಾಂತಿ ಮಾಡಿದ – ಸಾಮಾಜಿಕ ನ್ಯಾಯ ಒದಗಿಸಲು ಭೋದಿಸಿದ.

ದಲಿತರ ಮೇಲಿನ ದೌರ್ಜನ್ಯಗಳು, ಅಸ್ಪೃಶ್ಯತಾ –ತಾರತಮ್ಯಗಳ ಕುರಿತಂತೆ ಕಂಬಾಳಪಲ್ಲಿ, ಬಾಬ್ರಿದೇವಿ ಇಂತಹ ಪ್ರಕರಣಗಳ ಬಗ್ಗೆ ಕೋರ್ಟಿನ ತೀಪುಗಳನ್ನು ಗಮನಿಸಿದಾಗ, ತೀಪುಗಾರರು ಈ ಸಾಂಸ್ಕೃತಿಕ ರಾಜಕೀಯದಲ್ಲಿ ಮಿಂದು ಹೋಗಿರುವುದು ಸ್ಪಷ್ಟವಾಗುತ್ತದೆ ಎಂದರು.

ಪುಟ 10 ಕ್ಕೆ



JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**